

ಸಂಪುಟ 23 ಸಂಚಿಕೆ 34-35
ಸೆಪ್ಟೆಂಬರ್ 2, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಶಕ್ತಿರಂಗ





ವಾಜಪೇಯಿ

ನೀತಿ ಬದಲಿಸಿಕೊಳ್ಳಿ
ಇಲ್ಲವೇ
ತೊಲಗಿ

ಭಾರತದ
ಕಾರ್ಮಿಕ ಕಾನೂನು
ಸುಧಾರಣೆ
ಎತ್ತ ಏನು?

ಚೀನಾದಲ್ಲಿ ಕಾರ್ಮಿಕ ಕಾನೂನುಗಳು

ಬೆಂಗಳೂರಿನಲ್ಲಿ ಸಿಐಟಿಯು ಅಖಿಲ ಭಾರತ ಸಭೆ

ಕರ್ನಾಟಕದಲ್ಲಿ ಕಾಂಗ್ರೆಸ್ ಪರಾಭವ

ಹಿಂದಿನ ಚುನಾವಣೆಗೆ ಹೋಲಿಸಿದರೆ ಈ ಬಾರಿ ನಾವು 4000 ಸ್ಥಾನಗಳನ್ನು ಕಳೆದುಕೊಂಡರೂ ಗೆಲುವು ಮಹತ್ವದ್ದಾಗಿತ್ತು. ಮೂರು ಸ್ತರಗಳ ಪೈಕಿ ಒಂದೊಂದನ್ನೇ ಪ್ರತ್ಯೇಕವಾಗಿ ಗಮನಿಸುವಾಗ ಇದು ಸ್ಪಷ್ಟವಾಗುತ್ತದೆ.

ಎಡರಂಗ 27,692 ಗ್ರಾಮ ಪಂಚಾಯತಿ ಸ್ಥಾನಗಳನ್ನು ಗೆದ್ದುಕೊಂಡಿತು. ಸಿಪಿಐ(ಎಂ) ಸ್ಪರ್ಧಿಸಿದ 38;671 ಸ್ಥಾನಗಳಲ್ಲಿ 24,468ನ್ನು ಗೆದ್ದಿತು. ಅಂದರೆ ಶೇ. 63.2 ರಷ್ಟು ಸ್ಥಾನಗಳಲ್ಲಿ ಜಯಗಳಿಸಿತು.

ಜಿಲ್ಲಾ ಪರಿಷತ್ ಮಟ್ಟದಲ್ಲಿ ಎಡರಂಗವು ಕಾಂಗ್ರೆಸ್(ಐ)ಗಿಂತ 19 ಲಕ್ಷ ಹೆಚ್ಚು ಮತಗಳನ್ನು ಗಳಿಸಿತು. ನಾವು 86.53 ಲಕ್ಷ ಮತಗಳಿಸಿದೆವು. ವಾಸ್ತವವಾಗಿ ಸಿಪಿಐ(ಎಂ) ಒಂದೇ ಕಾಂಗ್ರೆಸ್(ಐ) ಪಡೆದದ್ದಕ್ಕಿಂತ ಹೆಚ್ಚಿನ ಮತಗಳನ್ನು ಗಳಿಸಿತು. ಸಿಪಿಐ(ಎಂ)ಗೆ ದೊರಕಿದ್ದು 72.11 ಲಕ್ಷ ಮತಗಳು.

ಎಡರಂಗ ಒಟ್ಟಾರೆಯಾಗಿ 34,355 ಸ್ಥಾನಗಳನ್ನು ಪಡೆಯಿತು. ಇದು ಶೇಕಡ 66.8 ಆಗಿದೆ. ಸಿಪಿಐ(ಎಂ) ಒಂದೇ ಶೇ. 60.14ರಷ್ಟು, ಅಂದರೆ 30,005 ಸ್ಥಾನಗಳಲ್ಲಿ ಗೆದ್ದಿತು. ಕಾಂಗ್ರೆಸ್(ಐ) 17,533 ಸ್ಥಾನಗಳನ್ನು (ಶೇ. 33.77) ಪಡೆಯಿತು. ಗ್ರಾಮಪಂಚಾಯತಿ ಮಟ್ಟಗಳಲ್ಲಿ ಕಾಂಗ್ರೆಸ್ ಸ್ಪರ್ಧಿಸಿದ 42,268 ಸ್ಥಾನಗಳಲ್ಲಿ ಕೇವಲ 17,533ರಲ್ಲಿ ಗೆದ್ದಿತು. ಯಶಸ್ಸಿನ ದರದ ಪ್ರಮಾಣದಲ್ಲಿ ಸಿಪಿಐ(ಎಂ) ಭಾರೀ ಮುಂದೆ ಇತ್ತು. ಎಡರಂಗ ಸ್ಪರ್ಧಿಸಿದ 3293 ಪಂಚಾಯತಿಗಳ ಪೈಕಿ 2278 ಪಂಚಾಯತಿಗಳಲ್ಲಿ ಸ್ಪಷ್ಟ ಬಹುಮತ ಪಡೆಯಿತು. ಸಿಪಿಐ(ಎಂ) 1907 ಪಂಚಾಯತಿಗಳಲ್ಲಿ ಜಯಗಳಿಸಿತು.

ಫಲಿತಾಂಶ ಏನೇ ಇರಬಹುದು. ಈ ಚುನಾವಣೆ ಎಡಪಕ್ಷಗಳಲ್ಲಿ ಪೂರ್ಣ ಒಗ್ಗಟ್ಟು ಅಗತ್ಯ ಎಂಬುದನ್ನು ಇನ್ನೊಮ್ಮೆ ಸ್ಪಷ್ಟಪಡಿಸಿತು. ರಂಗದ ಕೆಲವು ಅಂಗಪಕ್ಷಗಳ ಮೊಂಡುತನದಿಂದಾಗಿ ಸಿಪಿಐ(ಎಂ) ಅನೇಕ ಸ್ಥಾನಗಳಲ್ಲಿ ಸೋಲನುಭವಿಸಬೇಕಾಯಿತು. ಕಾಂಗ್ರೆಸ್(ಐ)ನ ಸ್ಥಾನಗಳ ಸಂಖ್ಯೆ 3000 ರಷ್ಟು ಹೆಚ್ಚಿತು. ರಂಗದ ಅಂಗಪಕ್ಷಗಳ ನಡುವಿನ ಸಂಘರ್ಷಕ್ಕೆ ಯಾವುದೇ ಸೂಕ್ತ ಕಾರಣವೇ ಇರಲಿಲ್ಲ.

ನಮ್ಮ ಕೆಲ ದೌರ್ಬಲ್ಯಗಳನ್ನು ನಾವು ಎತ್ತಿತೋರಿಸಿದೆವು. ಕೆಲವು ವಿಭಾಗಗಳು ಆತ್ಮ ಸಂತೃಪ್ತಿಯಿಂದ ಇದ್ದವು. ಕಾಂಗ್ರೆಸ್ ಪಕ್ಷ ಗೊಂದಲ ಹುಟ್ಟಿಸಲು ಇದನ್ನೇ ಬಳಸಿಕೊಂಡಿತು. ಜನರನ್ನು ಸರಿ ರೀತಿಯಲ್ಲಿ ವಿಶ್ವಾಸಕ್ಕೆ ತೆಗೆದುಕೊಳ್ಳುವಲ್ಲಿ ನಾಯಕತ್ವ ವಿಫಲವಾಯಿತು. ಸಂಘಟನಾತ್ಮಕ ದೌರ್ಬಲ್ಯಗಳು ಎದ್ದು ಕಾಣುತ್ತಿದ್ದವು.

1983ರ ಜನವರಿಯಲ್ಲಿ ತ್ರಿಪುರಾದಲ್ಲಿ ಎಡರಂಗ ಎರಡನೇ ಬಾರಿಗೆ ಅಧಿಕಾರಕ್ಕೆ ಮರಳಿತು. ನೃಪೇನ್ ಚಕ್ರವರ್ತಿ ಪುನಃ ಮುಖ್ಯಮಂತ್ರಿಯಾದರು. ನಮ್ಮ ಪ್ರಭಾವ ಬೆಳೆಯಲು ಇದು ನೆರವಾಯಿತು. ಕಾಂಗ್ರೆಸ್ (ಐ) ತ್ರಿಪುರಾದಲ್ಲಿ ಭಾರಿ ಅಪಪ್ರಚಾರ ನಡೆಸಿತು. ಅದು ಅದರ ಹತಾಶೆಯ ಪ್ರತೀಕವಾಗಿತ್ತು.

1983ರ ಜನವರಿಯಲ್ಲಿ ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷ ಧೂಳೀಪಟವಾಯಿತು. ಆಂಧ್ರಪ್ರದೇಶದಲ್ಲಿ 35 ವರ್ಷಗಳ ಕಾಂಗ್ರೆಸ್ ಏಕಾಧಿಪತ್ಯಕ್ಕೆ ಎನ್.ಟಿ. ರಾಮರಾವ್ ನೇತೃತ್ವದ ತೆಲುಗುದೇಶಂ ಇತಿಶ್ರೀ ಹಾಡಿತು. ಚುನಾವಣೆಗೆ ಕೇವಲ ಒಂಬತ್ತು ತಿಂಗಳ ಹಿಂದೆಯಷ್ಟೆ ರಾಮರಾವ್ ತೆಲುಗುದೇಶಂ ಪಕ್ಷವನ್ನು ಸ್ಥಾಪಿಸಿದ್ದರು. ಕರ್ನಾಟಕದಲ್ಲಿ ಜನತಾಪಕ್ಷ ಕ್ರಾಂತಿರಂಗ ಕೂಟದ ಅಡಿಯಲ್ಲಿ ಕಾಂಗ್ರೆಸ್ ಮುಖ್ಯಮಂತ್ರಿ ಗುಂಡೂರಾವ್ ಕೊಚ್ಚಿ ಹೋದರು. ರಾಮಕೃಷ್ಣ ಹೆಗಡೆ ಹೊಸ ಮುಖ್ಯಮಂತ್ರಿ ಆದರು. ಈ ಇಬ್ಬರೂ ಮುಖಂಡರೂ ರಾಷ್ಟ್ರಮಟ್ಟದಲ್ಲಿ ಪ್ರತಿಪಕ್ಷಗಳ ಒಗ್ಗಟ್ಟಿನ ಪ್ರಕ್ರಿಯೆಯ ಕೇಂದ್ರ ಬಿಂದುವಾಗಿದ್ದರು.

ಮಹಾನಗರ ಪಾಲಿಕೆ ಚುನಾವಣೆಗಳು

ಹೊಸದಾಗಿ ರಚಿತವಾದ ಹೌರಾ ಮಹಾನಗರ ಪಾಲಿಕೆಗೆ 1984 ಜುಲೈನಲ್ಲಿ ಚುನಾವಣೆ ನಡೆಯಿತು. ಒಟ್ಟು 50 ಸ್ಥಾನಗಳಲ್ಲಿ ಎಡರಂಗ 26 ರಲ್ಲಿ ಜಯಶಾಲಿಯಾಯಿತು. 1985 ರ ಜೂನ್ 30 ರಂದು ಕಲ್ಕತ್ತ ಮಹಾನಗರ ಪಾಲಿಕೆ ಚುನಾವಣೆ. ಕಾಂಗ್ರೆಸ್‌ನ ನೈತಿಕ ಸ್ಥೈರ್ಯ ಹೆಚ್ಚಾಗಿತ್ತು. ಜಾದವಪುರ ಮತ್ತು ಬೆಹಲಾ ಮೊದಲಾದ ಪ್ರದೇಶಗಳನ್ನು ಪಾಲಿಕೆ ವ್ಯಾಪ್ತಿಗೆ ಸೇರಿಸಿದ್ದಕ್ಕೆ ಕಾಂಗ್ರೆಸ್‌ನವರು ದೊಡ್ಡ ರಂಪ ಮಾಡಿದರು. 1972 ರಲ್ಲಿ ಕಲ್ಕತ್ತ ಪಾಲಿಕೆಯನ್ನು ವಿಸರ್ಜಿಸಿದ್ದು ಕಾಂಗ್ರೆಸ್ ನಂತರ ಅದಕ್ಕೆ ಚುನಾವಣೆಗಳನ್ನೇ ನಡೆಸಿರಲಿಲ್ಲ. 1977 ರಲ್ಲಿ ಎಡರಂಗ ಸರ್ಕಾರ ಹೊಸ ಮುನ್ಸಿಪಾಲ್ ನಿಯಮಗಳನ್ನು ರೂಪಿಸಿತು.

1980 ರಲ್ಲಿ ಅನುಷ್ಠಾನಕ್ಕೆ ಬಂದ ಈ ಹೊಸ ಕಾನೂನು 18 ವರ್ಷ ತುಂಬಿದವರಿಗೆ ಮತದಾನದ ಹಕ್ಕನ್ನು ನೀಡಿತು. ಕೊಳೆಗೇರಿಗಳಿಂದ ಒಕ್ಕಲೆಬ್ಬಿಸುವುದನ್ನು ಕಾನೂನು ಬಾಹಿರಗೊಳಿಸಲಾಯಿತು. ಕಾರ್ಪೊರೇಷನ್ ಚುನಾವಣೆಯನ್ನು ನಾವು ಒಂದು ಸವಾಲಾಗಿ ಸ್ವೀಕರಿಸಿದೆವು. 141 ಸ್ಥಾನಗಳ ಪೈಕಿ ರಂಗ 70 ರಲ್ಲಿ ಹಾಗೂ ಕಾಂಗ್ರೆಸ್ 67 ರಲ್ಲಿ ಗೆದ್ದಿತು. ಬಿಜೆಪಿ ಮತ್ತು ಪಕ್ಷೇತರರು ತಲಾ ಎರಡು ಸ್ಥಾನಗಳಲ್ಲಿ ಗೆದ್ದರು. ಪಕ್ಷೇತರರ ಪೈಕಿ ಒಬ್ಬರು ಎಡ ಸಹಾನುಭೂತಿಯುಳ್ಳವರು. ಬಹುಮತಕ್ಕೆ ನಮಗೆ ಒಂದು ಸ್ಥಾನ ಕಡಿಮೆ ಬಿದ್ದಿತ್ತು. ಎಡಪಂಥೀಯ ಸಹಾನುಭೂತಿ ಉಳ್ಳ ಪಕ್ಷೇತರ ಕಾರ್ಪೊರೇಟರ್ ನಮ್ಮನ್ನು ಬೆಂಬಲಿಸುವುದಾಗಿ ಘೋಷಿಸಿದರು. ಖ್ಯಾತ ವಕೀಲರು ಹಾಗೂ ಮಾಜಿ ಸಂಸತ್ ಸದಸ್ಯ ಕಮಲ್ ಬೋಸ್‌ರನ್ನು ಮೇಯರ್ ಸ್ಥಾನಕ್ಕೆ ಆಯ್ಕೆ ಮಾಡಿದೆವು.

ಗೆಲುವಿನ ಅಂತರ ಭಾರಿ ಹೇಳಿಕೊಳ್ಳುವಂಥದ್ದೇನೂ ಆಗಿರಲಿಲ್ಲವಾದರೂ ಕಾರ್ಪೊರೇಷನ್ ಚುನಾವಣೆಯೇ ಮಹತ್ವದ್ದಾಗಿತ್ತು. ವಾರ್ಡಗಳಲ್ಲಿ ಕೇವಲ 27 ವಾರ್ಡಗಳಲ್ಲಿ ಮಾತ್ರವೇ ನಮಗೆ ಕಾಂಗ್ರೆಸ್‌ಗಿಂತ ಹೆಚ್ಚು ಮತ ದೊರಕಿತ್ತು. ಕಾರ್ಪೊರೇಷನ್ ಚುನಾವಣೆಯಲ್ಲಿ ಎಡರಂಗವು ಕಾಂಗ್ರೆಸ್‌ಗಿಂತ ಕೇವಲ 19,814 ಕಡಿಮೆ ಮತಗಳನ್ನು ಗಳಿಸಿತು, 1984 ರ ಲೋಕಸಭೆ ಚುನಾವಣೆಯಲ್ಲಿ ಈ ಅಂತರ 3.8 ಲಕ್ಷ ಆಗಿತ್ತು.

ಕಾಮ್ರೇಡ್ ಸುಂದರಯ್ಯ ನಿಧನ

ಕಾಮ್ರೇಡ್ ಪಿ.ಸುಂದರಯ್ಯ 1985 ಮೇ 19 ರಂದು 73ನೇ ವಯಸ್ಸಿನಲ್ಲಿ ನಿಧನರಾದರು. 15 ದಿನಗಳ ಹಿಂದೆಯಷ್ಟೇ ಅವರನ್ನು ಚೆನ್ನೈನ ಆಸ್ಪತ್ರೆಯೊಂದಕ್ಕೆ ಸೇರಿಸಲಾಗಿತ್ತು.

40 ರ ದಶಕದಿಂದಲೂ ನಾನು ಕಾಂ. ಸುಂದರಯ್ಯನವರನ್ನು ಬಲ್ಲೆ. ಆದರೆ 1952 ರಲ್ಲಿ ನಾವು ನಿಕಟವರ್ತಿಗಳಾದೆವು. ಅವರ ಪತ್ನಿ ಲೀಲಾರನ್ನು ನಾನು ಬಲ್ಲೆ. ಸಿಪಿಐಎಂ) ಸ್ಥಾಪನೆಯ ಆರಂಭಿಕ ದಿನಗಳಲ್ಲಿ ಅವರಿಬ್ಬರೂ ಕಲ್ಕತ್ತದಲ್ಲಿ ವಾಸಿಸುತ್ತಿದ್ದರು. ಕಾಂ. ಲೀಲಾ ಚೆನ್ನಾಗಿ ಬಂಗಾಳಿಯ್ಯು ಮಾತನಾಡುತ್ತಿದ್ದರು.

ಕಾಂ.ಪಿ.ಎಸ್. 1978 ರವರೆಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಆಗಿದ್ದರು. ಆ ವರ್ಷ ಏಪ್ರಿಲ್ 2 ರಿಂದ 8 ರವರೆಗೆ ಜಲಂಧರ್‌ನಲ್ಲಿ ನಡೆದ ಮಹಾಧಿವೇಶನದಲ್ಲಿ ಕಾಂ. ಇ.ಎಂ.ಎಸ್. ಪ್ರಧಾನ ಕಾರ್ಯದರ್ಶಿಯಾದರು. ಕಾಂ. ಪಿ.ಎಸ್. ಪಕ್ಷದ ಆಂಧ್ರಪ್ರದೇಶದ ಘಟಕಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡಿದ್ದರು.

ಪಕ್ಷದ ಪೂರ್ಣಕಾಲದ ಕಾರ್ಯಕರ್ತರಿಗಾಗಿ 'ಲೆವಿ ಪದ್ಧತಿ'ಯನ್ನು ಆರಂಭಿಸಿದವರೇ ಕಾಮ್ರೇಡ್ ಪಿ.ಎಸ್. ಇದರಲ್ಲಿ ಕಾಮ್ರೇಡ್ ಪ್ರಮೋದ್ ದಾಸ್ ಗುಪ್ತಾ ಕೂಡ ದೊಡ್ಡ ಪಾತ್ರವನ್ನು ವಹಿಸಿದರು. ಸುಂದರಯ್ಯ ತಮ್ಮ ಜತೆ ಒಂದು ಡೈರಿ ಇಟ್ಟುಕೊಳ್ಳುತ್ತಿದ್ದರು. ಅದರಲ್ಲಿನ ಬರಹ-ಟಿಪ್ಪಣಿಗಳು ತುಂಬಾ ಆಸಕ್ತಿದಾಯಕ. ಅವರೊಬ್ಬ ಭಾಷಾ ತಜ್ಞರಾಗಿದ್ದರು. ನಮ್ಮ ದೇಶದ ಇತಿಹಾಸ ಹಾಗೂ ಭೌಗೋಳಿಕ ಸ್ಥಿತಿಗತಿ ಬಗೆಗಿನ ಅವರ ಜ್ಞಾನ ನಂಬಲಸಾಧ್ಯವಾಗಿತ್ತು. ಬಂಗಾಳದ ಬೌಗೋಳಿಕ ಸ್ಥಿತಿ ಬಗ್ಗೆ ನಮಗಿಂತ ಅವರಿಗೆ ಹೆಚ್ಚು ಗೊತ್ತಿತ್ತು!. ಅವರೊಬ್ಬ ನಿಷ್ಪೃಹವಾದಿಯಾಗಿದ್ದರು. 1985 ರ ಮೇ 28 ನ್ನು ನಾವು ಕಲ್ಕತ್ತದಲ್ಲಿ 'ಸುಂದರಯ್ಯ ದಿನ'ವನ್ನಾಗಿ ಆಚರಿಸಿದೆವು. ಶ್ರದ್ಧಾಂಜಲಿ ಅರ್ಪಿಸಿದೆವು.

ಪಂಜಾಬ್ ಮತ್ತು ಅಸ್ಸಾಂ ಒಪ್ಪಂದಗಳು

1985 ರ ಮಧ್ಯಭಾಗದಲ್ಲಿ ಪಂಜಾಬ್ ಮತ್ತು ಅಸ್ಸಾಂ ಒಪ್ಪಂದಗಳು ದೇಶದ ರಾಷ್ಟ್ರೀಯ ರಾಜಕೀಯ ರಂಗದಲ್ಲಿ ಬಿರುಗಾಳಿ ಎಬ್ಬಿಸಿದವು. 1985 ಜುಲೈ 24 ರಂದು ರಾಜೀವ ಗಾಂಧಿ ಮತ್ತು ಸಂತ ಹರಚಂದ್ ಸಿಂಗ್ ಲೋಂಗೋವಾರ ನಡುವೆ ಆದ ಪಂಜಾಬ್ ಒಪ್ಪಂದ ಶ್ಲಾಘನೀಯವಾದರೂ ಅದು ತುಂಬಾ ವಿಳಂಬದ ಕ್ರಮವಾಗಿತ್ತು.

(ಮುಂದುವರಿಯುವುದು)

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 75

ಹಿಂದಿನ ಸಂಚಿಕೆಯಲ್ಲಿ ಇಂದಿರಾಗಾಂಧಿ ಹತ್ಯೆ ಸಿಖ್ಖರ ಮಾರಣಹೋಮ, ಅನುಕಂಪದ ಅಲೆಯಲ್ಲಿ ಕಾಂಗ್ರೆಸ್ ಈ ಓದಿರುವಿರಿ. ಈ ಸಂಚಿಕೆಯಲ್ಲಿ 1983 ರಲ್ಲಿ ತ್ರಿಪುರಾದಲ್ಲಿ 2ನೇ ಬಾರಿಗೆ ಎಡರಂಗ ಅಧಿಕಾರಕ್ಕೆ, ಕರ್ನಾಟಕ, ಆಂಧ್ರದಲ್ಲಿ ಕಾಂಗ್ರೆಸ್ ಧೂಳಿಪಟ, ಪ.ಬಂಗಾಳದಲ್ಲಿ 18 ವರ್ಷದವರಿಗೆ ಮತದಾನದ ಹಕ್ಕು, ಕಾಮ್ರೇಡ್ ಸುಂದರಯ್ಯನವರ ನಿಧನ ಈ ಬಗ್ಗೆ ಓದಿ

ಜಾತಿ ದಮನವು ವಿಶ್ವ ಸಂಸ್ಥೆ ಸಮ್ಮೇಳನದಲ್ಲಿ ಒಂದು ವಿಷಯ ಸೂಚಿಯಾಗಿರಬೇಕು

ಆಗಸ್ಟ್ 31ರಂದು ದಕ್ಷಿಣ ಆಫ್ರಿಕಾದ ದರ್ಬಾನ್‌ನಲ್ಲಿ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಆಯೋಗದ ಆಶ್ರಯದಲ್ಲಿ ಜಾಗತಿಕ ಸಮ್ಮೇಳನವು ಜರುಗಲಿದೆ. **"ಜನಾಂಗ, ಜನಾಂಗೀಯ ತಾರತಮ್ಯ, ದ್ವೇಷ (xenophobia) ಮತ್ತು ಅಸಹನೆ ಕುರಿತು ಜಾಗತಿಕ ಸಮ್ಮೇಳನ"** ಎಂದು ಇದಕ್ಕೆ ಹೆಸರು. ಜಗತ್ತಿನ ಹೆಚ್ಚಿನ ದೇಶಗಳಿಂದ ಪ್ರತಿನಿಧಿಗಳು ಆಗಮಿಸಿ ಈ ಕುರಿತು ದೀರ್ಘ ಚರ್ಚೆ ನಡೆಸಿ, ಪರಿಹಾರ ಮಾರ್ಗಗಳನ್ನು ಸೂಚಿಸಲಿದ್ದಾರೆ.

ಈ ಸಮ್ಮೇಳನದಲ್ಲಿ 'ಜಾತಿ ದಮನ'ವನ್ನು ಕೂಡಾ ಅಜೆಂಡಾವಾಗಿ ಕೈಗೆತ್ತಿಕೊಳ್ಳಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಆಗ್ರಹಿಸಿದೆ. ಹಾಗೆಯೇ ಹಲವಾರು ದಲಿತ ಸಂಘಟನೆಗಳು, ಪ್ರಜಾಸತ್ತಾತ್ಮಕ ಸಂಘಟನೆಗಳು ಕೇಂದ್ರ ಸರಕಾರವನ್ನು ಒತ್ತಾಯಿಸಿವೆ.

ಆದರೆ ಮನುವಿನ, 'ವರ್ಣಾಶ್ರಮ ಧರ್ಮ'ವನ್ನು ಪ್ರತಿಪಾದಿಸುವ ಬಿಜೆಪಿ ನೇತೃತ್ವದ ಕೇಂದ್ರ ಸರಕಾರಕ್ಕೆ ಇದೊಂದು ಮಹತ್ವದ ವಿಷಯವಲ್ಲ. ಕೇಂದ್ರ ಸರಕಾರದ ಪ್ರಕಾರ ಜಾತಿ ದಮನ, ತಾರತಮ್ಯ ಇತ್ಯಾದಿ ಅಂಶಗಳನ್ನು ಜನಾಂಗೀಯ ತಾರತಮ್ಯದ ಸಮ್ಮೇಳನದಲ್ಲಿ ಚರ್ಚಿಸಲು ಸಾಧ್ಯವಿಲ್ಲ. ಅವರ ಪ್ರಕಾರ, 'ಜಾತಿ ವ್ಯವಸ್ಥೆ ಭಾರತಕ್ಕೆ ಸೀಮಿತವಾದುದು ಆದುದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಇದನ್ನು ಚರ್ಚಿಸುವುದು ಸೂಕ್ತವಲ್ಲ". ವರ್ಣಾಶ್ರಮ ಧರ್ಮದ ಪ್ರಕಾರ ಸೃಷ್ಟಿಕರ್ತನು "ತನ್ನ ಬಾಯಿಂದ ಬ್ರಾಹ್ಮಣರನ್ನು, ತೋಳುಗಳಿಂದ ಕ್ಷತ್ರಿಯರನ್ನು, ತೊಡೆಗಳಿಂದ ವೈಶ್ಯರನ್ನೂ, ಹಾಗೂ ಪಾದಗಳಿಂದ ಶೂದ್ರರನ್ನು ಸೃಷ್ಟಿಸಿದ". ಅಂದರೆ ನಾಲ್ಕು ವರ್ಣಗಳ ತತ್ವವು ಅಸಮಾನತೆಯ ತತ್ವದ ತಳಹದಿಯ ಮೇಲೆ ರಚಿತವಾಗಿದ್ದು, ಇದನ್ನು ಜಾರಿಗೊಳಿಸಬೇಕೆಂದು ಬಯಸುವ ಆರ್.ಎಸ್.ಎಸ್. ಹಿಡಿತದ ಬಿಜೆಪಿ ಸರಕಾರದಿಂದ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ?

ಅದೇ ಸಂದರ್ಭದಲ್ಲಿ ದರ್ಬಾನ್‌ನಲ್ಲಿ ನಡೆಯುವ ಜಾಗತಿಕ ಸಮ್ಮೇಳನದಲ್ಲಿ ಜಾತಿ ದಮನ, ತಾರತಮ್ಯವನ್ನು ವಿಷಯ ಸೂಚಿಯಾಗಿ ಕೈಗೆತ್ತಿಕೊಳ್ಳಬೇಕೆಂದು ಒತ್ತಾಯ ಪಡಿಸಬೇಕಾಗಿದೆ. ಅಂತೆಯೇ ಆರ್ಥಿಕ ಅಸಮಾನತೆಯ ವಿರುದ್ಧ ನಡೆಯುವ ಹೋರಾಟದಲ್ಲಿ ಜನರನ್ನು ಒಂದೆಡೆಸೇರಿಸುತ್ತಾ ಹಳ್ಳಿ ಹಳ್ಳಿಗಳಲ್ಲಿ ಆಚರಿಸಲಾಗುತ್ತಿರುವ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯದ ವಿರುದ್ಧ ದನಿ ಎತ್ತಬೇಕಾಗಿದೆ. ○

ಏಜೆನ್ಸಿದಾರರ ಗಮನಕ್ಕೆ

ಏಜೆನ್ಸಿದಾರರು ತಮ್ಮ ಬಾಕಿಗಳನ್ನು ಕೂಡಲೇ ಸಂದಾಯಿಸತಕ್ಕದ್ದು. ಈ ಬಾಕಿಗಳು ಪತ್ರಿಕೆ ಪ್ರಕಟಣೆಗೂ ಅಡಚಣೆ ತರುತ್ತದೆಯೆಂದು ಗಮನಿಸಿ. ದುಡಿವ ಜನರ ಪ್ರಾಣಮಿತ್ರನ ಸತತ ಪ್ರಕಟಣೆಗೆ ನಿಮ್ಮ ಕೊಡುಗೆ ಇದೆ ಎಂಬುದು ನೆನಪಿರಲಿ.

- ಸಂ.

ಶಿಕ್ಷಣದ ಮಾರಾಟಕ್ಕೆ ಮುಕ್ತ ಅವಕಾಶ

ಎಸ್.ಎಂ.ಕೃಷ್ಣರವರ ಸರ್ಕಾರ ಮತ್ತೇ ರಾಜ್ಯದಲ್ಲಿ ಎಂಟು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಅನುಮತಿ ನೀಡಿದೆ. ಇದರಲ್ಲಿ 'ಮಾಹಿತಿ ತಂತ್ರಜ್ಞಾನ' ಕೋರ್ಸ್‌ಗಳಿಗೆ ಆದ್ಯತೆ ಎಂದು ಹೈಟೆಕ್ ಮಾನವಂತರು ಹೇಳಿಕೊಂಡಿದ್ದು ತಲಾ 60 ಸೀಟುಗಳು ಲಭ್ಯವಂತೆ. ಈಗಾಗಲೇ ರಾಜ್ಯದಲ್ಲಿ ಒಟ್ಟು 81 ತಾಂತ್ರಿಕ ಕಾಲೇಜುಗಳಿದ್ದು, ಈ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೇರಿದ ಅವಧಿಯಲ್ಲಿ 29 ಹೊಸ ಕಾಲೇಜ್‌ಗಳಿಗೆ ಅನುಮತಿ ನೀಡಿದೆ. ಈಗಿನ ಎಂಟೂ ಕಾಲೇಜ್‌ಗಳೂ ಶಿಕ್ಷಣ ದಂಧೆಯಲ್ಲೇ ಕೋಟ್ಯಾಂತರ ಹಣ ಸುಲಿಯುವ, ಪ್ರತಿಷ್ಠಿತ ಸಂಸ್ಥೆಗಳಾದ ಅಲ್‌ಅಮೀನ್, ಆಲ್ವಾ, ಆದಿಚುಂಚನಗಿರಿ ಮಠಾಧೀಶ, ಮಂಗಳೂರಿನ ನಿಟ್ಟೆ ಮುಂತಾದ ಕುಖ್ಯಾತರಿಗೆ.

ಶಿಕ್ಷಣವನ್ನು ತನ್ನ ಹೊಣೆಗಾರಿಕೆಯಿಂದ ಕೈಬಿಟ್ಟ ವಿಶ್ವಬ್ಯಾಂಕ್‌ನ ಗುಲಾಮಿ ನೀತಿಯ ಕೃಷ್ಣಾ ಸರ್ಕಾರ, ಖಾಸಗೀಯವರು ವಿದ್ಯಾರ್ಥಿ ಪಾಲಕರನ್ನು ಮನಬಂದಂತೆ ಹಣ ಸುಲಿಯಲು ಮತ್ತೆ ಶಿಕ್ಷಣ ಮಾರಾಟದ ವ್ಯಾಪಾರಕ್ಕೆ ಪೂರ್ಣ ಅನುವು ನೀಡಿದೆ. ಈ ಮೂಲಕ ಶಿಕ್ಷಣದ ಕನಸು, ಪ್ರತಿಭೆಯಿದ್ದರೂ ಹಣ ಕಕ್ಕಲಾಗದೇ ತಿರಸ್ಕಾರಕ್ಕೆ ಒಳಗಾಗುವ ಸನ್ನಿವೇಶವನ್ನು ಬಹಳಷ್ಟು ಕರ್ನಾಟಕದ ವಿದ್ಯಾರ್ಥಿಗಳ ಪಾಲಿಗೆ ದಕ್ಕಿದೆ. ಇಷ್ಟೆಲ್ಲಾ ಕಾಲೇಜ್‌ಗಳಿರುವಾಗ ಮತ್ತೇ ಏಕೆ ಎಂಬ ಪ್ರಶ್ನೆಗೆ ಬೇಡಿಕೆ ಇದೆ ಅದಕ್ಕಾಗಿ ಕೊಟ್ಟಿದ್ದೇವೆ ಎಂದು ಏನೊಂದೂ ಅಳುಕು ಇಲ್ಲದೇ ಸಮಾಜ ಕಲ್ಯಾಣ ಸಚಿವ ಸಮಾಜವಾದಿ(?) ಕಾಗೋಡು ತಿಮ್ಮಪ್ಪ ಹೇಳಿರುವುದು ಸರಕಾರ ತಲುಪಿರುವ ನಾಚಿಕೆಗೇಡಿನ ಹಂತದ ಸೂಚಕ. ಜಾತಿ, ಮತೀಯ, ಹಣದ ದಂಧೆಖೋರರಿಗೆ ಮಣಿದಿರುವುದು, ಈ ವ್ಯವಹಾರದಲ್ಲಿ ಎಷ್ಟೋ ಕೋಟಿಗಳು ಭ್ರಷ್ಟತೆ ನಡೆದಿರುವುದು ಸ್ಪಷ್ಟ.

ನಂಬರ್ ಒನ್ ಎಂಬ ಬೋಗಸ್ ಸರ್ವೆ

ಭಾರತದ ನಂಬರ್ ಒನ್ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಎಂಬ ಸುದ್ದಿ ಕೇಳಿದ ಜನ ಬಿದ್ದು ಬಿದ್ದು ನಕ್ಕರಂತೆ. ಇಂತಹ ಹಾಸ್ಯಭರಿತ ಲೇಖನ ಪ್ರಕಟಿಸಿದ 'ಇಂಡಿಯಾ ಟುಡೇ' ಎಂಬ ಡೌಲು ಪತ್ರಿಕೆಯನ್ನು ಇಂದು ಇಂಡಿಯಾ ಟುಡೇನೇ ಅಥವಾ ಮಂಡೇ ಟುಡೇನೇ ಎಂದು ಕೆಣಕಿದರಂತೆ. ತಮಗೆ ಸಲ್ಲಿಸಬೇಕಾದ್ದು ಸಂದಾಯವಾದ ಮೇಲೆ ಯಾರೇನೋ ಅಂದುಕೊಂಡಲೂ ತಮಗೆ,ಸೋಂಕಿಲ್ಲ ಎಂದು ಮಾನ ಮರ್ಯಾದೆಗೆ ಅಂಜದ 'ಮಾರ್ಗ್' ಎಂಬ ಸಮೀಕ್ಷಕ ಸಂಸ್ಥೆ ಅಪ್ಪಟ ಕಾಸು ದಳ್ಳಾಳಿ ಸಂಹಿತೆಯನ್ನು ತಿರುವಿ ತಿರುವಿ ಓದ್ತಂತೆ. ಹೇಗೋ ಇರಲಿ ತಮ್ಮ ಇತ್ತೀಚಿನ ಮೆಸೇಜ್ ತಲುಪಿಸಬೇಕಾದಲ್ಲಿಗೆ ತಲುಪಿಸಿಯಾಯಿತಲ್ಲ ಎಂದು ಸೋನಿಯಾ ಮೇಡಂ ಮನೆಗೆ ಮ್ಯಾಗಝಿನ್ ಕಾಪಿ ತಲುಪಿದ್ದನ್ನು ಖಾತ್ರಿ ಮಾಡಿಕೊಂಡು ಕೃಷ್ಣ ಚಿಟಿಕೆ ಹೊಡೆಯುತ್ತಿರುವಾಗಲೇ ಭಿನ್ನಮತೀಯ ಕಾಂಗ್ರೆಸ್ ನಾಯಕರು ಬಂಡಾಯದ ಬಾವುಟವನ್ನು ಹೊರಗೆಳೆದು ಮತ್ತೆ ಮತ್ತೆ ಝಾಡಿಸಿಕೊಂಡು ಬೀದಿಗೆ ಇಳಿಯಲು ಸನ್ನದ್ಧರಾಗಿದ್ದಾರಂತೆ.

ಈ ಇಂಡಿಯಾ ಟುಡೇ ಮಾತ್ರವಲ್ಲ, ಬಹಳಷ್ಟು ಬೊಗಳೆ ಹೊಡೆದುಕೊಳ್ಳುವ ಇಂಡಿಯನ್ ಎಕ್ಸ್‌ಪ್ರೆಸ್, ಹಿಂದೂಸ್ತಾನ್ ಟೈಮ್ಸ್

ಕರ್ನಾಟಕ ಈ ವಾರ

ಒಂದು ನೋಟ

ಎಸ್.ವೈ. ಗುರುಶಾಂತ್

ಎಂಬ ಪತ್ರಿಕೆಗಳು ದೆಹಲಿ ಆವೃತ್ತಿಯಲ್ಲಿ ಕೃಷ್ಣ ಜನಸಾಮನ್ಯರಿಗೆ ಸುಲಭವಾಗಿ ಸಿಕ್ಕುವ ಮುಖ್ಯಮಂತ್ರಿ ಎಂದು ಹೊಗಳಿವೆ ಎಂಬುದು.

ಕೃಷ್ಣ ಸರ್ಕಾರದ ನೀತಿಗಳು, ಆಡಳಿತ ವೈಖರಿ, ಖಾಸಗಿ ಧಣಿಗಳು ವಿಶ್ವಬ್ಯಾಂಕ್ ನಂತಹವರ ಮೇಲಿನ ಅಪಾರ ಮಮಕಾರ ನಾಡಿನ ಜನರ ಬಗೆಗಿನ ಕಡು ತಿರಸ್ಕಾರ, ಭ್ರಷ್ಟತೆಗಳನ್ನು ಬಲ್ಲವರು ದೇಶದಲ್ಲಿ ಕೃಷ್ಣನಿಗೆ ಸಲ್ಲಬೇಕಾದ ಸ್ಥಾನ ಹೇಳಬಲ್ಲರು. ಜನಸಾಮಾನ್ಯರಿಗಿರಲಿ ತನ್ನ ಸಹೋದ್ಯೋಗಿ ಸಚಿವರಿಗೇ ಸಿಗುವುದು ಕಷ್ಟವೆಂಬ ವರದಿಗಳಿವೆ.

ರಾಜ್ಯದಲ್ಲಿ ಭೀಕರ ಬರದಿಂದ ಜನ-ದನಕರುಗಳು

ಪುಟ 5 ಕ್ಕೆ

ಸಾಲದ ಕುಣಿಕೆಯಲ್ಲಿ ಸಾವಿನ ಕದ ತಟ್ಟಿದವರು

ಬಾವಿತೋಡಿಸಿದ ಸಾಲ ತೀರಿಸಲಾಗದೇ ಅದೇ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ರೈತನ ಧಾರುಣ ಘಟನೆ ರಾಯಚೂರು ಜಿಲ್ಲೆ ಮಸ್ಕಿಯಲ್ಲಿ ನಡೆದಿದೆ(21.8.2001). ಮುದಗಲ್ ಪೋಲೀಸ್ ಠಾಣೆ ವ್ಯಾಪ್ತಿಯ ಕನಸಾರಿ ಗ್ರಾಮದ ಮಹಾಂತಪ್ಪ(65) ಈ ರೈತನಾಗಿದ್ದಾನೆ. ಲಿಂಗಸೂರಿನ ಫಿಡರ್ಲ್ ಬ್ಯಾಂಕ್‌ನಲ್ಲಿ 60,000 ಸಾಲ ಪಡೆದಿದ್ದು ಅರ್ಧ ಸಾಲ ತೀರಿಸಿ, ಉಳಿದರ್ಧ ತೀರಿಸಲಾಗದೇ ಈ ಆತ್ಮಹತ್ಯೆಗೆ ಶರಣಾಗಿದ್ದಾನೆ.

ಇದೇ 18 ಆಗಸ್ಟ್ ರಂದು ರೈತ ಶರಣಯ್ಯ ಬೆಳೆಸಾಲ ತೀರಿಸಲಾಗದೇ ಸಾಲಗಾರರ ಕಾಟ ತಾಳದೆ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

- ಶಿವಮೊಗ್ಗದ ಶಿಕಾರಿಪುರದ ಮುಟ್ಟಿಕೋಟೆ ವಾಸಿ ಸಿದ್ದಲಿಂಗಪ್ಪ (36) ಎಂಬ ರೈತ ಸಾಲ ತೀರಿಸಲಾಗದೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆತನಿಗೆ ಒಟ್ಟು 32 ಸಾವಿರ ಕೃಷಿ ಸಾಲವಿದ್ದು ಕಂದು ಹುಳುವಿನ ರೋಗದಿಂದ ಬೆಳೆ ನಾಶವಾಗಿದ್ದರಿಂದ ದಿಕ್ಕು ಕಾಣದೇ ಕಂಗಾಲಾಗಿ ಆತ್ಮಹತ್ಯೆಗೆ ಈಡಾಗಿದ್ದಾನೆ.
- ದ.ಕನ್ನಡದ ಸುಬ್ರಹ್ಮಣ್ಯ(ಮಂಗಳೂರು)ದ ಬಳಿ ಏನೆಕಲ್ಲು ಎಂಬ ಗ್ರಾಮದ ಲೋಕಯ್ಯ ಗೌಡ(35) ವಿಷ ಸೇವಿಸಿ ಆಗಸ್ಟ್ 16 ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆತನಿಗೆ ಕೃಷಿ ಸಾಲ ಪ್ರತಿವರ್ಷವೂ ತೀರಿಸಲಾಗದೇ ಸಾವಿಗೆ ಮೊರೆ ಹೋಗಿದ್ದಾನ.
- ನಂಜನಗೂಡು ತಾಲೂಕಿನ ಕೂಡ್ಲಪುರ ವಾಸಿ ಮಹದೇವಪ್ಪ(50) ಎಂಬ ಕಬ್ಬು ಬೆಳೆಗಾರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. 2 ಎಕರೆ ಜಮೀನಿನಲ್ಲಿ ಕೊಳವೆಬಾವಿ ತೆಗೆಸಲು ಧಣಿಗಳ ಬಳಿ ಸಾಲ ಮಾಡಿದ್ದ. ಬ್ಯಾಂಕಿನ ಸಾಲಕ್ಕೆ ಅರ್ಜಿ ಹಾಕಿದ್ದ. ಏನೇನೋ ನೆಪಗಳಿಂದ ಸಾಲ ಮಂಜೂರು ಮಾಡಲು ಬ್ಯಾಂಕಿನವರು ವಿಳಂಬ ಮಾಡಿದ್ದರಿಂದ (ವರ್ಷಗಳು) ಸಾಲಗಾರರ ಕಾಟ ತಾಳದೇ ಆತ್ಮಹತ್ಯೆಗೀಡಾಗಿದ್ದಾನೆ.

ಇವು ಬೆಳಕಿಗೆ ಬಂದ ರೈತರ ಆತ್ಮಹತ್ಯೆಗಳು... ಕೊಲೆಗಳು.

ರೈತರ ದಿಢೀರ್ ಪ್ರತಿಭಟನೆ : ಶಾಕ್ ಹೊಡೆಸಿಕೊಂಡ ವಿದ್ಯುತ್ ಮಂಡಳಿ

ಕರ್ನಾಟಕದಲ್ಲಿ ರೈತರ ಪರಿಸ್ಥಿತಿ ಹಿಂದೆಂದಿಗಿಂತಲೂ ಶೋಚನೀಯಗೊಂಡಿದೆ, ಪ್ರತಿನಿತ್ಯವೂ ರಾಜ್ಯದ ಯಾವುದಾದರೊಂದು ಮೂಲೆಯಲ್ಲಿ, ಅನ್ನದಾತನೆಂದು ಕರೆಸಿಕೊಂಡ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಆಳುವ ಕೇಂದ್ರ - ರಾಜ್ಯ ಸರ್ಕಾರಗಳು ಆತನನ್ನು ಆತ್ಮಹತ್ಯೆಯ ಮಟ್ಟಕ್ಕೆ ತಲುಪಿ ಪರೋಕ್ಷವಾಗಿ ಕೊಲೆ ಮಾಡುತ್ತಿವೆ. ಇಂತಹ ಕೊಲೆಯ ಮುಂದುವರಿಕೆಯ ಭಾಗವಾಗಿ ರೈತರನ್ನು ಸಾಮೂಹಿಕವಾಗಿ ಮುಗಿಸಲು ರಾಜ್ಯ ಸರ್ಕಾರವು ತನ್ನ ವಿದ್ಯುತ್ ಮಂಡಳಿಗಳ ಮೂಲಕ ಹವಣಿಸುತ್ತಿದೆ.

ಐಎಂಎಫ್-ವಿಶ್ವಬ್ಯಾಂಕುಗಳು ಗುಲಾಮನಂತೆ ವರ್ತಿಸುತ್ತಿರುವ ರಾಜ್ಯ ಸರ್ಕಾರವು, ಅವುಗಳ ನಿರ್ದೇಶನದಂತೆ ರೈತರ ಸಮಾಧಿಯ 'ಮೇಲೆ ತಾಂಡವ ನೃತ್ಯ ಮಾಡುತ್ತಿದೆ. ಈಗಾಗಲೇ ಸಾವಿನ ದಾರಿಯಲ್ಲಿರುವ ರೈತರನ್ನು ಕೃಷಿ ಪಂಪುಗಳಿಗೆ ವಿದ್ಯುತ್ ಮೀಟರ್ ಅಳವಡಿಸುವುದು, ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಿಸುವುದು, ಹಳೇಬಾಕಿಗಳ ಹೆಸರಿನಲ್ಲಿ ಲಕ್ಷಾಂತರ ರೂ ವಿಧಿಸುವುದು ಮುಂತಾದ ಕ್ರಮಗಳ ಮೂಲಕ ರೈತರ ಮರಣ ಶಾಸನ ಬರೆಯುತ್ತಿದೆ.

ಇಂದು ಕರ್ನಾಟಕ ರಾಜ್ಯದಲ್ಲಿ ಲಕ್ಷಾಂತರ ರೈತರು ತಮ್ಮ ಸ್ವಂತ ಬಂಡವಾಳ ತೊಡಗಿಸಿ ಕೊಳವೆ ಬಾವಿ ಹಾಕಿಸಿಕೊಂಡು ಬರುವ ಅಲ್ಪ ನೀರಿನಲ್ಲೇ ಕೃಷಿ ನಡೆಸುತ್ತಿದ್ದಾರೆ. ಬೃಹತ್ ಉದ್ಯಮ ಪತಿಗಳು ವಿದ್ಯುತ್ ಕದಿಯುವುದಕ್ಕೆ ಕುರುಡಾಗಿ ಅವರಿಗೆ ರಿಯಾಯಿತಿಗಳ ಸರಮಾಲೆಗಳನ್ನೆಲ್ಲಾ ನೀಡುವ ರಾಜ್ಯ ಸರ್ಕಾರದ ಕಣ್ಣು ಈಗ ಈ ಬಡ ಮಧ್ಯಮ ರೈತರ ಮೇಲೆ ಬಿದ್ದಿದೆ. ಈ ವಕ್ರದೃಷ್ಟಿಗೆ ಗುರಿಯಾದ ರೈತರು ಹಳೆಯ ಬಾಕಿ ಹೆಸರಿನಲ್ಲಿ ಸಾವಿರಾರು ರೂಪಾಯಿಗಳ ಬಾಕಿ ಪಾವತಿಸಲು ಆದೇಶ ಪಡೆದುಕೊಂಡಿದ್ದಾರೆ, ಮತ್ತು ಇವರಿಗೆ ಮೀಟರು ಅಳವಡಿಸಿ ಯುನಿಟ್ ಆಧಾರದಲ್ಲಿ ಕರ ವಸೂಲಿಮಾಡಲು ಯೋಜಿಸಲಾಗುತ್ತಿದೆ. ವಿದ್ಯುತ್ ವಲಯವನ್ನು ಹಂತ; ಹಂತವಾಗಿ ಖಾಸಗಿ ಕೈಗಳಿಗೊಪ್ಪಿಸುವ ವ್ಯವಸ್ಥಿತ ಪಿತೂರಿ ಈಗಾಗಲೇ ಆರಂಭಗೊಂಡಿದೆ.

ಈ ಪಿತೂರಿಯ ಸುಳಿವು ಸಿಕ್ಕೊಡನೆಯೇ ರೈತರನ್ನು ಸಂಘಟಿಸಿ ಅವರನ್ನು ಹೋರಾಟಕ್ಕಿಳಿಸಿದ್ದು ಕರ್ನಾಟಕ ಪ್ರಾಂತ ರೈತ ಸಂಘ ಕೆ.ಪಿ.ಟಿ.ಸಿ.ಎಲ್‌ಗೆ ಮುತ್ತಿಗೆ, ರಾಜ್ಯವಿದ್ಯುತ್ ರಸ್ತೆ ತಡೆ ಹೋರಾಟ ಹೀಗೆ ಅನೇಕ. ಕೊನೆಗೆ ವಿದ್ಯುತ್ ಬೆಲೆಯನ್ನು ಮನಸೋಇಚ್ಛೆ ಏರಿಸಲು ನಿರ್ಧರಿಸಿದಾಗ ಕೂಡ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದೆದುರು ಅಫಿಡೆವಿಟ್ ಸಲ್ಲಿಸಿ ವಾದ ನಡೆಸಿದ್ದು ಕೂಡ ಕರ್ನಾಟಕ ಪ್ರಾಂತ ರೈತ ಸಂಘವೇ.



ಸಂಚು ವಿಫಲಗೊಳಿಸಿದ ಪ್ರತಿಭಟನೆ

ಒಟ್ಟಾರೆ ರಾಜ್ಯಾದ್ಯಂತ ಮೂಡಿಬಂದ ಹೋರಾಟಗಳ ಫಲವಾಗಿ ರಾಜ್ಯ ಸರ್ಕಾರ ಮತ್ತು ಕೆ.ಪಿ.ಟಿ.ಸಿ.ಎಲ್ ತನ್ನ ಯೋಜಿತ ದಾರಿಯಲ್ಲಿ ಸಾಗಲು ಅಡಚಣೆಯನ್ನೆದುರಿಸಬೇಕಾಯಿತು. ಕೆಲವು ಬದಲಾವಣೆಗಳನ್ನು ಘೋಷಿಸಬೇಕಾಯಿತು.

ಈ ಹಿನ್ನೆಲೆಯಲ್ಲಿ ಕೆ.ಪಿ.ಟಿ.ಸಿ.ಎಲ್ ಮತ್ತು ಕೆ.ಇ.ಆರ್.ಸಿಗಳು ಸಾರ್ವಜನಿಕ ಅಭಿಪ್ರಾಯ ಮೂಡಿಸುವ ಮತ್ತು ಜನರ ಅಭಿಪ್ರಾಯವನ್ನು ಪಡೆದು ಸುಧಾರಣೆ, ಬೆಲೆ ನಿಗದಿ ಜಾರಿಗೊಳಿಸುತ್ತೇವೆ ಎನ್ನುವ ನಾಟಕ ಆರಂಭಿಸಿವೆ. ಈನಾಟಕದ ಭಾಗವಾಗಿ ಕರ್ನಾಟಕ ರಾಜ್ಯ ವಿದ್ಯುತ್ ನಿಯಂತ್ರಣಾ ಆಯೋಗದಡಿಯಲ್ಲಿ ದಿ. 19,20 ಆಗಸ್ಟ್ 2001ರ ಎರಡು ದಿನಗಳ ಕಾಲ ಕಮ್ಮಟವೊಂದು ಜರುಗಿತು. **ರೈತರ ಅಹವಾಲುಗಳು, ಸಲಹೆಗಳನ್ನು ಕೇಳಿ ನೀತಿರೂಪಿಸುತ್ತೇವೆಂದಿದ್ದವರು ರೈತರ ಪರವಾಗಿ ಮಾತನಾಡುತ್ತಿದ್ದ, ಹೋರಾಡುತ್ತಿದ್ದ ಪ್ರಾಂತ ರೈತ ಸಂಘಕ್ಕೆ ಯಾವ ಮಾಹಿತಿಯನ್ನು ನೀಡದೇ ಕೇವಲ ಇಲಾಖಾ ಅಧಿಕಾರಿಗಳು, ತಮಗೆ ಬೇಕಾದವರನ್ನೇ ಸೇರಿಸಿಕೊಂಡು ಕಮ್ಮಟ ನಡೆಸಿ ಅಲ್ಲಿ ಬರುವ ಸಲಹೆ ಸೂಚನೆಗಳನ್ನು ರೈತರ ಮೇಲೇರಲು ಸಂಚು ನಡೆಸಿದ್ದರು.**

ಇದರ ಸುಳಿವರಿತ ಪ್ರಾಂತ ರೈತ ಸಂಘ ತಕ್ಷಣವೇ ತನ್ನ ಕಾರ್ಯಕರ್ತರೊಡನೆ ಕಮ್ಮಟ ನಡೆಯುತ್ತಿದ್ದ ಸ್ಥಳಕ್ಕೆ ಧಾವಿಸಿತು. ಅಲ್ಲಿ ತನ್ನ ಪಟಾಲಂಗಳಿಂದಲೇ ಬಂದಿದ್ದ ಸಲಹೆಗಳನ್ನು ರೈತರ ಸಲಹೆಗಳೆಂದೇ ಮಂಡಿಸಲು, ಅಭಿಪ್ರಾಯ ರೂಪಿಸಲು ಸಂಘಟಕರು ಯತ್ನ ನಡೆಸಿದರು.

ಆಗ ಪ್ರಾಂತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ। ಜಿ.ಸಿ. ಬಯ್ಯಾರೆಡ್ಡಿಯವರ ನೇತೃತ್ವದಲ್ಲಿ ಈ ನಾಟಕದ ವಿರುದ್ಧ ಘೋಷಣೆ ಕೂಗುತ್ತಾ, ನಮ್ಮ ಸಲಹೆಗಳನ್ನು ಮಂಡಿಸಲು ಅವಕಾಶ ನೀಡಬೇಕು. ಇಲ್ಲದಿದ್ದರೆ ಈ ಕಮ್ಮಟ ನಡೆಯಲು ಅವಕಾಶ ನೀಡುವುದಿಲ್ಲ ಎಂದು ಘೋಷಣೆಗಳು ಮೊಳಗಿದಾಗ, ನೆರೆದಿದ್ದವರೆಲ್ಲಾ ಒಂದು ಕ್ಷಣ ಅವಕ್ಕಾದರು. ಇನ್ನು ಮಾತನಾಡಲು ಅವಕಾಶ ನೀಡದೆ ಕಲಾಪ ನಡೆಯಲಾರದು ಎನ್ನುವ ಸನ್ನಿವೇಶ ನಿರ್ಮಾಣವಾಗುತ್ತಿದ್ದಾಗ ಕೃಷಿ ಸಚಿವರದ ಟಿ.ಬಿ.. ಜಯಚಂದ್ರರವರೇ ಮಧ್ಯಪ್ರವೇಶಮಾಡಿ ಬಯ್ಯಾರೆಡ್ಡಿಯವರನ್ನು ಮಾತನಾಡಲು ಆಹ್ವಾನಿಸಿದರು.

ಬಯ್ಯಾರೆಡ್ಡಿಯವರು ಮಾತನಾಡಿ ಹತ್ತು ಸಲಹೆಗಳನ್ನು ರೈತರ ಪರವಾಗಿ ಮುಂದಿಡುತ್ತಾ, ರಾಜ್ಯ ಸರ್ಕಾರ, ಅದರ ಆಷಾಡಭೂತಿ ತನ, ಕೆ.ಪಿ.ಟಿ.ಸಿ.ಎಲ್., ಕೆ.ಇ.ಆರ್.ಸಿ.ಯ ಸಂಚುಗಳನ್ನು ಖಂಡಿಸಿದರು.

ಈ ಪ್ರತಿಭಟನೆ ಮತ್ತು ಮುಂದಿಟ್ಟ ಸಲಹೆಗಳನ್ನು ನಿರ್ಲಕ್ಷಿಸಲಾರದೆ ಹೋದ ಆಡಳಿತ ಮತ್ತು ವಿರೋಧ ಪಕ್ಷದ ಎಲ್ಲಾ ಮುಖಂಡರೂ ನಂತರದ ತಮ್ಮ ಮಾತುಗಳಲ್ಲಿ ರೈತರ ಪರವಾಗಿ ಮಾತನಾಡಿದ್ದ, ಆಡಿದ್ದು.


ಕೊನೆಗೆ ಈ ಪ್ರತಿಭಟನೆಯ ಫಲವಾಗಿ ಯಾವ ನಿರ್ಣಯಕ್ಕೂ ಬರಲಾರದೆ ಹೋದ ಸರ್ಕಾರ ಮತ್ತು ಕೆಪಿಟಿಸಿಎಲ್ ರೈತರ ಇನ್ನೂ ಹಲವಾರು ಅಭಿಪ್ರಾಯಗಳು, ಸಲಹೆಗಳು ಮತ್ತು ರೈತ ಪರವಾಗಿ ಕ್ರಮಕೈಗೊಳ್ಳುತ್ತೇನೆ ಎನ್ನುವ ಒತ್ತಡಕ್ಕೊಳಗಾಗಬೇಕಾಯಿತು.

- ಕೃಷ್ಣೇಗೌಡ.ಟಿ.ಎಲ್.

ಕ್ಷಾಮದ ಬಾಹುಗಳಲ್ಲಿ ಬಾಗೇಪಲ್ಲಿ

ಬೇಕಿದೆ ಚಿತ್ರಾವತಿ ನೀರು

ಕುಡಿಯುವ ನೀರಿನಲ್ಲಿ ಫ್ಲೋರಾಸಿಸ್ ಹೆಚ್ಚಳದಿಂದ ಬಳಲುತ್ತಿರುವ ಬಾಗೇಪಲ್ಲಿ ಜನರಿಗೆ ಚಿತ್ರಾವತಿ ನದಿ ನೀರು ಬೇಕೆ ಬೇಕು ಇದಕ್ಕಾಗಿ ಹಲವು ಯೋಜನೆಗಳು ಸಿದ್ದವಾದರೂ ಯಾಕೆ ಇನ್ನೂ ದಕ್ಕುತ್ತಿಲ್ಲ?



ಹೋರಾಟ ಆರಂಭವಾದಕೂಡಲೇ ಎದ್ದುಬಿದ್ದು ಮುಖ್ಯಮಂತ್ರಿಗಳನ್ನು ಮುಟ್ಟಿದ ಶಾಸಕ ಸಂಪಂಗಿ

ಭಾಸ್ಕರ ರೆಡ್ಡಿ

ಕ್ಷಾಮದ ಬಾಹುಗಳ ಮಧ್ಯೆ ಸಿಲುಕಿರುವ ಬಾಗೇಪಲ್ಲಿ ತಾಲ್ಲೂಕು ಇಡೀ ಕೋಲಾರ ಜಿಲ್ಲೆಯಲ್ಲೇ ಅತ್ಯಂತ ಹಿಂದುಳಿದ ತಾಲ್ಲೂಕು ಎಂಬ ಹಣೆ ಪಟ್ಟಿಯಿಂದ ಹೊರಬೀಳಲಾರದೆ ಒದ್ದಾಡುತ್ತಿದೆ. ಅದರಿಂದ ಹೊರದಬ್ಬುವ ಪ್ರಯತ್ನವನ್ನು ಸರ್ಕಾರವಾಗಲೀ ಅಥವಾ ಇಲ್ಲಿ ಗೆದ್ದಿರುವ ಶಾಸಕರೂ ಮಾಡದೇ ತಬ್ಬಲಿಯಂತಾಗಿದೆ. ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿ ತೊಳಲಾಡುತ್ತಿರುವ ಸನ್ನಿವೇಶ ಬಾಗೇಪಲ್ಲಿಯಲ್ಲಿ ಸೃಷ್ಟಿಯಾಗಿದೆ.

ಇಡೀ ತಾಲ್ಲೂಕಿನಲ್ಲಿ ಕುಡಿಯುವ ನೀರಿನಲ್ಲಿರುವ ಫ್ಲೋರೈಡ್ ಎಂಬ ವಿಷ ಲವಣ ಜನರ ಬದುಕನ್ನು ನಿಧಾನವಾಗಿ ಕತ್ತಲೆಯ ಕೂಪಕ್ಕೆ ತಳ್ಳುತ್ತಿದೆ. ಮೊದಲೇ ಕುಡಿಯುವ ನೀರಿಗೆ ಅತ್ಯಂತ ಸಮಸ್ಯೆಯಾಗಿರುವಾಗ, ಅದರಲ್ಲಿ ಈ ಫ್ಲೋರೈಡ್ ಸಮಸ್ಯೆ ಬೇರೆ. ಶೇ. 60 ಭಾಗದ ಜನರಿಗೆ ಫ್ಲೋರಾಸಿಸ್ ಕಾಯಿಲೆಯ ಲಕ್ಷಣಗಳು ಕಾಣಿಸಿಕೊಂಡು ಆತಂಕವನ್ನು ಸೃಷ್ಟಿ ಮಾಡಿದೆ.

ಇಂದು ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳ ಜನ ಕುಡಿಯುತ್ತಿರುವ ನೀರು 400 ಅಡಿಗಿಂತ ಕೆಳಗಿನದು. 100 ಅಡಿಗಿಂತ ಕೆಳಗೆ ಸಿಗುವ ನೀರಿನಲ್ಲಿ ಸಾಮಾನ್ಯವಾಗಿ ಫ್ಲೋರೈಡ್ ಅಂಶ ಅಧಿಕವಾಗಿರುವುದರಿಂದ ಆರೋಗ್ಯಕ್ಕೆ ಹಾನಿಕರ. ಹಾಗಾದರೆ, ನೀರಿನಲ್ಲಿ ಫ್ಲೋರೈಡ್ ಅಂಶ ಇರಲೇಬಾರದು ಎಂದೇನಲ್ಲ. ನೀರಿನಲ್ಲಿ ಫ್ಲೋರೈಡ್ ಅಂಶ ಕೂಡಾ ಅವಶ್ಯ. ಆದರೆ, ಇದು ನಿಗದಿತ ಮಟ್ಟಕ್ಕಿಂತ ಮೇಲೆ ಇರಬಾರದು. ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ P.P.M. - Part Per Milliam ಗಿಂತ ಕಡಿಮೆ ಇದ್ದರೆ, ಯಾವುದೇ ಹಾನಿಯಾಗುವುದಿಲ್ಲ. ಆದರೆ, ಅದಕ್ಕಿಂತ ಹೆಚ್ಚಿಗೆ ಇದ್ದರೆ, ಅಂತಹ ನೀರನ್ನು ಕುಡಿಯುವುದರಿಂದ ಅಥವಾ ಅಡಿಗೆಗೆ ಬಳಸುವುದರಿಂದ ಫ್ಲೋರಾಸಿಸ್ ಎಂಬ ವಾಸಿಯಾಗದ ಕಾಯಿಲೆ ಬರುತ್ತದೆ.

ಕಾಯಿಲೆಯ ಲಕ್ಷಣಗಳು

ಹಲ್ಲುಗಳ ಮೇಲೆ ಕಪ್ಪು ಮಚ್ಚೆಗಳು ಮೂಡುವುದು, ಕಾಲು ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು, ಹೊಟ್ಟೆಯಲ್ಲಿ ಉರಿ, ಆಸಿಡಿಟಿ ಮುಂತಾದವು. ನೀರಿನಲ್ಲಿ ಫ್ಲೋರೈಡ್ ಅಂಶದ ಸಾಂದ್ರತೆ ಹೆಚ್ಚಿದಂತೆಲ್ಲಾ ಕಾಯಿಲೆಯ ತೀವ್ರತೆ ಹೆಚ್ಚಾಗಿ ಎಲುಬುಗಳು ತುಂಬಾ ಶಕ್ತಿಹೀನವಾಗಿ ಮುಟ್ಟಿದರೆ ಮುರಿಯುವ ಪರಿಸ್ಥಿತಿಗೆ ಬರುತ್ತವೆ. ಕಾಲುಗಳು ಪೋಲಿಯೋ ರೋಗದ ಹಾಗೆ ತಿರುವುಗಳನ್ನು ಪಡೆಯುತ್ತವೆ. ನಡೆಯಲಾರದ ಪರಿಸ್ಥಿತಿ ಹಲ್ಲುಗಳು ತುಕ್ಕು ಹಿಡಿದ ಹಾಗೆ ನಿಧಾನವಾಗಿ ಉದುರಿ ಹೋಗುತ್ತವೆ. 30 ವರ್ಷದ ಯುವಕ 60 ವರ್ಷದ ಮುದುಕನಂತೆ ಕಾಣಿಸುತ್ತಾನೆ. ಕೆಲಸ ಮಾಡಲು ಸಾಧ್ಯವಾಗದೆ ಬದುಕಿನಾದ್ಯಂತ ಬದುಕುಳಿದ ಶವದಂತೆ ಇರಬೇಕಾದ ಅನಿವಾರ್ಯ ಪರಿಸ್ಥಿತಿ ಬರುತ್ತದೆ.

ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳ ಸರಿಸುಮಾರು ಎಲ್ಲಾ ಹಳ್ಳಿಗಳ ಕುಡಿಯುವ ನೀರಿನಲ್ಲಿ 2.20 ಪಿ.ಪಿ.ಎಂ. ನಿಂದ 6.00 ಪಿ.ಪಿ.ಎಂ.ನಷ್ಟು ಫ್ಲೋರೈಡ್ ಅಂಶ ಇರುವುದು ಡ್ಯಾನಿಡಾ ಸಂಸ್ಥೆಯ ಸರ್ವೆಯಿಂದ ತಿಳಿದು ಬಂದಿದೆ. ಹಾಗಿದ್ದರೆ, ಜನ ಇಂದು ತಿಳಿದೂ ತಿಳಿದೂ ವಿಷಯುಕ್ತವಾದ ನೀರನ್ನೇ ಕುಡಿಯಲೇಬೇಕಾದ ಅನಿವಾರ್ಯ ಪರಿಸ್ಥಿತಿ ಸೃಷ್ಟಿಯಾಗಿದೆ.

ಈ ಕಾಯಿಲೆಗೆ ಪರಿಹಾರವೇನು?

ಫ್ಲೋರಾಸಿಸ್ ಕಾಯಿಲೆಗೆ ಔಷಧವಿಲ್ಲ. ತಾತ್ಕಾಲಿಕ ಪರಿಹಾರವಾಗಿ, ವೈದ್ಯರು ಯಾವುದಾದರೂ - ಗುಳಿಗೆಗಳನ್ನು ಕೊಡಬಹುದು. ಆದರೆ ಅದು ಶಾಶ್ವತ ಪರಿಹಾರವಲ್ಲ. ಶಾಶ್ವತ ಪರಿಹಾರವೆಂದರೆ, ಫ್ಲೋರೈಡ್ ಇಲ್ಲದ ನೀರನ್ನು ಕುಡಿಯುವುದೊಂದೇ ಸರಿಯಾದ ಪರಿಹಾರ. ಆದರೆ ನೀರಿನಲ್ಲಿರುವ ಫ್ಲೋರೈಡ್ ತೆಗೆಯುವ ವಾಟರ್ ಫಿಲ್ಟರ್ಸ್ ಬಂದಿವೆ. ಆದರೆ, ಅವು ಸಾಮಾನ್ಯನಿಗೆ ಎಟುಕುವ ಸ್ಥಿತಿಯಲ್ಲಿಲ್ಲ. ಅದರಿಂದ ಕಾಯಿಲೆ ಬಂತೆಂದರೆ, ಅದನ್ನು ಗುಣಪಡಿಸುವುದು ಸಾಧ್ಯವಿಲ್ಲ. ಅದರಿಂದ ಅದು ಬರದಂತೆ ತಡೆಯುವುದೊಂದೇ ಮಾರ್ಗ. ಬರದಂತೆ ತಡೆಯುವುದೆಂದರೆ, ಫ್ಲೋರೈಡ್ ಇಲ್ಲದ ಮೇಲಿನ ನೀರನ್ನು ಕುಡಿಯುವುದು. ಆ ಮಾರ್ಗ ಹುಡಿಕಿಕೊಡುವ ಸರ್ಕಾರವಿಲ್ಲದೇ ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವ ಶಾಸಕರಿಲ್ಲದೇ, ಬಾಗೇಪಲ್ಲಿ ಕ್ಷೇತ್ರ ಸೊರಗುತ್ತಿದೆ.

ಆ ಎರಡು ಯೋಜನೆಗಳು ಮೂಲೆ ಗುಂಪಾದವು

1998-99ನೇ ಸಾಲಿನಲ್ಲಿ ಸಿ.ಪಿ.ಐ(ಎಂ) ಶಾಸಕ ಶ್ರೀರಾಮರೆಡ್ಡಿಯವರು ಎರಡು ಯೋಜನೆಗಳು ತಯಾರಿಸಿದರು. ಒಂದು ರಾಜೀವ್ ಗಾಂಧಿ ಫೌಂಡೇಶನ್ನಿನಿಂದ ಸುಮಾರು 30 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿಸಲು ಒಂದು ಯೋಜನೆ ಬಾಗೇಪಲ್ಲಿಯ ದೊಡ್ಡ ಕೆರೆಗಳಾದ ಮತ್ತು ಪ್ರಮುಖ ಕೇಂದ್ರಗಳಾದ, ಗೂಳೂರು ಕೆರೆ, ಬಿಳ್ಳೂರು ಕೆರೆ, ನಾರೇ ಮದ್ದೇಪಲ್ಲಿ ಕೆರೆ, ಪಾತಪಾಳ್ಯ ಕೆರೆಗಳಲ್ಲಿ ಸಂಪೂರ್ಣ ಹೂಳನ್ನು ತೆಗೆಸಿ ಅದರಲ್ಲಿ ಶೇಕರಣೆಯಾದ ಪೂರ್ತಿ ನೀರನ್ನು ನೀರಾವರಿಗೆ ಹರಿಸದೆ, ಕುಡಿಯಲಿಕ್ಕಾಗಿಯೇ ಆ ಕೇಂದ್ರ ಸ್ಥಳಗಳು ಸುತ್ತಮುತ್ತಲ ಹಳ್ಳಿಗಳಿಗೆ ಉಪಯೋಗಿಸುವುದರಿಂದ ಫ್ಲೋರೈಡ್ ಅಂಶವನ್ನು ಪೂರ್ತಿ ತಡೆಹಿಡಿಯಬಹುದು. 30 ಕೋಟಿಯ ಯೋಜನೆ ಅದು. ಅದೇ ರೀತಿ ಗುಡಿಬಂಡೆ ದೊಡ್ಡಕೆರೆಯಲ್ಲಿ 7 ಕೋಟಿ ರೂ ವೆಚ್ಚ ಮಾಡಿ ಹೂಳು ತೆಗೆಸಿ ಆ ನೀರನ್ನು ಕುಡಿಯಲು ಉಪಯೋಗಿಸಲು ಯೋಜನೆ ತಯಾರಿಸಲಾಗಿತ್ತು. ಆ ಕ್ಷಣದಲ್ಲಿ ಚುನಾವಣೆಗಳು ಬಂದು ಚುನಾವಣೆಗಳ ನಂತರ ಬಂದ ಸರ್ಕಾರ ಅಥವಾ ಶಾಸಕರು ಈ ಬಗ್ಗೆ ತಲೆಕೆಡಿಸಿಕೊಂಡಿದ್ದರೆ, ಅದು ಪ್ರಗತಿಯಲ್ಲಿರುತ್ತಿತ್ತು. ಆದರೆ ಈಗಲೂ ಆ ಯೋಜನೆಯನ್ನು ಕೈಗೆತ್ತಿಕೊಂಡರೆ ಈ ಸಮಸ್ಯೆ ಪರಿಹರಿಸಬಹುದು.

ಇನ್ನೊಂದು ಚಿತ್ರಾವತಿ ಯೋಜನೆ

1998-99ನೇ ಸಾಲಿನಲ್ಲಿ ಸಿ.ಪಿ.ಐ(ಎಂ) ಶಾಸಕರು ಬಾಗೇಪಲ್ಲಿ ಟೌನ್ ಮತ್ತು ಸುತ್ತ ಮುತ್ತಲ ಸುಮಾರು 30-40 ಹಳ್ಳಿಗಳ ಜನರಿಗೆ ಕುಡಿಯುವ ನೀರಿಗಾಗಿ ಬಾಗೇಪಲ್ಲಿ ಟೌನ್ ಪಕ್ಕದಲ್ಲಿ ಮಳೆಗಾಲದಲ್ಲಿ ಮಾತ್ರ ಎಂದೊ ಒಂದೊಂದು ಬಾರಿ ಹರಿಯುವ ನದಿ ಚಿತ್ರಾವತಿಗೆ ಅಡ್ಡಲಾಗಿ ಆಣೆಕಟ್ಟು ಕಟ್ಟಲು 8 ಕೋಟಿ 72 ಲಕ್ಷ ರೂಗಳ ಅಂದಾಜು ವೆಚ್ಚದ ಯೋಜನೆ ತಯಾರಿಸಿ ಅಂದಿನ ಜನತಾದಳ ಸರ್ಕಾರದ ಮುಂದಿಟ್ಟು ಸಂಪುಟದ ಒಪ್ಪಿಗೆ ಪಡೆದು ಅದೇ ಸಾಲಿನ ಬಜೆಟ್‌ನಲ್ಲಿ 242 ಲಕ್ಷ ರೂ. ಗಳ ಅಧಿಕಾರಿಕ ಅನುಮೋದನೆಯನ್ನು ಪಡೆಯುವ ಹಂತದಲ್ಲಿದ್ದಾಗ ನಿರ್ದಿಷ್ಟ ಸಮಯಕ್ಕಿಂತ 4 ತಿಂಗಳ ಮೊದಲೇ ವಿಧಾನ ಸಭಾ ಚುನಾವಣೆಗಳು ಬಂದಿದ್ದರಿಂದ, ಚುನಾವಣಾ ನೀತಿ ಸಂಹಿತೆ ಅಡ್ಡಬಂದು ಟೆಂಡರ್ ಕರೆಯಲು ಸಾಧ್ಯವಾಗದೇ ಹೋಯಿತು. ಆದರೆ, ಚುನಾವಣೆಗಳ ನಂತರ ಅದರ ಬಗ್ಗೆ ಚಕಾರ ವೆತ್ತುವ ಶಾಸಕರು ಬರಲಿಲ್ಲ.

ಆದರೆ, ಈ ನಡುವೆ.....

ಆಂಧ್ರದ ನಿರುದ್ಯೋಗಿ ರಾಜಕಾರಣಿಗಳು ಇದನ್ನೊಂದು ರಾಜ್ಯ ಮಟ್ಟದ ಸಮಸ್ಯೆಯನ್ನಾಗಿ ಹುಟ್ಟಹಾಕಲು ಚಿತ್ರಾವತಿಯನ್ನು ಬಳಸಿಕೊಂಡರು. ಚಿತ್ರಾವತಿ ಅಣೆಕಟ್ಟು ನಿರ್ಮಾಣವಾದರೆ, ಆಂಧ್ರದ ಹಲವಾರು ಕೆರೆಗಳು ಬತ್ತಿಹೋಗುತ್ತವೆ ಎಂಬ ಸುಳ್ಳು ಸುದ್ದಿಯನ್ನು ಪ್ರಚಾರ ಮಾಡಿದರು. ಆಂಧ್ರದ ವಿಧಾನಸಭೆಯಲ್ಲಿ ತೀವ್ರ ಸ್ವರೂಪದ ಚರ್ಚೆಯಾಯಿತು. ಹಲವು ಹೋರಾಟಗಳನ್ನು ಮಾಡಿದರು. ಕೇಂದ್ರದ ತನಕ ಹೋಗುವ ಮಟ್ಟಕ್ಕೆ ಆಂಧ್ರ ಪ್ರದೇಶದ ಮುಖ್ಯ ಮಂತ್ರಿಯವರು ಪತ್ರಿಕೆಗಳಿಗೆ ತಿಳಿಸಿದರು. ಲೋಕಸಭೆಯಲ್ಲಿ ಚರ್ಚಿಸಿ ಚಿತ್ರಾವತಿ ಅಣೆಕಟ್ಟು ನಿರ್ಮಾಣವನ್ನು ನಿಲ್ಲಿಸುತ್ತೇವೆಂದು ಬಿಜೆಪಿಯ ಕೇಂದ್ರ ಮಂತ್ರಿಗಳಾದ ದತ್ತಾತ್ರೇಯರವರು ಹೇಳಿದ್ದು ಪತ್ರಿಕೆಗಳಲ್ಲಿ ಬಂತು. ಸುಮಾರು 40 ಕೋಟಿ ರೂಪಾಯಿಗಳ ಕೆಲಸ ಮುಗಿದಿದೆಯೆಂದು ಚಂದ್ರಬಾಬು ನಾಯ್ಡುರವರು ಆಂಧ್ರದ ವಿಧಾನಸಭೆಗೆ ತಿಳಿಸಿದರು. ಅದನ್ನು ತಡೆಯುತ್ತೇವೆಂದು ಕಾಂಗ್ರೆಸ್‌ರವರ ಪ್ರಶ್ನೆಗೆ ಉತ್ತರಿಸುತ್ತಾ ಈ ವಿಷಯ ತಿಳಿಸಿದರು. ಪಕ್ಕದ ಚಿಕ್ ಪೋಸ್ಟ್‌ನಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು. ಆದರೆ, ಅವರು ಬೊಬ್ಬೆ ಹೊಡೆಯುತ್ತಿದ್ದರೂ ಇಲ್ಲಿ ನಿಜಕ್ಕೂ ಕೆಲಸ ಪ್ರಾರಂಭವಾಗಲಿಲ್ಲ.

ಆಗ ಬಾಗೇಪಲ್ಲಿ ಚಿತ್ರಾವತಿ ಹೋರಾಟ ಸಮಿತಿ ಆಂಧ್ರ ಪ್ರದೇಶದ ಬೇಡಿಕೆಯ ವಿರುದ್ಧ ಹೋರಾಟ ನಡೆಸಿತು. ಆಂಧ್ರದ ಬೇಡಿಕೆ ನ್ಯಾಯಬದ್ಧವಲ್ಲ ಎಂದು ಹೋರಾಟ ಸಮಿತಿ ಸ್ಪಷ್ಟಪಡಿಸಿತು. ಆಂಧ್ರದ ಬೇಡಿಕೆ ನ್ಯಾಯಬದ್ಧವಲ್ಲ ಎನ್ನುವುದು ಈ ಕೆಳಗಿನ ಅಂಶಗಳಿಂದ ಸ್ಪಷ್ಟವಾಗುತ್ತದೆ.

1. ಚಿತ್ರಾವತಿ ನದಿ ಅಂತರ ರಾಜ್ಯ ನದಿ ನೀರು ಮಂಡಲಿಗೆ ಸಂಬಂಧಿಸಿಲ್ಲದ ಕಾರಣ ಚಿತ್ರಾವತಿ ನದಿ ಸಣ್ಣ ನೀರಾವರಿ ಪರಿಧಿಗೆ ಸೇರುವುದರಿಂದ, ಜೊತೆಗೆ ಇದು ಎಂದೋ ಒಂದು ಬಾರಿ ಹರಿಯುತ್ತದೆ, ವಿನಃ ವರ್ಷ ಪೂರ್ತಿ ಹರಿಯುವುದಿಲ್ಲ.
2. ಈ ಮೊದಲು ಕರ್ನಾಟಕದಲ್ಲಿ ಹರಿಯುವ ಚಿತ್ರಾವತಿ ನದಿಗೆ ಅಡ್ಡಲಾಗಿ ಯಾವುದೇ ಅಣೆಕಟ್ಟು ಕಟ್ಟಬಾರದು ಎಂಬ ಯಾವುದೇ ಒಪ್ಪಂದ ಎರಡು ರಾಜ್ಯಗಳ ಮಧ್ಯೆ ಆಗಿಲ್ಲ.
3. ಅಂತರ ರಾಜ್ಯ ನದಿ ನೀರು ಹಂಚಿಕೆ ಕಟ್ಟುಪಾಡುಗಳ ಪ್ರಕಾರ ಅಂತರ ರಾಜ್ಯ ಗಡಿ ಭಾಗದಲ್ಲಿ 10 ಕಿಮೀ ಒಳಗೆ ಯಾವುದೇ ಅಣೆಕಟ್ಟು ಕಟ್ಟಬಾರದು ಎಂಬ ಕಟ್ಟುಪಾಡಿಗೆ ಒಳಪಡುವುದಿಲ್ಲ. ಏಕೆಂದರೆ, ಚಿತ್ರಾವತಿ ಅಣೆಕಟ್ಟು ಆಂಧ್ರದ ಗಡಿಯಾಚೆಯಿಂದ 15

ಪುಟ 11 ಕ್ಕೆ

ನೆನೆಗುದಿಗೆ ಬಿದ್ದಿದ್ದು ಯಾಕೆ?

1998-99ನೇ ಸಾಲಿನಲ್ಲಿ ಬಜೆಟ್‌ನಲ್ಲಿ 239 ಲಕ್ಷ ರೂಗಳನ್ನು ಮೀಸಲಿಡಲಾಯಿತು. ಆದರೆ, ಅದನ್ನು ಆಡಳಿತಾತ್ಮಕ ಒಪ್ಪಿಗೆ ಪಡೆಯುವ ಹಂತದಲ್ಲಿದ್ದಾಗ ಚುನಾವಣೆಗಳು ಬಂದಿದ್ದರಿಂದ ಚುನಾವಣಾ ನೀತಿ ಸಂಹಿತೆ ಅಡ್ಡ ಬಂದು ಕೆಲಸ ಪ್ರಾರಂಭವಾಗಲು ಸಾಧ್ಯವಾಗಲಿಲ್ಲ. ನಂತರ 1999-2000 ಸಾಲಿನ ಬಜೆಟ್‌ನಲ್ಲಿ ಇಲ್ಲಿ ಗೆದ್ದು ಬಂದ ಶಾಸಕರ ಯೋಜನೆಯ ಬಗ್ಗೆ ಅಸಡ್ಡೆ ತೋರಿದ ಕಾರಣ ಮತ್ತು ಜ್ಞಾನದ ಕೊರತೆಯಿಂದ ಒಂದು ಪೈಸೆಯೂ ಹಾಕಲಾಗಲಿಲ್ಲ. ಅನಂತರ 2000-2001ನೇ ಸಾಲಿನಲ್ಲಿ ಕೇವಲ 152 ಲಕ್ಷ ರೂಗಳನ್ನು ಮಾತ್ರ ಮೀಸಲಿಡಲಾಯಿತು. ಮತ್ತೆ 2001-2002 ಸಾಲಿನ ಬಜೆಟ್‌ನಲ್ಲಿ ಕೇವಲ 52 ಲಕ್ಷ ರೂಗಳಿಗೆ ಇಳಿಯಿತು. ಅದರಿಂದ ಆಡಳಿತಾತ್ಮಕ ಒಪ್ಪಿಗೆ ದೊರೆಯಲು ಸಾಧ್ಯವಾಗುವುದಿಲ್ಲ. ಆಡಳಿತಾತ್ಮಕ ಒಪ್ಪಿಗೆ ದೊರೆಯದಿದ್ದರೆ, ಟೆಂಡರ್ ಕರೆಯಲು ಸಾಧ್ಯವಾಗುವುದಿಲ್ಲ.

ಜೊತೆಗೆ ಈ ಮೊದಲು ಈ ಯೋಜನೆಗೆ ಸಣ್ಣ ನೀರಾವರಿ ಇಲಾಖೆಯಿಂದ ಮಾತ್ರ ಎಲ್ಲಾ ಹಣ ಹಾಕಲಾಗಿತ್ತು ಆದರೆ, ಅಣೆಕಟ್ಟಿನಲ್ಲಿ ನಿಲ್ಲುವ ಅರ್ಧ ನೀರನ್ನು ಬಾಗೇಪಲ್ಲಿ ಪಟ್ಟಣಕ್ಕೆ ಮತ್ತು ಸುತ್ತಮುತ್ತಲ ಹಳ್ಳಿಗಳಿಗೆ ಕುಡಿಯುವ ನೀರಿಗಾಗಿ ಬಳಸುವುದರಿಂದ ಇದಕ್ಕೆ ಕರ್ನಾಟಕ ನಗರ ನೀರು ಸರಬರಾಜು ಇಲಾಖೆಯವರು ಕೂಡಾ ಹಣ ಒದಗಿಸಬೇಕೆಂದು ಸಣ್ಣ ನೀರಾವರಿ ಇಲಾಖೆಯವರು ತಿಳಿಸುತ್ತಿದ್ದಾರೆ. ಆದರೆ ಕುಡಿಯಲು ಹಳ್ಳಿಗಳಿಗೂ ನೀರು ಹೋಗುವುದರಿಂದ ಇದಕ್ಕೆ ಪಂಚಾಯತ್ ರಾಜ್ ಇಲಾಖೆಯವರೂ ಎಷ್ಟನ್ನುಕೊಡಬೇಕೆಂದುಕರ್ನಾಟಕನಗರ ನೀರು ಸರಬರಾಜು ಇಲಾಖೆಯವರ ನಿವೇದನೆ. ಆದರೆ, ಪಂಚಾಯತ್ ರಾಜ್ ಇಲಾಖೆಯವರು ಈಗಾಗಲೇ ಹಳ್ಳಿಗಳಿಗಾಗಿ ಕಿರು ನೀರು ಸರಬರಾಜು ಯೋಜನೆ, ಕೈಪಂಪುಗಳಿಗಾಗಿ ನಾವು ಯಥೇಚ್ಛವಾಗಿ ಹಣ ಖರ್ಚುಮಾಡಿರುವುದರಿಂದ, ನಾವು ಮತ್ತೆ ಹಣ ಕೊಡಲಾಗುವುದಿಲ್ಲ ಎಂದುಪಂಚಾಯತ್ ರಾಜ್ ಇಲಾಖೆಯವರು ತಿಳಿಸುತ್ತಿದ್ದಾರೆ. ಅಂದರೆ, ಈ ಮೂರು ಇಲಾಖೆಗಳಿಂದ ಅವರನ್ನು ಮಾತಾಡಿಸಿ, ಒಪ್ಪಿಸಿ ಹಣ ಹಾಕಿಸುವ ನಾಯಕರು ಇಲ್ಲದೇ ಹೋಗಿದ್ದಾರೆ.

ಆದರೆ, ವಾಸ್ತವಾಂಶವನ್ನು ಮುಚ್ಚಿಟ್ಟು ಜಿಲ್ಲಾ ಉಸ್ತುವಾರಿ ಮಂತ್ರಿಗಳು ಮಾತ್ರ ಚುನಾವಣೆ ಸಮಯದಲ್ಲಿ ಮಾತ್ರ ಹೇಳಿಕೆಗಳನ್ನು ಕೊಡುವುದು ಬಿಟ್ಟಿಲ್ಲ. 2ವರ್ಷದಿಂದ ಬರೀ ಪತ್ರಿಕೆಗಳಲ್ಲಿ ಸುದ್ದಿ ನೋಡಿ ಕನಸು ಕಾಣುವುದು ಮಾತ್ರ ಆಗಿದೆ. ಶಾಸಕರಾದ ಸಂಪಂಗಿಯವರು ಮಾತ್ರ ಯೋಜನೆ ಅದಷ್ಟಕ್ಕೆ ಅದೇ ಆಗುತ್ತದೆ. ಯಾರೂ ಹೋರಾಟ ಮಾಡಬೇಕಾದ ಅವಶ್ಯಕತೆ ಇಲ್ಲ ಎಂದು 2 ವರ್ಷದಿಂದ ಹೇಳ್ತಾ ಬಂದಿದ್ದಾರೆ.

ಜನದ್ರೋಹಿ ನೀತಿಗಳನ್ನು ಹಿಂತೆಗೆದುಕೊಳ್ಳಿ ಇಲ್ಲವೇ ಅಧಿಕಾರದಿಂದ ತೊಲಗಿ ರಾಷ್ಟ್ರವ್ಯಾಪಿ ಜನಾಂದೋಲನಕ್ಕೆ ನಿರ್ಧಾರ

ಈ ಬಾರಿ ಬಿಜೆಪಿ ಎಂಬ ಖಾವಿ ಪಡೆಗಳಿಗೆ ಒಂದಲ್ಲ, ಎರಡು ಬಾರಿ ಅವಕಾಶವನ್ನು ಜನತೆ ಕಲ್ಪಿಸಿದರು. ಆದರೆ ಆದದ್ದೇನು ? ದೇಶವನ್ನು ಪೂರ್ಣವಾಗಿ ದಿವಾಳಿಯೆಬ್ಬಿಸುತ್ತಿರುವ, ಸ್ವದೇಶಿ ಮುಖವಾಡ. ಈ ದೇಶದ್ರೋಹಿಗಳಿಗೆ ಜನ ಇಂದು ಎಚ್ಚರಿಕೆ ಕೊಡಬೇಕಿದೆ. 'ನಾವಿನ್ನು ಸಹಿಸಲಾರೆವು. ನೀವು ಅನುಸರಿಸುತ್ತಿರುವ ನೀತಿಗಳನ್ನು ಈಗಲೇ ಹಿಂತೆಗೆದುಕೊಳ್ಳಿ ಇಲ್ಲವೇ ಅಧಿಕಾರದಿಂದಲೇ ತೊಲಗಿ ಎಂದು. ಇದಕ್ಕಾಗಿ ಸಮರ ಹೂಡದೇ ಅನ್ಯಮಾರ್ಗವೇ ಇಲ್ಲ. ಇಂತಹ ಗಂಭೀರ ಸನ್ನಿವೇಶದಲ್ಲಿ ಸಿಪಿಐ(ಎಂ) ಪಕ್ಷ ರಾಷ್ಟ್ರವ್ಯಾಪಿ ಜನಾಂದೋಲನಕ್ಕೆ ಕರೆ ನೀಡಿದೆ. ಇತ್ತೀಚೆಗೆ ನವದೆಹಲಿಯಲ್ಲಿ ಆಗಸ್ಟ್ ೧೧ ರಿಂದ ೧೩ ರವರೆಗೆ ನಡೆದ ಕೇಂದ್ರ ಸಮಿತಿ ಸಭೆಯ ತೀರ್ಮಾನಗಳ ಸಾರ ಇಲ್ಲಿದೆ.

ದೇಶದಲ್ಲಿ ದಿನೇ ದಿನೇ ಪರಿಸ್ಥಿತಿ ಹದಗೆಡುತ್ತಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿನಾಶಕಾರಿ ಆರ್ಥಿಕ ನೀತಿಗಳು ದೇಶದ ಜನಜೀವನದ ಮೇಲೆ ಅತ್ಯಂತ ಆತಂಕಕಾರಿ ಪರಿಣಾಮಗಳನ್ನು ಬೀರಿವೆ. ಆಹಾರ ಧಾನ್ಯಗಳ ದಾಸ್ತಾನು ಬೆಟ್ಟದಷ್ಟು ಬೆಳೆದು ನಿಂತಿದ್ದರೂ ಬರಪೀಡಿತ ಪ್ರದೇಶಗಳ ಜನ ಹೊಟ್ಟೆಗೆ ಹಿಟ್ಟು ಸಿಗದಂತಾಗಿ ಪರಿತಪಿಸುತ್ತಿದ್ದಾರೆ. **ಜಾಗತಿಕ ವಾಣಿಜ್ಯ ಸಂಘಟನೆ (ಡಬ್ಲ್ಯುಟಿಓ) ಯ ಯಜಮಾನಿಕೆಯಿಂದಾಗಿ ದೇಶದ ಕೃಷಿ ಉತ್ಪನ್ನಗಳ ಬೆಲೆ ಕುಸಿದು ನಮ್ಮ ರೈತರು ಕಂಗೆಟ್ಟಿದ್ದಾರೆ.**


ಕಾರ್ಖಾನೆಗಳ ಹಾಗೂ ಸಣ್ಣಪ್ರಮಾಣದ ಕೈಗಾರಿಕೆಗಳು ಮುಚ್ಚಿದ್ದು ಬೆಳೆಯುತ್ತಿರುವ ನಿರುದ್ಯೋಗ ಗಾಬರಿಹುಟ್ಟಿಸುತ್ತದೆ. **ಸಾರ್ವಜನಿಕ ರಂಗದ ಲಾಭದಾಯಕ ಘಟಕಗಳನ್ನು ಮಾರಾಟ ಮಾಡುತ್ತಿರುವ ಸರ್ಕಾರವು ಸಾರ್ವಜನಿಕ ಆಸ್ತಿಯನ್ನು ಲಜ್ಜೆಯಿಲ್ಲದೆ ಲೂಟಿ ಮಾಡಿಸುತ್ತಿದೆ.** 5500 ಕೋಟಿ ರೂ. ಬೆಲೆ ಬಾಳುವ ಭಾರತ ಅಲ್ಯೂಮಿನಿಯಂ ಕಂಪನಿಯನ್ನು ಕೇವಲ 500 ಕೋಟಿ ರೂ.ಗಳಿಗೆ ಖಾಸಗಿ ಕಂಪನಿಯಾದ 'ಸ್ಟರ್‌ಲೈಟ್' ಕಂಪನಿಗೆ ಮಾರಾಟ ಮಾಡಿದರೆ, ಭಾರತ ಪ್ರತಿಷ್ಠಿತ 'ಏರ್ ಇಂಡಿಯಾ'ವನ್ನು ವಿದೇಶಿ ಸಹಭಾಗಿತ್ವದ ಟಾಟಾ ಕಂಪನಿಗೆ ಮಾರಾಟ ಮಾಡಲು ಹೊರಟಿದೆ.

ವಾಜಪೇಯಿ ಸರ್ಕಾರವು ಸಾಮ್ರಾಜ್ಯಶಾಹಿ ಅಮೆರಿಕದ ಕಿರಿಯ ಪಾಲುದಾರನೆಂದು ಎಳ್ಳಷ್ಟೂ ಸಂಕೋಚವಿಲ್ಲದೆ ಘೋಷಿಸಿಕೊಂಡಿದೆ. ಬುಷ್ ಆಡಳಿತದ ಆಕ್ರಮಣಕಾರಿ ಮಿಲಿಟರಿ ನೀತಿಯನ್ನು ಸ್ವಾಗತಿಸಲು ಹೇಸದ ಭಾರತ ಸರ್ಕಾರ ದೇಶದ ಆರ್ಥಿಕ ಸಾರ್ವಭೌಮತೆಯನ್ನು ಹರಾಜು ಮಾಡುತ್ತಿದೆ. ಭಯೋತ್ಪಾದಕತೆ ಮತ್ತು ಮಾದಕ ವ್ಯಾಪಾರವನ್ನು ತಡೆಗಟ್ಟುವ ಹೆಸರಿನಲ್ಲಿ ಅಮೆರಿಕಾದ ಗೂಢಾಚಾರ ಸಂಸ್ಥೆಗಳಾದ ಎಫ್‌ಬಿಐ ಮತ್ತು ಸಿಐಎ ಗಳಿಗೆ ಭಾರತದಲ್ಲಿ ಕಛೇರಿಗಳನ್ನು ತೆರೆಯಲು ಕೇಂದ್ರ ಸರಕಾರ ಅವಕಾಶ ಮಾಡಿಕೊಟ್ಟಿದೆ. 1998 ರ ಅಣುಸ್ಫೋಟದ ಹಿನ್ನೆಲೆಯಲ್ಲಿ ಅಮೆರಿಕಾವು ವ್ಯಾಪಾರ ವಹಿವಾಟುಗಳಿಗೆ ತಡೆ ಮಾಡುವ 'ನಿರ್ಬಂಧ' ವಿಧಿಸಿದ್ದರೂ, ಅದರೊಂದಿಗೆ ಮಿಲಿಟರಿ ಒಪ್ಪಂದಕ್ಕೆ ವಾಜಪೇಯಿ ಸರಕಾರ ಮುಂದಾಗಿದೆ. ಹಿಂದೂ ಮಹಾಸಾಗರದ ಡಿಯಾಗೊ ಗಾರ್ಸಿಯಾದಲ್ಲಿ ಭಾರತದ ಮೇಲೆ ಗುರಿಯಿಟ್ಟು ಮಿಲಿಟರಿ ನೆಲೆಯನ್ನು ಅಮೆರಿಕಾ ಸ್ಥಾಪಿಸಿದೆ. ಇದಕ್ಕೆ ಸಹಾಯ ಮಾಡುವಂತಹ ಮಿಲಿಟರಿ ಸಹಕಾರವನ್ನು ನೀಡಲು ವಾಜಪೇಯಿ ಸರಕಾರ ಮುಂದಾಗಿದೆ!

ಬಿಜೆಪಿ ಸರ್ಕಾರದ ಹಗರಣಗಳು ಕೊನೆಗೊಳ್ಳಲಿಲ್ಲ. ಕಳೆದ ಒಂದು ವರ್ಷದಲ್ಲಿ ನಡೆದ ತೆಹಲ್ಕಾ ಹಗರಣ. ಷೇರು ಪೇಟೆ ಹಗರಣಗಳ ನಂತರ ಇತ್ತೀಚೆಗೆ ನಡೆದ ಯುಟಿಐ ಹಗರಣವು ಕೋಟಿಗಟ್ಟಲೆ ಹೂಡಿಕೆದಾರರಿಗೆ ಮತ್ತು ಅವರ ಕುಟುಂಬಗಳಿಗೆ ತೀವ್ರ ಆಘಾತವನ್ನು ಉಂಟುಮಾಡಿದೆ. ಮಾರ್ಚ್, ಏಪ್ರಿಲ್ ತಿಂಗಳಲ್ಲಿ ದೊಡ್ಡ ದೊಡ್ಡ ಕಂಪನಿಗಳಿಗೆ ಸೇರಿದ 4000 ಕೋಟಿ ರೂ. ಗಳಿಗೂ ಹೆಚ್ಚು ಯುನಿಟ್‌ಗಳನ್ನು ರೂ. 14.55 ರಂತೆ ವಾಪಾಸು ತೆಗೆದುಕೊಳ್ಳುವಾಗ ಸುಮ್ಮನಿದ್ದ ಸರ್ಕಾರ, ಈಗ ಬಡ, ಮಧ್ಯಮ ಹೂಡಿಕೆದಾರರಿಗೆ ರೂ. 10.00 ರಂತೆ ಯುನಿಟ್‌ಗಳನ್ನು ವಾಪಸು ಪಡೆಯಲು ಆದೇಶ ನೀಡಿದೆ. ಅದುಕೂಡಾ ಮೊದಲ 3000 ಯುನಿಟ್‌ಗಳಿಗೆ ಮಾತ್ರ. ಇದರಿಂದ 2 ಕೋಟಿ ಹೂಡಿಕೆದಾರರು ದಿವಾಳಿಗೆ ಒಳಗಾಗಿದ್ದಾರೆ.

ವಾಜಪೇಯಿ ಸರ್ಕಾರ ಶಿಕ್ಷಣ ಪದ್ಧತಿಯ ಕೇಸರೀಕರಣದಲ್ಲಿ ಹೆಚ್ಚು ಆಸಕ್ತಿ ಹೊಂದಿದೆ. ಅಲ್ಪಸಂಖ್ಯಾತರ ಮೇಲೆ ಹಾಗೂ ಅವರ ಹಕ್ಕುಗಳ ಮೇಲೆ ದಾಳಿ ನಡೆಸುತ್ತಿರುವ ಸಂಘ ಪರಿವಾರದ ಸಂಘಟನೆಗಳಿಗೆ ರಕ್ಷಣೆ ಒದಗಿಸಲು ಅದು ಹೆಚ್ಚು ಉತ್ಸುಕತೆ ತೋರುತ್ತದೆ. ಅಲ್ಪಸಂಖ್ಯಾತ ಮುಸಲ್ಮಾನರ ಹಾಗೂ ಕ್ರಿಶ್ಚಿಯನ್ನರ ವಿರುದ್ಧ ಹರಿಬಿಡಲಾಗುತ್ತಿರುವ ದ್ವೇಷದ ಕಿಚ್ಚು ಇನ್ನೂ ಹೆಚ್ಚಾಗುತ್ತಿದೆ.

ಆದ್ದರಿಂದ ಸಿಪಿಐ(ಎಂ) ಕೇಂದ್ರ ಸಮಿತಿಯು 'ಈ ಧೋರಣೆಗಳನ್ನು ಬಿಡಿ ಇಲ್ಲವೇ ಅಧಿಕಾರದಿಂದ ತೊಲಗಿ' ಎಂಬ ಘೋಷಣೆಯೊಂದಿಗೆ ಕೇಂದ್ರ, ಸರ್ಕಾರದ ವಿರುದ್ಧ ದೇಶವ್ಯಾಪಿ ಆಂದೋಲನ ನಡೆಸಲು ನಿರ್ಧರಿಸಿದೆ. ಸೆಪ್ಟೆಂಬರ್ ಇಡೀ ತಿಂಗಳನ್ನು ಈ ಘೋಷಣೆ ಕುರಿತ ಜನರ ನಡುವೆ ವ್ಯಾಪಕ ಪ್ರಚಾರ ನಡೆಸಲು ಮೀಸಲಿಡಬೇಕೆಂದು ಪಕ್ಷದ ಕೇಂದ್ರ ಸಮಿತಿ ನಿರ್ಧರಿಸಿದೆ. ಸೆಪ್ಟೆಂಬರ್ 7 ರಿಂದ 21 ರ



ಒಳಗಾಗಿ ದೇಶಾದ್ಯಂತ 2000 ಸಾರ್ವಜನಿಕ ಸಭೆಗಳನ್ನು ನಡೆಸಲಾಗುವುದು. ಸೆಪ್ಟೆಂಬರ್ 25 ರಿಂದ 27 ರ ವರೆಗೆ ದೇಶಾದ್ಯಂತ ಕೇಂದ್ರ ಸರ್ಕಾರಿ ಕಛೇರಿಗಳ ಎದುರು ಪಿಕೆಟಿಂಗ್ ನಡೆಸಿ ಕನಿಷ್ಟ 10 ಲಕ್ಷ ಜನರು ಬಂಧನಕ್ಕೆ ಒಳಗಾಗುವಂತೆ ಕಾರ್ಮಿಕರನ್ನು ನೌಕರರು, ರೈತರನ್ನು, ಕೃಷಿ ಕೂಲಿಕಾರರನ್ನು ಯುವಜನರನ್ನು ಮಹಿಳೆಯರನ್ನು, ವಿದ್ಯಾರ್ಥಿಗಳನ್ನು ಕರಕುಶಲಗಾರರನ್ನು ಸಂಘಟಿಸಬೇಕೆಂದು ಪಕ್ಷದ ಕೇಂದ್ರ ಸಮಿತಿ ಕರೆ ನೀಡಿದೆ.

ಬಿಗಡಾಯಿಸಿದ ಜಮ್ಮು ಕಾಶ್ಮೀರ ಸಮಸ್ಯೆ:

ಬಿಜೆಪಿ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದನಂತರ ಜಮ್ಮು ಮತ್ತು ಕಾಶ್ಮೀರ ಸಮಸ್ಯೆ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿದೆ. ಹೆಚ್ಚಿನ ಸ್ವಾಯತ್ತತೆಗಾಗಿ ಜಮ್ಮು ಮತ್ತು ಕಾಶ್ಮೀರ ಅಸೆಂಬ್ಲಿಯು ಅಂಗೀಕರಿಸಿದ ಗೊತ್ತುವಳಿಯನ್ನು ಕೇಂದ್ರ ಸರಕಾರ ತಳ್ಳಿ ಹಾಕಿದೆ. ಕಾಶ್ಮೀರ ಸಮಸ್ಯೆಯನ್ನು ಕೇವಲ ಕಾನೂನು ಮತ್ತು ಸುವ್ಯವಸ್ಥೆಯ ಹೆಸರಿನಲ್ಲಿ ಮಿಲಿಟರಿ ಕಳುಹಿಸಿ ಬಗೆಹರಿಸಲು ಸಾಧ್ಯವಿಲ್ಲ.

> **ಇದೋ ದೇಶವ್ಯಾಪಿ ಜನಾಂದೋಲನ ಪಿಕೆಟಿಂಗ್**
>
> *ವಾಜಪೇಯಿ ಸರ್ಕಾರದ ನೀತಿಗಳನ್ನು ಎಳೆಎಳೆಯಾಗಿ ಬಿಡಿಸಿಡಬೇಕು. 4 ವಿಷಯಗಳಿಗೆ ಪ್ರಾಧಾನ್ಯತೆ.*
>
> ★ *ಸೆಪ್ಟೆಂಬರ್ 7 ರಿಂದಿ 21ರ ವರೆಗೆ ರಾಷ್ಟ್ರದಾದ್ಯಂತ ಎಲ್ಲಾ ಜಿಲ್ಲೆ, ತಾಲ್ಲೂಕು ಪೇಟೆ-ಪಟ್ಟಣ ಹಳ್ಳಿಗಳಲ್ಲಿ ವ್ಯಾಪಕ ಪ್ರಚಾರಾಂದೋಲನ ಜಾಥಾ ಸಾವಿರಾರು ದೊಡ್ಡ ಹಾಗೂ ಸಣ್ಣ ಬಹಿರಂಗ ಸಭೆಗಳು ಕರಪತ್ರಗಳ ಮೂಲಕ ಮನೆ ಮನೆ ತಲುಪುವುದು.*
>
> ★ *ಸೆಪ್ಟೆಂಬರ್ 25,26,27 ಕೇಂದ್ರ ಸರ್ಕಾರದ ಕಛೇರಿಗಳ ಪಿಕೆಂಟಿಂಗ್ ಬಂಧನಕೊಳ್ಳಗಾಗುವುದು ಕನಿಷ್ಠ 10 ಲಕ್ಷ ಮೀರುವುದು...*

ಸಂವಿಧಾನದ 370ನೇ ವಿಧಿಯ ಚೌಕಟ್ಟಿನಲ್ಲಿ ಅಧಿಕ ಸ್ವಾಯತ್ತತೆಯನ್ನು ನೀಡುವುದರ ಮೂಲಕ ಮಾತ್ರವೇ ದೂರ ಸರಿದ ಕಾಶ್ಮೀರಿ ಜನತೆಯನ್ನು ಹತ್ತಿರ ಸೆಳೆದುಕೊಳ್ಳುವುದು ಸಾಧ್ಯ.

ಈ ಮಧ್ಯೆ ಅಲ್ಲಿನ ಉಗ್ರಗಾಮಿಗಳು ಅಮಾಯಕ ಜನರ ಮೇಲೆ ಪ್ರಾಣಾಂತಿಕ ಧಾಳಿ ನಡೆಸುತ್ತಿರುವುದು ತೀರಾ ಖಂಡನೀಯ. ಬರೇ ಮಿಲಿಟರಿ ಕಾರ್ಯಾಚರಣೆಯಿಂದ ಶಾಂತಿ, ಸುವ್ಯವಸ್ಥೆ ಸ್ಥಾಪಿಸುವುದು ಸಾಧ್ಯವಿಲ್ಲ ಎಂಬುದನ್ನು ಇದು ತೋರಿಸುತ್ತದೆ. ಚಾರಿತ್ರಿಕವಾಗಿ, ಮುಸ್ಲಿಮರೇ ಅಧಿಕ ಸಂಖ್ಯೆಯಲ್ಲಿದ್ದ ಕಾಶ್ಮೀರ, ಯಾವ ಹಿನ್ನೆಲೆಯಲ್ಲಿ ಭಾರತದೊಂದಿಗೆ ಸೇರಿಕೊಂಡಿತು ಎಂಬುದನ್ನು ಆರ್.ಎಸ್.ಎಸ್. ಹಿನ್ನೆಲೆಯ ಬಿಜೆಪಿ ಸರಕಾರ ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಈ ಸರಕಾರ ತನ್ನ ನೀತಿಯನ್ನು ಬದಲಾಯಿಸಿಕೊಳ್ಳುವವರೆಗೂ, ಕಾಶ್ಮೀರ ಸಮಸ್ಯೆಗೆ ಪರಿಹಾರ ಸಾಧ್ಯವಿಲ್ಲ. ಬದಲಾಯಿಸಿಕೊಳ್ಳುವವರೆಗೂ ಕಾಶ್ಮೀರ ಸಮಸ್ಯೆಗೆ ಪರಿಹಾರ ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಅಭಿಪ್ರಾಯಪಟ್ಟಿದೆ.

ಕರ್ನಾಟಕದಲ್ಲಿ ಕಳೆದ ವಾರ..

ಪುಟ 3 ರಿಂದ

ತತ್ತರಿಸುತ್ತಿರುವಾಗ ಸಮೀಕ್ಷೆಗಳು ಹಾಗೂ ನೆರವು ನೀಡಿಕೆಯ ಮಾತಿನಲ್ಲೇ ಕಾಲ ತಳ್ಳುತ್ತಿರುವಾಗ ಈ ಆಯ್ಕೆ ನಡೆದಿದೆ. ಬೆಳೆ ಸಾಲ ತೀರಿಸಲಾಗದೇ ರಾಜ್ಯದಸುಮಾರು 120 ರೈತ ಕುಟುಂಬ ಆತ್ಮಹತ್ಯೆಗೆ ಈಡಾಗಿರುವಾಗ, ಏನೂ ಕ್ರಮ ವಹಿಸದೆ ಸಾವು ತರುವ ಕೃಷಿ-ವಿದ್ಯುತ್ ನೀತಿಗಳನ್ನೇ ಹೆಗ್ಗಳಿಕೆಯೆಂದು ಮುಂದುವರಿಸಲಾಗುತ್ತಿದೆ. ರಾಜ್ಯದ ಪ್ರತಿಯೊಂದನ್ನು ಖಾಸಗಿಕರಿಸಲು ಹವಣಿಸುತ್ತಿರುವಾಗ ಅವರ ಶಿಕ್ಷಣದ ಕಾಳಸಂತೆಗೆ ಹಣಕಾಸಿನ ಭ್ರಷ್ಟಾಚಾರಕ್ಕೆ, ದಲಿತರ ಮೇಲೆ, ರೈತ-ಕೂಲಿಕಾರ-ಕಾರ್ಮಿಕರ ಹಕ್ಕುಗಳ ಮೇಲೆ ಗದಾಪ್ರಹಾರ ನಡೆಸಿ, ಸಾವು-ನೋವಿಗೆ ತಂದಿರುವುದಕ್ಕೆ ಈ ಆಯ್ಕೆಯೇ? ಹೈಟೆಕ್ ರಾಕ್ಷಸರ ಆಡಳಿತದಲ್ಲಿ ಒಂದ್ಹೊತ್ತಿನ ಗಂಜಿ ಕಳೆದುಕೊಳ್ಳಬೇಕಾಗಿ ಬಂದ ಕೋಟ್ಯಾಂತರ ಜನರ ಪಡಿತರ ಹಕ್ಕು ಕಸಿದುಕೊಂಡಿರುವುದಕ್ಕೆ ಈ ಆಯ್ಕೆಯೆ? ನಗರದಲ್ಲಿ ಹೆಚ್ಚುತ್ತಿರುವ ಕೊಲೆ, ಸುಲಿಗೆ, ದರೋಡೆಗಳ ದಾಖಲೆಗಳಿಗೆ ಈ ಪುರಸ್ಕಾರವೇ? ಹೀಗೆ ಕೃಷ್ಣರ ಕುಖ್ಯಾತಿ ಸಾಧನೆ ನಿಲ್ಲದೇ ಬೆಳೆಯುತ್ತದೆ. ಇವಾವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ದೆಹಲಿಯ 'ನಿಯಂತ್ರಿತ' ವರದಿಗಳು ತಿರಸ್ಕರಿಸಲು ಯೋಗ್ಯವಾದವುಗಳು.

ತಾವೇ ನ್ಯಾಯದ ಸತ್ಯದ ನಡುಗಂಬಗಳೆಂದು ಬೊಗಳೆ ಹೊಡೆಯುವ ಈ ಪತ್ರಿಕೋದ್ಯಮಿಗಳಿಗೆ ಪ.ಬಂಗಾಳ, ತ್ರಿಪುರಾದಂತಹ ಎಡರಂಗಗಳ ಸಾಧನೆ ಗೋಚರಿಸಲಿಲ್ಲವೇ? ಜನರೇ ಅಲ್ಲಿ ಅವರನ್ನು ಮತ್ತೆ ಮತ್ತೆ ಆರಿಸುತ್ತಿದ್ದರೂ ಈ ಮಾಧ್ಯಮದ ಗಾಂಧಾರರಿಗೆ ಇದು ಕಾಣಲಿಲ್ಲವೇ? ಸತ್ಯಗಳನ್ನು ಒಪ್ಪಿಕೊಳ್ಳದ ಇವರದ್ದು ಎಂತಹ ಪತ್ರಿಕೋದ್ಯಮ?

ಹೇಗೆ ಕೃಷ್ಣರವರು ಬಹುರಾಷ್ಟ್ರೀಯ ಕಂಪನಿ, ವಿಶ್ವಬ್ಯಾಂಕ್, ಖಾಸಗಿ ಲೂಟಿಕೋರರಿಗೆ ಪ್ರಿಯರು, ಕೃಷ್ಣನಿಂದ ಪ್ರಯೋಜನ ಬಾಚಿಕೊಂಡ ಮೇಲೆ, ಇನ್ನೂ ಬಾಚಿಕೊಳ್ಳಲು ಹವಣಿಸುತ್ತಿರುವಾಗ ಇದು ಮಧ್ಯಂತರ ರಿವಾರ್ಡ್ ಅಷ್ಟೆ. ಇದರಿಂದ ಕೃಷ್ಣ ವಿರುದ್ಧ ಬೆಳೆಯುತ್ತಿರುವ ಆಂತರಿಕ ಅತೃಪ್ತಿ ಅದುಮಿಡಲು ಬಳಸುವುದು ಹಾಗೂ ಸೋನಿಯಾಗಾಂಧಿಗೂ ತಾಕೀತು ಮಾಡುವುದು ಇಂತಹ ಸಮೀಕ್ಷೆಯ ಉದ್ದೇಶವಷ್ಟೆ. ಇಂತಹ ದಂತಗೋಪುರವನ್ನು ಜನರ ನಿಟ್ಟುಸಿರು - ಹೋರಾಟದ ಅಲೆಗಳು ಉರುಳಿಸದೇ

ವಿ.ವಿ.-ಸಹಕಾರಿ ಮಸೂದೆಗಳ ತಿದ್ದುಪಡಿ ಅಂಗೀಕಾರ ಕರಾಳ ಕ್ರಮ

ಅತ್ಯಂತ ಪ್ರಬಲ ವಿರೋಧವಿದ್ದ ಅನಾಹುತಕಾರಿ ತಿದ್ದುಪಡಿಗಳುಳ್ಳ ಕರ್ನಾಟಕ ವಿಶ್ವವಿದ್ಯಾಲಯ ಮಸೂದೆ 2000 ಹಾಗೂ ಸಹಕಾರಿ ಕಾಯ್ದೆಗಳಿಗೆ ತಿದ್ದುಪಡಿ ಮಸೂದೆಗಳನ್ನು ರಾಜ್ಯ ಸರ್ಕಾರವು ವಿಧಾನಸಭೆ ಹಾಗೂ ವಿಧಾನ ಪರಿಷತ್‌ಗಳಲ್ಲಿ ಅಂಗೀಕರಿಸಿಕೊಂಡಿವೆ. ಈ ತಿದ್ದುಪಡಿ (ಹಿಂದೆ ಐಕ್ಯರಂಗದಲ್ಲಿ ವಿವರವಾಗಿ ಪ್ರಕಟಿಸಲಾಗಿದೆ) ಇದ್ಯಾವುದೇ ಕಿರಿಕಿರಿಯಾಗಿದ್ದು ಜನತಂತ್ರದ ಕತ್ತು ಹಿಸುಕುವಂತಹವುಗಳೆಂದು ಎರಡೂ ಸದನಗಳಲ್ಲಿಯೂ, ಹೊರಗೂ ಕೆಲವು ಜನಪ್ರತಿನಿಧಿಗಳು ಮತ್ತು ಜನತೆಯು ವ್ಯಾಪಕಹೋರಾಟ ನಡೆಸಿದ್ದವು. ಈ ವಿರೋಧ ಯಾಕೆಂದು ಸರ್ಕಾರ ಕುಲಂಕುಶವಾಗಿ ಪರಿಶೀಲಿಸಲು, ವಾದ ಆಲಿಸಲು ಬಯಸಲಿಲ್ಲ. ಅಂತಿಮ ಹಂತದಲ್ಲಿಯೂ ಪ್ರತಿಭಟನೆ ಸದನದಲ್ಲಿ ವ್ಯಕ್ತವಾದಾಗ, ಸರ್ಕಾರದ ತನ್ನ ಪಟ್ಟು ಬಿಡದೇ ವಿರೋಧ ಪಕ್ಷಗಳು ಸಭಾತ್ಯಾಗ ಮಾಡುವಂತಹ ಸ್ಥಿತಿ ನಿರ್ಮಿಸಿ, ಅಂಗೀಕರಿಸಿದ್ದು ಖಂಡನೀಯ.

ಇದು ಕಾಂಗ್ರೆಸ್‌ನ ಸರ್ವಾಧಿಕಾರಿ ಮನೋಭಾವವನ್ನು ಮತ್ತೆ ತೋರಿಸಿದೆ. ಇದರಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿ ವಿದೇಶಿ ವಿ.ವಿ.ಗಳ ಪ್ರವೇಶಕ್ಕೆ ಮುಕ್ತ ಅವಕಾಶ, ವಿದ್ಯಾರ್ಥಿ, ಶಿಕ್ಷಕ - ಸಿಬ್ಬಂದಿಗಳ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಕೊಡಲಿಯೇಟು- ಪ್ರಸ್ತಾವ, ಸಹಕಾರಿ ಕ್ಷೇತ್ರದಲ್ಲಿ ಸರ್ಕಾರ -ಆಳುವ ಪಕ್ಷ ತನಗೆ ಬೇಡ ಎನ್ನಿಸಿದವರ ಮೇಲೆ ಸೇಡು ತೀರಿಸಿಕೊಳ್ಳಲು ಚುನಾಯಿತ ಸಮಿತಿಗಳನ್ನೇ ರದ್ದು ಮಾಡುವ ಸರ್ವಾಧಿಕಾರಿ ಅವಕಾಶ ಪಡೆದುಕೊಂಡಿದೆ. ಇದು ವಿಶ್ವಬ್ಯಾಂಕ್‌ನಿಂದಸಾಲ ಪಡೆದುಕೊಳ್ಳುತ್ತಿರುವಾಗ ಶಿಸ್ತು, ಹೊಣೆಗಾರಿಕೆ ತರಲು ಅಗತ್ಯವೆಂದು ಸಹಕಾರಿ ಸಚಿವರು ವಿಧಾನಸಭೆಯಲ್ಲಿ ಸಮರ್ಥಿಸಿಕೊಂಡಿರುವುದು ಹೇಸಿಗೆ ತರುತ್ತದೆ.


ಚೀನಾದ ಕಾರ್ಮಿಕ ಕಾನೂನುಗಳು

ಭಾರತದಲ್ಲಿ ಕಾರ್ಮಿಕರು ಕಡಿಮೆ ಕೂಲಿಗೆ ದುಡಿಯುವಂತೆ ಮಾಡಲು ಚೀನಾ ದೇಶದ ಬಗ್ಗೆ ಅಪಪ್ರಚಾರ. ಆ ಮೂಲಕ ವಿಶ್ವವ್ಯಾಪಾರ ಸಂಸ್ಥೆ (ಡಬ್ಲ್ಯುಟಿಓ), ವಿಶ್ವಬ್ಯಾಂಕ್ ಹಾಗೂ ಐಎಂಎಫ್‌ಗಳ ಆಮದು ನೀತಿ ಆಹಾರ ಸಬ್ಸಿಡಿ ಅಥವಾ ಸಹಾಯ ಧನ ಕಡಿತ ಇವುಗಳಿಂದ ಲಕ್ಷಾಂತರ ಕಾರ್ಖಾನೆಗಳು ಮುಚ್ಚುತ್ತಿರುವುದು ಇವುಗಳನ್ನು ಮರೆಮಾಚುವ ಪ್ರಯತ್ನ. ಹಾಗಿದ್ದರೆ ಚೀನಾದಲ್ಲಿ ಕಾರ್ಮಿಕ ಕಾನೂನುಗಳು, ಕಾರ್ಮಿಕ ಸಂಬಂಧಗಳು, ಇವುಗಳ ಬಗ್ಗೆ ನಿಜ ಸ್ಥಿತಿ ಏನು?

ಜಿ.ಎನ್.ನಾಗರಾಜ್

ಚೀನಾದಲ್ಲಿ ಕಾರ್ಮಿಕ ಕಾನೂನುಗಳೇ ಇಲ್ಲ. ಕನಿಷ್ಟ ಕೂಲಿಕಾಯಿದೆ ಇಲ್ಲ, 24 ತಾಸೂ ದುಡಿಸುತ್ತಾರೆ ಹಾಗೂ ಅತಿ ಕಡಿಮೆ ಸಂಬಳ ಕೊಡುತ್ತಾರೆ. ಆದ್ದರಿಂದಲೇ ಚೀನಾದಲ್ಲಿ ತಯಾರಾಗುವ ವಸ್ತುಗಳು ಬಹಳ ಅಗ್ಗ. ಭಾರತದಲ್ಲಿ ಕೂಲಿ ಹೆಚ್ಚು, ಕೆಲಸಗಳ್ಳತನ ಹೆಚ್ಚು ಇತ್ಯಾದಿ ಅಪಪ್ರಚಾರ ಭಾರತದಲ್ಲಿ ಬಂಡವಾಳಶಾಹಿಗಳಿಂದ ನಡೆಯುತ್ತಿದೆ. ಬೆಂಗಳೂರಿನ ಮಾಲೀಕರ ನಡುವೆ ಇಂತಹ ಒಂದು ಟಿಪ್ಪಣಿ ಓಡಾಡುತ್ತಿದೆ. ವಿವಿಧ ಮೂಲಗಳಿಂದ ಈ ಮಾಹಿತಿ ಸಂಗ್ರಹಿಸಿದ್ದಾಗಿ ಹೇಳಿರುವ ಅದರ ತಯಾರಕರು ತಮ್ಮ ಮೂಲ ಯಾವುದೆಂಬುದನ್ನು ಅಲ್ಲಿ ಎಲ್ಲಿಯೂ ಸೂಚಿಸುವುದಿಲ್ಲ. ತಮ್ಮ ಮೂಲಗಳೆಲ್ಲಾ ಅನಧಿಕೃತವೆಂಬುದನ್ನು ಈ ಸಂಗತಿಯೇ ಸಾರುತ್ತದೆ. ಆ ಟಿಪ್ಪಣಿ ಸ್ವರೂಪ ಹಾಗೂ ಅದರಲ್ಲಿನ ಮೇಲೆ ಉಲ್ಲೇಖಿಸಿದ ಬೀಸುಮಾತಿನ ಹೇಳಿಕೆಗಳೇ ಸೂಚಿಸುತ್ತವೆ. ಅವರಿವರು ಅಂತೆಕಂತೆಯಾಗಿ ಮಾತನಾಡಿಕೊಂಡದ್ದನ್ನೇ ಒಂದು ಟಿಪ್ಪಣಿಯಾಗಿ ರೂಪಿಸಿದ್ದಾರೆ ಎನ್ನುವುದು.

ಆದರೆ ಆಶ್ಚರ್ಯವೆಂದರೆ ಎಫ್‌ಕೆಸಿಸಿಐಫ್ (ಫೆಡರೇಷನ್ ಆಫ್ ಕರ್ನಾಟಕ ಕಾಮರ್ಸ್ ಅಂಡ್ ಇಂಡಸ್ಟ್ರೀಸ್) ನಂತಹ ಒಂದು ಉನ್ನತ ಸಂಸ್ಥೆಯ ಮುಖಪತ್ರಿಕೆಯ ಮೇ ಸಂಚಿಕೆಯಲ್ಲಿ ಅದನ್ನು ಪ್ರಕಟಿಸಲಾಗಿದೆ. ಜೊತೆಗೆ ಕರ್ನಾಟಕ ಮಾಲೀಕರು ಕಾರ್ಮಿಕ ಸಂಘಗಳೊಂದಿಗೆ ವೇತನ ಮತ್ತಿತರ ವಿಷಯಗಳ ಬಗ್ಗೆ ಮಾತುಕತೆಗೆ ಕುಳಿತಾಗ ಇಸ್ಪೀಟಾಟದಲ್ಲಿ ಅತ್ಯಂತ ಹೆಚ್ಚು ಬೆಲೆಯ ಎಲೆಯನ್ನು ಎಸೆದು ಇದನ್ನು ಎದುರಿಸುವ ಎಲೆ ನಿಮ್ಮಲ್ಲಿ ಇದೆಯೆ ಎಂದು ಸವಾಲೆಸೆದು ಬೀಗುವಂತೆ ಈ ಟಿಪ್ಪಣಿಯಲ್ಲಿರುವುದನ್ನು ವೇದದ ಮಂತ್ರಗಳಂತೆ ಉಗ್ಗಡಿಸುತ್ತಿದ್ದಾರಂತೆ.



ವಿಶೇಷ ಕೈಗಾರಿಕಾ ವಲಯ

ಭಾರತದಲ್ಲಿ ಕಾರ್ಮಿಕರು ಕಡಿಮೆ ಕೂಲಿಗೆ ದುಡಿಯುವಂತೆ ಮಾಡಲು ಚೀನಾ ದೇಶದ ಬಗ್ಗೆ ಅಪಪ್ರಚಾರ. ಆ ಮೂಲಕ ವಿಶ್ವವ್ಯಾಪಾರ ಸಂಸ್ಥೆ (ಡಬ್ಲ್ಯುಟಿಓ), ವಿಶ್ವಬ್ಯಾಂಕ್ ಹಾಗೂ ಐಎಂಎಫ್‌ಗಳ ಆಮದು ನೀತಿ ಆಹಾರ ಸಬ್ಸಿಡಿ ಅಥವಾ ಸಹಾಯ ಧನ ಕಡಿತ ಇವುಗಳಿಂದ ಲಕ್ಷಾಂತರ ಕಾರ್ಖಾನೆಗಳು ಮುಚ್ಚುತ್ತಿರುವುದು ಇವುಗಳನ್ನು ಮರೆಮಾಚುವ ಪ್ರಯತ್ನ. ಹಾಗಿದ್ದರೆ ಚೀನಾದಲ್ಲಿ ಕಾರ್ಮಿಕ ಕಾನೂನುಗಳು, ಕಾರ್ಮಿಕ ಸಂಬಂಧಗಳು, ಇವುಗಳ ಬಗ್ಗೆ ನಿಜ ಸ್ಥಿತಿ ಏನು?

ಚೀನಾದ ಕ್ರಾಂತಿ ಮತ್ತು ಅದರ ಸರ್ಕಾರ

ಈ ಬಗ್ಗೆ ತಿಳಿದುಕೊಳ್ಳಬಯಸುವಾಗ ಮೊತ್ತ ಮೊದಲು ನಾವು ನೆನಪಿನಲ್ಲಿಡಬೇಕಾದದ್ದು ಚೀನಾದಲ್ಲಿ ಕ್ರಾಂತಿಯಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ಎರಡು ವರ್ಷದ ನಂತರ. 1949 ರಲ್ಲಿ ಚೀನಾದಲ್ಲಿ ಕ್ರಾಂತಿಯಾದ ನಂತರ ಅಧಿಕಾರದಲ್ಲಿರುವುದು ಕಾರ್ಮಿಕವರ್ಗದ ನೇತೃತ್ವದಲ್ಲಿರುವ ರೈತ ಮೊದಲಾದ ದುಡಿಯುವ ಜನರ ಜನತಾರಂಗ ಹಾಗೂ ಕ್ರಾಂತಿಯಾದ ಕೂಡಲೇ ವಿದೇಶಿ ಹಾಗೂ ದೊಡ್ಡ ದೊಡ್ಡ ದೇಶಿ ಬಂಡವಾಳಿಗರ ಕಾರ್ಖಾನೆಗಳನ್ನು ರಾಷ್ಟ್ರೀಕರಣ ಮಾಡಲಾಯಿತು. ಆದ್ದರಿಂದ 1949 ರಿಂದ 1979 ರವರೆಗೆ ಮೂವತ್ತು ವರ್ಷಗಳ ಕಾಲ ಖಾಸಗೀ ಕಾರ್ಖಾನೆಗಳೇ ಇರಲಿಲ್ಲ. ಕೇವಲ ಕಾರ್ಮಿಕವರ್ಗದ ಸರ್ಕಾರ ನಡೆಸುವ ಸರ್ಕಾರಿ ಕಾರ್ಖಾನೆಗಳು ಅಥವಾ ವಿವಿಧ ಪ್ರದೇಶದ ಜನಸಮುದಾಯ ನಡೆಸುವ ಸಾಮೂಹಿಕ ಕಾರ್ಖಾನೆಗಳು. 1979 ರಿಂದೀಚೆಗೆ ಮಾತ್ರವೇ ಕೆಲವು ಖಾಸಗೀ ಹಾಗೂ ವಿದೇಶಿ ಬಂಡವಾಳದ ಕಾರ್ಖಾನೆಗಳು ಬಂದಿವೆ.

ಹೀಗಾಗಿ ಅಲ್ಲಿಯ ಕಾರ್ಖಾನೆಗಳೆಂದರೆ ಅಲ್ಲಿಯ ಕಾರ್ಮಿಕರು, ಕಾರ್ಮಿಕ ಸಂಘಗಳ ಮೂಲಕ ಮತ್ತು ತಾವೇ ಸದಸ್ಯರು, ನಾಯಕರು ಆಗಿರುವ ಕಮ್ಯುನಿಸ್ಟ್ ಪಕ್ಷದ ಮೂಲಕ ನಡೆಸುವ ಕಾರ್ಖಾನೆಗಳು. ಅಲ್ಲಿ ಕಾರ್ಖಾನೆಗಳ ಆಡಳಿತಾಧಿಕಾರಿಗಳನ್ನು - ನಿರ್ದೇಶಕರು, ಜನರಲ್ ಮ್ಯಾನೇಜರಗಳು ಇಂತಹವರನ್ನು ಕಾರ್ಮಿಕರೇ ಚುನಾವಣೆಯ ಮೂಲಕ ಆರಿಸುವ ಅಥವಾ ತೆಗೆದೊಗೆಯುವ ಹಕ್ಕು ಪಡೆದುಕೊಂಡಿದ್ದಾರೆ ಎಂಬುದು.

ಕಾಂ.ಎಂ.ಕೆ.ಪಂಧೆಯವರು ತಮ್ಮ ಸಂದರ್ಶನದಲ್ಲಿ (ಇದೇ ಸಂಚಿಕೆಯಲ್ಲಿ) ತಿಳಿಸಿದಂತೆ ಅಲ್ಲಿಯ ಕಾರ್ಮಿಕರ ಸರ್ವಸದಸ್ಯರ ಸಭೆ ಅದನ್ನು **ವರ್ಕರ್ಸ್ ಕಾಂಗ್ರೆಸ್**(ಕಾರ್ಮಿಕರ ಅತ್ಯುನ್ನತ ಸಭೆ) ಎಂದು ಕರೆಯುತ್ತಾರೆ - ಕಾರ್ಖಾನೆಯ ಆಗುಹೋಗುಗಳನ್ನು - ಕಾರ್ಖಾನೆಯ ವಿಸ್ತರಣೆ, ಹಣ ಹೂಡಿಕೆ, ಯಂತ್ರಗಳ ಆಧುನೀಕರಣ, ಲಾಭ, ಲಾಭದ ಎಷ್ಟು ಪಾಲು ಕಾರ್ಖಾನೆಯ ಮುಂದಿನ ಬೆಳವಣಿಗೆಗೆ, ಎಷ್ಟು ಪಾಲು ಸಂಬಳ ಹಾಗೂ ಬೋನಸ್‌ಗೆ ಎಂಬುದನ್ನು ಕೇವಲ ಕಾರ್ಮಿಕ ಸಂಘದ ನಾಯಕರಲ್ಲ ಕಾಂಗ್ರೆಸ್ ನಿರ್ಧರಿಸುತ್ತದೆ. ಇನ್ನು ಕಾರ್ಖಾನೆಯ ಆಡಳಿತ ಮಂಡಳಿಯಲ್ಲಿ ಕಾರ್ಮಿಕರೇ ಆಯ್ಕೆ ಮಾಡಿದ ಕಾರ್ಖಾನೆಯ ಆಡಳಿತವರ್ಗದ ಜೊತೆಗೆ ಕಾರ್ಮಿಕರ ಪ್ರತಿನಿಧಿಗಳೇ ಬಹುಭಾಗ ಇರುತ್ತಾರೆ.

ಈ ಸಂಬಳಗಳನ್ನು ಭಾರತದ ಪರಿಸ್ಥಿತಿಗೆ ಹೋಲಿಸಿ ಒಂದು ಚಿತ್ರದ ಮೂಲಕ ಬಿಡಿಸಲು ಯತ್ನಿಸಿದರೆ ಇನ್ನೂ ಹೆಚ್ಚು ಅರ್ಥಪೂರ್ಣವಾಗಬಹುದು.

ಬಹುರಾಷ್ಟ್ರೀಯ ಕಂಪನಿಗಳು

ಇದು ಚೀನಾದ ಕಾರ್ಖಾನೆಗಳ ಪರಿಸ್ಥಿತಿಯಾದರೆ ಇನ್ನು ಚೀನಾದಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕಾರ್ಮಿಕ-ಆಡಳಿತವರ್ಗದ ಸಂಬಂಧ ಹೇಗಿದೆ?

ಇಂದು ಭಾರತಕ್ಕೆ ಹೋಲಿಸಿದರೆ ಪ್ರತಿವರ್ಷ 30-40 ಪಟ್ಟು ಹೆಚ್ಚು ವಿದೇಶಿ ಬಂಡವಾಳ ಚೀನಾದಲ್ಲಿ ಹೂಡಲ್ಪಟ್ಟಿದೆ. ಆದರೆ ಈ **ಬಂಡವಾಳದ ಶೇ 70 ಭಾಗ - ಅಮೆರಿಕನ್ ಮೊದಲಾದ ಸಾಮ್ರಾಜ್ಯಶಾಹಿ ದೇಶಗಳದ್ದಲ್ಲ. ವಿದೇಶಗಳಲ್ಲಿ ನೆಲಸಿದ ಚೀನಿಯರದ್ದು - ಟೈವಾನ್, ಹಾಂಕಾಂಗ್, ಸಿಂಗಪುರ್, ಮಲೇಶ್ಯಾ ಇತ್ಯಾದಿ ದೇಶಗಳಿಂದ ಹರಿದುಬಂದ ಹಣ.**

ಹೀಗೆ ಹತ್ತಾರು ಸಾವಿರ ಕೋಟಿ ಡಾಲರುಗಳು ಚೀನಾಕ್ಕೆ ಹರಿಯುತ್ತಿದ್ದರೂ ಕೂಡ **ಚೀನಾದ ಉತ್ಪಾದನೆಯಲ್ಲಿ ಶೇ 75 ಭಾಗ ಸರ್ಕಾರಿ ಹಾಗೂ ಸಾಮೂಹಿಕ ವಲಯಗಳದ್ದು. ವಿದೇಶಿ ಬಂಡವಾಳದ ಪಾತ್ರ ಕೇವಲ ಶೇ 15 ರಷ್ಟು ಮಾತ್ರ** (1997 ರಲ್ಲಿ) ವಿದೇಶಿ ಬಂಡವಾಳವೂ ಕೂಡ ಬಹುತೇಕ ಜಂಟಿ ಉದ್ಯಮಗಳೇ ಹೊರತು ನೇರ ವಿದೇಶಿ ಕಂಪನಿಗಳಲ್ಲ. ಈ ಉದ್ಯಮಗಳು ಚೀನಾದಲ್ಲಿನ ಉತ್ಪಾದನೆಯನ್ನೆಲ್ಲಾ ಅಲ್ಲಿಯೇ ಮಾರಿ ಚೀನಾದ ಕೈಗಾರಿಕೆಗಳಿಗೆ ಹಾನಿ ಮಾಡುವುದಕ್ಕೆ ಅವಕಾಶವಿಲ್ಲ. ಸ್ಥಳೀಯ ಕೈಗಾರಿಕೆಗಳು ಪೂರೈಸಲಾಗದ ಚೀನಾದ ಅವಶ್ಯಕತೆಯನ್ನು ಪೂರೈಸಲು ಅಗತ್ಯವಾದಷ್ಟು ಮಾತ್ರ ಅಲ್ಲಿನ ವಿದೇಶಿ ಕೈಗಾರಿಕೆಗಳ ಉತ್ಪಾದನೆಯನ್ನು ಅಲ್ಲಿ ಮಾರಲು ಅವಕಾಶ.

ಹೀಗಾಗಿ ಬಹುತೇಕವಾಗಿ ಶೇ 90 - ಶೇ 80 ರಷ್ಟು ಕಡ್ಡಾಯವಾಗಿ ರಫ್ತು ಮಾಡಲೇಬೇಕು. ತಮ್ಮ ಕೈಗಾರಿಕೆಗಳು ಎಷ್ಟು ಉಪಕರಣ ಯಂತ್ರಗಳನ್ನು ಆಮದು ಮಾಡಿಕೊಳ್ಳುತ್ತವೆಯೊ ಅದಕ್ಕಿಂತ ಹೆಚ್ಚು ರಫ್ತಾಗಬೇಕು ಎಂದ ಶರತ್ತನ್ನು ವಿಧಿಸಲಾಗಿದೆ.


ಸೀಮಿತ ಅವಧಿ

ಹೀಗೆ ವಿದೇಶಿ ಬಂಡವಾಳದ ಕಾರ್ಖಾನೆಗಳನ್ನು ಚೀನಾಕ್ಕೆ ಆಹ್ವಾನಿಸಿರುವುದು ಅವುಗಳಿಂದ ತಂತ್ರಜ್ಞಾನವನ್ನು ಪಡೆದುಕೊಳ್ಳುವುದಕ್ಕಾಗಿಯೇ. ಹೀಗಾಗಿ ಚೀನಾದಲ್ಲಿಲ್ಲದ ತಂತ್ರಜ್ಞಾನವನ್ನು ತರುವ ಕೈಗಾರಿಕೆಗಳಿಗೆ ಮಾತ್ರ ಆಹ್ವಾನ. ಅದರಿಂದಾಗಿ ಅಲ್ಲಿ ಇನ್ನೊಂದು ವಿಶೇಷ ಶರತ್ತನ್ನು ವಿದೇಶಿ ಕಂಪನಿಗಳ ಮೇಲೆ ಹಾಕಲಾಗಿದೆ. **ಚೀನಾದಲ್ಲಿ ಸ್ಥಾಪನೆಯಾದ ಒಂದು ವಿದೇಶಿ ಕಂಪನಿ ಭಾರತದಲ್ಲಿನಂತೆ ತನ್ನ ಜೀವಮಾನ ಪೂರ್ಣವಾಗಿ ಲಾಭವನ್ನು ಕೊಳ್ಳೆಹೊಡೆಯುತ್ತಾ ಇರಲು ಅವಕಾಶವಿಲ್ಲ.** ಒಂದು ವಿದೇಶಿ ಕಂಪನಿಯು ಚೀನಾದಲ್ಲಿ ಉತ್ಪಾದನೆ ಮಾಡಲು ಬಿಡುವ ಅವಧಿ ಕೇವಲ 10 ರಿಂದ 30 ವರ್ಷಗಳು. ಅದು ಕೂಡ ಅವರು ತರಲಿರುವ ವಿದೇಶಿ ತಂತ್ರಜ್ಞಾನ ಅದರಿಂದ ಚೀನಾ ದೇಶಕ್ಕೆ ಆಗಲಿರುವ ಪ್ರಯೋಜನವನ್ನು ಅವಲಂಬಿಸಿ. ಆ ಅವಧಿಯಲ್ಲಿ ತಾನು ಹೂಡಿದ ಬಂಡವಾಳಕ್ಕೆ ತಕ್ಕ ಲಾಭವನ್ನು ಪಡೆದು,

ಪುಟ 10 ಕ್ಕೆ



ಕೆಲಸದ ನಂತರ ಹೊರಬರುತ್ತಿರುವ ಕಾರ್ಮಿಕರು



ಚೀನಾದಲ್ಲಿ ಕಾರ್ಮಿಕರನ್ನು ಮನಬಂದಂತೆ ದುಡಿಸಲಾಗುತ್ತಿದೆಯೇ?

ಚೀನಾದಲ್ಲಿ ತಯಾರಾದ ವಸ್ತುಗಳ ಬೆಲೆ ಭಾರತದ ಅಥವಾ ಇತರೆ ದೇಶಗಳಿಗಿಂತ ಕಡಿಮೆ ಏತಕ್ಕೆ ಎಂಬ ಪ್ರಶ್ನೆ ಹಲವರನ್ನು ಕಾಡುತ್ತಲಿದೆ. ವಿದೇಶಿ ವಸ್ತುಗಳಿಗೆ ಆಮದಿಗೆ ಪ್ರಮಾಣಾತ್ಮಕ ನಿರ್ಬಂಧವನ್ನು ಭಾರತ ಸರ್ಕಾರ ಪೂರ್ಣವಾಗಿ ತೆಗೆದುಹಾಕಿದಾಗ ಇನ್ನೇನು ಭಾರತದ ಮಾರುಕಟ್ಟೆ ಚೀನಾದ ವಸ್ತುಗಳಿಂದಲೇ ತುಂಬಿ ಬಿಡಲಿವೆಯೆಂದು ಭಾರೀ ಪ್ರಮಾಣದಲ್ಲಿ ಪ್ರಚಾರ ನಡೆಸಲಾಯಿತು. ಪತ್ರಿಕೆಗಳಲ್ಲಿ ಲೇಖನಗಳು ಈ ಗುಮಾನಿಯನ್ನು 'ವರ್ಣರಂಜಿತ'ವಾಗಿ ತೋರಿಸಿದರೆ ಕೆಲವರಂತೂ ಇಂಟರ್‌ನೆಟ್‌ನಲ್ಲಿ ದೊರೆತ ಮಾಹಿತಿಯಿಂದ ಚೀನಾವಸ್ತುಗಳ ಪಟ್ಟಿಯನ್ನೇ ಮುದ್ರಿಸಿ ಹಂಚಿದರು. ಇದನ್ನೇ ಮುಂದೆಮಾಡಿ ದೇಶದ ಕೈಗಾರಿಕಾ ಮಾಲಿಕರು ಹೀಗೆ ಪ್ರಕಟಿಸಿದ್ದು. ಅವರೇ ತಾವು ಸ್ಪರ್ಧೆ ಎದುರಿಸಬೇಕಾಗಿರುವುದರಿಂದ ಭಾರತದ ಕಾರ್ಮಿಕರು ಹೆಚ್ಚು ದುಡಿಯಬೇಕು, ಸಂಬಳ ಹಾಗೂ ಸೌಲಭ್ಯಗಳನ್ನು ಕಡಿತಗೊಳಿಸಬೇಕು ಎಂಬ ವಾದ ಮಂಡಿಸತೊಡಗಿದರು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಚೀನಾದಲ್ಲಿ ಯಾವುದೇ ಕಾರ್ಮಿಕ ಕಾನೂನುಗಳು ಇಲ್ಲವೆಂದು, ವೇತನಗಳು ತೀರಾ ಕಡಿಮೆಯೆಂದೂ ಅಲ್ಲಿನ ಆಡಳಿತಕ್ಕೆ ಮನಬಂದಂತೆ ನಿರ್ಧಾರ ಮಾಡಲು ಅವಕಾಶವಿದೆಯೆಂದೂ ತಪ್ಪಿದರೆ ಥರಥರದ ದಂಡನೆಗಳು ಇವೆಯೆಂದು, ಊದತೊಡಗಿದರು.

ಈ ಸುದ್ದಿಗಳ ಸತ್ಯಾಂಶವೇನು? ಕಾರ್ಮಿಕ ವರ್ಗದ ಪ್ರಭುತ್ವವಿರುವ ಸಮಾಜವಾದೀ ಚೀನಾದಲ್ಲಿ ಕಾರ್ಮಿಕ ಹಕ್ಕು, ಬದುಕು ರಕ್ಷಣೆಯ ಸ್ಥಿತಿಯೇನು? ಕಾರ್ಮಿಕರ ಶ್ರಮವನ್ನು ಹಿಂಡುವುದರಿಂದಲೇ ಚೀನಾದ ವಸ್ತುಗಳ ಬೆಲೆ ಕಡಿಮೆಯಾಗಿದೆಯೇ? ಈ ಎಲ್ಲಾ ಅಂಶಗಳನ್ನು ಸತ್ಯಾಸತ್ಯಾತೆ ಬಿಡಿಸಿಡಲು ಪತ್ರಿಕೆ ಪ್ರಯತ್ನಿಸಿತು. ಆ ಕ್ಷೇತ್ರದಲ್ಲಿ ಪರಿಣತರಿರುವ ಹಲವರೊಂದಿಗೆ ಸಂವಾದಿಸಿತು. ಈ ಪ್ರಕ್ರಿಯೆಯಲ್ಲಿ ಎದುರಾದದ್ದು ದೇಶದ ಅತ್ಯಂತ ಸಮರಧೀರ ಕಾರ್ಮಿಕ ವರ್ಗದ ಸಂಘಟನೆಯ ರಾಷ್ಟ್ರದ ಪ್ರಧಾನ ಕಾರ್ಯದರ್ಶಿ ಡಾ। ಎಂ.ಕೆ. ಪಂಧೆಯವರು.



ಡಾ। ಪಂಧೆಯವರು ಕೇವಲ ಕಾರ್ಮಿಕ ಮುಂದಾಳು ಮಾತ್ರವಲ್ಲ. ದೇಶದ ಕಾರ್ಮಿಕರ ಹಕ್ಕುಗಳು, ಚಳುವಳಿ ಬಗೆಗೆ ಆಳವಾದ ಅಧ್ಯಯನ ನಡೆಸಿದವರು. ಈ ವಿಷಯದ ಸಂಶೋಧನೆಯಿಂದಾಗಿ 'ಡಾಕ್ಟರೇಟ್' ಪದವಿ ಪಡೆದರು.

ಮೇಲಾಗಿ ಜಗತ್ತಿನ ಅನೇಕ ದೇಶಗಳಿಗೆ ಆಗಾಗ ಭೇಟಿ ನೀಡಿ ಕಾರ್ಮಿಕ ವರ್ಗದ ಸ್ಥಿತಿಗತಿ, ಅಲ್ಲಿನ ಆರ್ಥಿಕತೆ, ಕೈಗಾರಿಕೋದ್ಯಮಗಳನ್ನು ವಿವರವಾಗಿ ಬಲ್ಲವರು. ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘ (ILO), ವಿಶ್ವ ವಾಣಿಜ್ಯ ಸಂಘದ (WTO) ಹಲವಾರು ವಿಶ್ವ ವ್ಯಾಪಿ ಸಮ್ಮೇಳನ, ಸಭೆಗಳಲ್ಲಿ ವಿಚಾರ ಸಂಕಿರಣ, ಕಾರ್ಯಾಗಾರಗಳಲ್ಲಿ ಹೂರಣಗಳನ್ನು ಮಥಿಸಿದವರು, ಅಮೃತ ಹಾಗೂ ವಿಷವನ್ನು ಗುರುತಿಸಿದವರು.

ಇದಲ್ಲದೇ ಚೀನಾ ದೇಶಕ್ಕೆ ಅನೇಕ ಬಾರಿ ಭೇಟಿ ಇತ್ತು ಅಲ್ಲಿನ ಸುಧಾರಣೆಗಳು ಮುನ್ನಡೆ ಸಮಸ್ಯೆ ಸವಾಲುಗಳನ್ನು ಕಾರ್ಮಿಕ ವರ್ಗದ ಪರಿಸ್ಥಿತಿಯನ್ನು ಕಣ್ಣಾರೆ ಕಂಡವರು.

ಇಂತಹ ಅನುಭವಿ, ಸಮಾಜ ವಿಜ್ಞಾನಿಯು ಸಿಐಟಿಯುವಿನ ಅಖಿಲ ಭಾರತ ಕಾರ್ಯಕಾರಿ ಸಮಿತಿಯು ಸಭೆಗೆ ಆಗಮಿಸಿದಾಗ ಬಿಡುವಿರದ ಕಲಾಪಗಳು ಆರಂಭಗೊಳ್ಳುವ ಮೊದಲು ಒಂದೆರಡು ತಾಸು ದೊರೆತಾಗ ಅವರೊಂದಿಗೆ ದುಡಿಯುವ ಜನರ ಪ್ರಾಣಮಿತ್ರ ಐಕ್ಯರಂಗ ಸಂದರ್ಶನ ನಡೆಸಿತು.

ಸಂವಾದದ ಸಾರ ಇಲ್ಲಿದೆ, ನೋಡೋಣ ಅವರೇನನ್ನುತ್ತಾರೆ?

ಸಂದರ್ಶನ - ಎಸ್.ಪ್ರಸನ್ನಕುಮಾರ್, ಸಿಐಟಿಯು ರಾಜ್ಯ ಕಾರ್ಯದರ್ಶಿ

ಐಕ್ಯರಂಗ: ಚೈನಾ ದೇಶದ ವಸ್ತುಗಳ ಬೆಲೆಗಳು ಕಡಿಮೆ ಇರಲು ಮುಖ್ಯವಾಗಿ ಆ ದೇಶದ ಕಾರ್ಮಿಕರಿಗೆ ಕಾನೂನು ರಕ್ಷಣೆ ಇಲ್ಲದಿರುವುದ, ಹಕ್ಕುಗಳು ಇಲ್ಲದಿರುವುದು, ಮುಷ್ಕರಗಳೇ ಇಲ್ಲದಿರುವುದು ಮುಖ್ಯ ಕಾರಣ ಎಂಬ ಪ್ರಚಾರ ಅಬ್ಬರವಾಗಿದೆ. ಈ ಬಗ್ಗೆ ನಿಜ ಸ್ಥಿತಿಯೇನು?

ಡಾ। ಪಂಧೆ: ಚೀನಾದಲ್ಲಿ ಕಾರ್ಖಾನೆಗಳನ್ನು ಕಾರ್ಮಿಕ ಸಂಘಗಳೇ ನಿಯಂತ್ರಣ ಮಾಡುತ್ತವೆ. ಕಾರ್ಖಾನೆ ಮೇನೇಜರ್ ಸಂಘದ ನಿಯಂತ್ರಣದಲ್ಲಿರಬೇಕಾಗುತ್ತದೆ. ಕಾರ್ಮಿಕರ ಕೂಲಿ ಹಾಗೂ ಕಾರ್ಖಾನೆಯ ಲಾಭವನ್ನು ಹೇಗೆ ಉಪಯೋಗಿಸಬೇಕೆಂಬುದನ್ನು ಕಾರ್ಮಿಕ ಸಂಘಗಳೇ ನಿರ್ಣಯಿಸುತ್ತವೆ.

ಚೀನಾದೇಶದ ಕಾರ್ಮಿಕರಿಗೆ ಅವರ ವೇತನದ ಶೇ.4 ರ ಖರ್ಚಿನಲ್ಲಿ ವಸತಿ, ವಿದ್ಯುತ್ ಹಾಗೂ ಅಡುಗೆ ಅನಿಲ (ಅಲ್ಲಿ ನಮ್ಮಲ್ಲಿರುವ ಹಾಗೆ ಸಿಲಿಂಡರ್ ಅಲ್ಲ ಬದಲಾಗಿ ಪೈಪುಮೂಲಕ ಅನಿಲವನ್ನು ಮನೆಮನೆಗೆ ಸಂಪರ್ಕ ನೀಡಲಾಗುತ್ತದೆ.) ಒದಗಿಸಲಾಗುತ್ತದೆ. ಕಾರ್ಮಿಕರ ಮಕ್ಕಳಿಗೆ ಆರೋಗ್ಯದ ಚಿಕಿತ್ಸೆ ಸಂಪೂರ್ಣ ಉಚಿತವಾಗಿ ಕೊಡಲಾಗುತ್ತದೆ.

ಯಾವುದೇ ಕಾರ್ಮಿಕನ ಮೇಲೆ ಕ್ರಮ ಕೈಗೊಳ್ಳುವ ಮೊದಲು ಕಾರ್ಮಿಕ ಸಂಘದ ಪರವಾನಿಗೆ ಪಡೆಯಬೇಕಾಗುತ್ತದೆ. ಹೀಗೆ ಕಾರ್ಮಿಕರ ಹಕ್ಕುಗಳ ಖಚಿತವಾಗಿ ರಕ್ಷಣೆ ಇರುವಾಗ ಅಲ್ಲಿ ಆಗಿಂದಾಗ್ಗೆ ಮುಷ್ಕರದ ಅಗತ್ಯ ಎಲ್ಲಿಂದ ಬರುತ್ತದೆ? ಅಲ್ಲಿ ಕಾರ್ಮಿಕರೇ ಆಳುವ ವರ್ಗ. ಚೀನಾದಲ್ಲಿ ಜೀವನ ಮಟ್ಟ ಭಾರತಕ್ಕೆ ಹೋಲಿಸಿದರೆ ದುಪ್ಪಟ್ಟಾಗಿದೆ. ಅಲ್ಲಿಯ ವಿದ್ಯುತ್ ಉತ್ಪಾದನಾ ವೆಚ್ಚ ಭಾರತಕ್ಕೆ ಹೋಲಿಸಿ ನೋಡಿದರೆ ಶೇ. 50 ಹಾಗೂ ಕಚ್ಚಾ ವಸ್ತುಗಳ ಬೆಲೆ ಶೇ. 30 ಕಡಿಮೆ ಆಗುತ್ತದೆ. ಆದರೆ ವಿದ್ಯುತ್ ಉತ್ಪಾದಕತೆ 5,6 ಪಟ್ಟು ಹೆಚ್ಚಾಗಿದೆ. ಭಾರತದಂತೆ ಕೇವಲ ಬಹುರಾಷ್ಟ್ರೀಯ ಕಂಪನಿಗಳ ಲಾಭಕ್ಕಾಗಿ ಎನ್ರಾನ್, ಕೋಜೆಂಟ್ರಿಕ್ಸ್ ಮುಂತಾದವರಿಗೆ ನೀಡಿದ ಹಾಗೆ ಅಲ್ಲ. ಒಂದು ಅಂದಾಜಿನ ಪ್ರಕಾರ 2030ನೇ ವರ್ಷಕ್ಕೆ ಚೀನಾ ಆರ್ಥಿಕತೆ ಅಮೇರಿಕಾ ಆರ್ಥಿಕತೆಗಿಂತ ಬಲಿಷ್ಟ ಹಾಗೂ ದೊಡ್ಡದಾಗಿ ರೂಪುಗೊಳ್ಳುತ್ತದೆಂದು ತಿಳಿದಿದೆ. ಆದ್ದರಿಂದ ಚೀನಾ ವಸ್ತುಗಳು ಕಡಿಮೆ ದರ ಇರಲು ಅಲ್ಲಿಯ ಜನಪರ ನೀತಿಗಳೇ ಕಾರಣ.

ಐಕ್ಯರಂಗ : ಚೀನಾದಲ್ಲಿ ನಿರುದ್ಯೋಗ ಪರಿಸ್ಥಿತಿ ಹೇಗಿದೆ?

ಪಂಧೇ : ಚೀನಾದಲ್ಲಿ ನಿರುದ್ಯೋಗ ಮುಖ್ಯವಾಗಿ ಕೈಗಾರಿಕೆಗಳ ಆಧುನೀಕರಣದಿಂದಾಗಿ ಉಂಟಾಗುತ್ತದೆ. ಹಾಗೆ ನಿರುದ್ಯೋಗದಲ್ಲಿರುವ ಸಂಖ್ಯೆ ಎರಡುವರೆ ಕೋಟಿ ಅಷ್ಟು ಇರಬಹುದು. ಇಂತಹ ಎಲ್ಲ ನಿರುದ್ಯೋಗಿಗಳಿಗೂ ನಿರುದ್ಯೋಗ ಪರಿಹಾರ ನೀಡಲಾಗುತ್ತದೆ. ಹಾಗೂ ಪಿಂಚಣಿ ಸೌಲಭ್ಯಗಳು ಇವೆ. ಉದಾಹರಣೆಗೆ ಚೀನಾದಲ್ಲಿ ಒಂದು ದೊಡ್ಡ ಪ್ರಾಜೆಕ್ಟ್ ಆರಂಭ ಮಾಡಬೇಕಾದರೆ ಮೊದಲು ಕಾರ್ಮಿಕರಿಗೆ ಅಗತ್ಯವಾದ ಮನೆಗಳನ್ನು ನಿರ್ಮಾಣ ಮಾಡಿ ಪುನರ್‌ವಸತಿ ಕಲ್ಪಿಸಿದ ನಂತರವಷ್ಟೇ ಪ್ರಾಜೆಕ್ಟ್ ಆರಂಭಿಸಲಾಗುತ್ತದೆ. ನಮ್ಮಲ್ಲಿ ನರ್ಮದಾ, ಜೆಕ್ಟಟ್, ಕೈಗಾ ಮುಂತಾದೆಡೆ ಪುನರ್ವಸತಿ ಪ್ರಶ್ನೆಯೇ ಅತ್ಯಂತ ಗಂಭೀರವಾಗಿರುವುದನ್ನು ನೋಡಬಹುದು. ಅಲ್ಲಿ ನದಿಗಳ ನೆರೆಯನ್ನು ನಿಯಂತ್ರಿಸಲು ಯಲ್ಲೋ ನದಿ ಹಾಗೂ ಯಾಂಗ್‌ಸ್ಟಿಲ್ ನದಿಗಳನ್ನು ಜೋಡಿಸುವ ದೊಡ್ಡ ಕಾಲುವೆಯನ್ನು ನಿರ್ಮಾಣ ಮಾಡಿದ್ದೂ ನೆರೆ ಹಾವಳಿ ಕಡಿಮೆ ಆಗಿದ್ದಲ್ಲದೆ ಜಲ ಮಾರ್ಗವಾಗಿಯೂ ಬಳಸಿ ಉದ್ಯೋಗಗಳನ್ನು ಸೃಷ್ಟಿಮಾಡಲಾಗುತ್ತಿದೆ.

ಐಕ್ಯರಂಗ : ಬಹುರಾಷ್ಟ್ರೀಯ ಕಂಪನಿಗಳಿಗೆ ಅಲ್ಲಿ ಮುಕ್ತ ಅವಕಾಶ ನೀಡಿರುವ ಪರಿಣಾಮಗಳೇನು?

ಕಂಪನಿಗಳಲ್ಲಿ ಕೆಲಸಮಾಡುವ ಕಾರ್ಮಿಕರ ಹಕ್ಕುಗಳ ರಕ್ಷಣೆ ಇದೆಯೇ?

ಪಂಧೇ : ಬಹುರಾಷ್ಟ್ರೀಯ ಕಂಪನಿಗಳಿಗೆ ಚೀನಾದಲ್ಲಿ ಎಲ್ಲಕಡೆ ಪ್ರವೇಶವಿಲ್ಲ ಕೆಲವು ನಿರ್ಧಿಷ್ಟ ವಿಶೇಷ ಆರ್ಥಿಕ ವಲಯಗಳಲ್ಲಿ ಮಾತ್ರ ಅವಕಾಶ ನೀಡಲಾಗಿದೆ. ಅಲ್ಲಿ ಸ್ಥಾಪಿಸಲಾದ ಬಹುರಾಷ್ಟ್ರೀಯ ಕಂಪನಿಗಳು ಮಾಡಿದ ಉತ್ಪಾದನೆಯನ್ನು ಚೀನಾದ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಅವಕಾಶವಿಲ್ಲ. ಬದಲಾಗಿ ಬಹುರಾಷ್ಟ್ರೀಯ ಕಂಪನಿಗಳು ಅವರು ಉತ್ಪಾದಿಸಿದ ಸರಕುಗಳನ್ನು ರಫ್ತು ಮಾಡಬೇಕಾಗಿದೆ. ಇದರಿಂದ ಚೀನಾದ ರಾಷ್ಟ್ರೀಯ ಕೈಗಾರಿಕೆ ಮೇಲೆ ಯಾವುದೇ ದುಷ್ಪರಿಣಾಮ ಆಗದಂತೆ ತಡೆಯಲಾಗಿದೆ ಮತ್ತು ವಿದೇಶಿ ವಿನಿಮಯವನ್ನು ಗಳಿಸಲು ಉಪಯುಕ್ತವಾಗಿದೆ.

ಅಮೇರಿಕಾ ಜೊತೆ ಚೀನಾ ವ್ಯಾಪಾರದಲ್ಲಿ ನೂರಾರುಕೋಟಿ ಡಾಲರ್‌ನಷ್ಟು ಹೆಚ್ಚುವರಿ ಹೊಂದಿದೆ. ಅಲ್ಲಿ ಕಾರ್ಮಿಕರ ಹಕ್ಕುಗಳು ಚೀನಾ ದೇಶದ ಕಾನೂನಿನಂತೆ ರಕ್ಷಣೆ ಇದೆ.


ಚೀನಾದಲ್ಲಿ ಬಹುರಾಷ್ಟ್ರೀಯ ಕಂಪನಿಗಳನ್ನು ಅವರು ನಿಯಂತ್ರಣ ಮಾಡುತ್ತಿದ್ದಾರೆ. ಆದರೆ ಭಾರತದಲ್ಲಿ ಬಹುರಾಷ್ಟ್ರೀಯ ಕಂಪನಿಗಳು ನಮ್ಮನ್ನು ನಿಯಂತ್ರಣ ಮಾಡುವ ಪರಿಸ್ಥಿತಿ ಇದೆ.

ಐಕ್ಯರಂಗ : ಚೀನಾದಲ್ಲಿ ಸಾರ್ವಜನಿಕ ಕ್ಷೇತ್ರದ ಸುಧಾರಣೆಗಳ ಪರಿಣಾಮ ಏನು? ಖಾಸಗೀಕರಣ ಪ್ರಕ್ರಿಯೆ ನಡೆದಿದೆಯೇ?

ಪಂಧೆ : ಚೀನಾದಲ್ಲಿ ಬಹುತೇಕ ಕೈಗಾರಿಕೆಗಳು ಸರ್ಕಾರಿ ನಿರ್ವಹಣೆಯಲ್ಲಿಯೇ ಇವೆ. ಅಲ್ಲಿ ಕಲ್ಲಿದ್ದಲು, ಸ್ಟೀಲು ಮುಂತಾಗಿ ಎಲ್ಲಾ ಸರ್ಕಾರದ ನಿರ್ವಹಣೆಯಲ್ಲಿ ನಡೆಯುತ್ತಿವೆ. ಚೀನಾದಲ್ಲಿ 110 ಮಿಲಿಯ ಟನ್ ಉಕ್ಕು ಉತ್ಪಾದನೆ ಆಗುತ್ತದೆ. ಆದರೆ ಅದು ಅವರ ಆಂತರಿಕ ಬಳಕೆಗೆ ಸಾಕಾಗುತ್ತಿಲ್ಲ. ಆದರೆ ಭಾರತದಲ್ಲಿ ಕೇವಲ 25 ಮಿಲಿಯಟನ್ ಉತ್ಪಾದನೆ ಆಗುವ ಸ್ಟೀಲ್‌ಗೆ ನಮ್ಮ ದೇಶದಲ್ಲಿ ಮಾರುಕಟ್ಟೆಯಿಲ್ಲ. ಬೇಕಾದರೆ ಚೀನಾಕ್ಕೆ ನಾವು ರಫ್ತು ಮಾಡಬಹುದು. ಹಾಗೆಯೇ ನಮ್ಮ ಕಬ್ಬಿಣದ ಅದಿರು ಚೀನಾಕ್ಕಿಂತ ನಮ್ಮ ದೇಶದಲ್ಲಿ ಉತ್ತಮ ಗುಣಮಟ್ಟದಲ್ಲಿದೆ. ಇದುಕೂಡ ನಾವು ರಫ್ತು ಮಾಡಲು ಅನುಕೂಲ ಕಲ್ಪಿಸಿಕೊಟ್ಟಿದೆ. ಆದರೆ ನಮ್ಮ ದೇಶದಲ್ಲಿ ಸಾರ್ವಜನಿಕ ಕ್ಷೇತ್ರದ ಈ ಕೈಗಾರಿಕೆಗಳನ್ನು ಖಾಸಗೀಕರಿಸಲಾಗುತ್ತಿದೆ.

ಚೀನಾದಲ್ಲಿ ಖಾಸಗೀಕರಣವು ಕೇವಲ ಅತ್ಯಂತ ಸಣ್ಣ ಕೆಲಸಗಳನ್ನು ಖಾಸಗಿಯಾಗಿ ನಿರ್ವಹಿಸಲು ಅವಕಾಶ ನೀಡಲಾಗುತ್ತಿದೆ. ಉದಾಹರಣೆಗೆ ಸೈಕಲ್ ರಿಪೇರಿ, ಫ್ರೇಮ್ ತಯಾರಿ ಮತ್ತು ಕೃಷಿ ಉತ್ಪನ್ನಗಳನ್ನು ನಗರ ಪ್ರದೇಶಗಳಿಗೆ ಸಾಗಿಸಲು ಅಗತ್ಯವಾಗಿ ಟ್ರಾಕ್ಟರ್ ಮಾಲೀಕತ್ವ ಹೊಂದಲು ಅವಕಾಶ ನೀಡಲಾಗುತ್ತಿದೆ. ಅತ್ಯಂತ ಹಿಂದುಳಿದ ಆರ್ಥಿಕತೆಯ ಹಿನ್ನಲೆಯಿರುವ ಮೊದಲು ಜಿರಳೆ ಹಾಗೂ ಇಲಿಗಳನ್ನು ತಿನ್ನುವವರೆಂದು ಹೀಗಳಿಕೆಗೆ ಒಳಗಾಗಿದ್ದು ಈಗ ಉತ್ಪಾದಕ ಶಕ್ತಿಗಳ ಅಭಿವೃದ್ಧಿಗಾಗಿ ಕೆಲವು ಕ್ರಮಗಳನ್ನು ಕೈಗೊಂಡಿದೆ.

ಚೀನಾದ ಕಾರ್ಮಿಕರ ಆದಾಯಮಟ್ಟ ಜೀವನ ಮಟ್ಟ ಉತ್ತಮವಾಗಿ ಬೆಳೆಯುತ್ತಿರುವ ಹಿನ್ನಲೆಯಲ್ಲಿ ಅಲ್ಲಿಯ ಕಾರ್ಮಿಕರ ಉಳಿತಾಯ ಖಾತೆಗಳಲ್ಲಿ ಟ್ರಿಲಿಯನ್‌ಗಳಷ್ಟು ಯುವಾನ್‌ಗಳ (ಅಲ್ಲಿಯ ರೂಪಾಯಿ) ಶೇಖರಣೆ ಇದೆ. ಹೀಗಾಗಿ ಹಲವು ಕಾರ್ಖಾನೆಗಳು ಕಾರ್ಮಿಕರ ಷೇರುಗಳಿಂದಲೇ ನಡೆಯುತ್ತಿದ್ದು ಕಾರ್ಮಿಕರೇ ಮಾಲೀಕತ್ವ ಹೊಂದಿರುವ ಹಲವು ಕಂಪನಿಗಳಿವೆ.



ಕಾರ್ಮಿಕರ ವಸತಿ ಗೃಹಗಳು

ಅಲ್ಲಿಯ ಖಾಸಗೀ ಅಭಿವೃದ್ಧಿಯೂ ಪ್ರಭುತ್ವದ ಹಿಡಿತ ಹಾಗೂ ಮಾರ್ಗದರ್ಶನದಲ್ಲಷ್ಟೇ ನಡೆಯುತ್ತಿದೆ. ಯಾವುದೇ ಹಂತದಲ್ಲಿ ಅವುಗಳನ್ನು ರಾಷ್ಟ್ರೀಕರಣಗೊಳಿಸಲೂಬಹುದು.

ಐಕ್ಯರಂಗ : ಚೀನಾದಲ್ಲಿ ಭ್ರಷ್ಟಾಚಾರವನ್ನು ಹೇಗೆ ನಿಯಂತ್ರಣ ಮಾಡಲಾಗುತ್ತಿದೆ?

ಪಂಧೆ : ಪಕ್ಷದ ಕೆಲವು ಮುಖಂಡರೂ ಸೇರಿದಂತೆ ಭ್ರಷ್ಟಾಚಾರದಲ್ಲಿ ತೊಡಗಿರುವವರನ್ನು ಗುಂಡಿಟ್ಟು ಕೊಲ್ಲುವ ಶಿಕ್ಷೆ ನೀಡಲಾಗುತ್ತಿದೆ. ಭ್ರಷ್ಟಾಚಾರವನ್ನು ಅತ್ಯಂತ ಕಠಿಣವಾಗಿ ನಿಗ್ರಹಿಸಲಾಗುತ್ತದೆ. ಭಾರತದಲ್ಲಿ ಭ್ರಷ್ಟಾಚಾರಿಗಳೇ ಪಾರ್ಲಿಮೆಂಟ್‌ಗೆ ಆಯ್ಕೆ ಆಗುತ್ತಿದ್ದಾರೆ. ಯು.ಟಿ.ಐ ಹಗರಣದಲ್ಲಿ ಪ್ರಧಾನ ಮಂತ್ರಿಗಳ ಕಛೇರಿಯೇ ಭ್ರಷ್ಟಾಚಾರದಲ್ಲಿ ತೊಡಗಿರುವ ಬಗ್ಗೆ ಬಿಜೆಪಿಯ ಮಿತ್ರ ಪಕ್ಷವಾದ ಶಿವಸೇನಾ ಎಂ.ಪಿ. ಆರೋಪಿಸಿದ್ದಾರೆ. ಆದರೆ ಏನು ಕ್ರಮ ಆಗಿದೆ? ಹೇಳಿ ಇಲ್ಲಿ.

ಬೆಂಗಳೂರಲ್ಲಿ ಮಹತ್ವದ ವಿಚಾರ ಸಂಕಿರಣ

ಕಾರ್ಮಿಕ ಕಾನೂನು ಸುಧಾರಣೆಗೆ ಎತ್ತ ಏನು?


ಅಖಿಲ ಭಾರತ ಕಾರ್ಯಕಾರಿಣಿ ಸಮಿತಿಯ ಸಭೆ ಸಂದರ್ಭದಲ್ಲಿ ಕಾರ್ಮಿಕ ಕಾನೂನುಗಳ ತಿದ್ದುಪಡಿಗೆ ಸಂಬಂಧಿಸಿ ಒಂದು ವಿಚಾರಸಂಕಿರಣ ನಡೆಯಿತು. ಇದರಲ್ಲಿ ಮಾಲೀಕರು, ಸರ್ಕಾರ, ಕಾರ್ಮಿಕ ಸಂಘಟನೆಗಳ ಮುಖಂಡರು ಭಾಗವಹಿಸಿ ಅಭಿಪ್ರಾಯ ಹಂಚಿಕೊಂಡರು. ಈ ವಿಶಿಷ್ಟ ಕಾರ್ಯಕ್ರಮದ ಬಿಸಿಬಿಸಿ ವರದಿ ಇಲ್ಲಿದೆ.

ವಿಶ್ವಕುಂದಾಪುರ

ಕೈಗಾರಿಕೆ ಮತ್ತು ಕಾರ್ಮಿಕರು ಒಂದೇ ನಾಣ್ಯದ ಎರಡು ಮುಖಗಳು ಇದ್ದಂತೆ ಅವು ಸದಾ ಹೊಳೆಯುವಂತೆ ಇರಬೇಕು.

ಹೀಗೆಂದು ಹೇಳಿದವರು ಕರ್ನಾಟಕ ಸರಕಾರದ ಕಾರ್ಮಿಕ ಸಚಿವ ಎಂ.ಎಂ. ಹಿಂಡಸಗೇರಿ. 1990 ರ ದಶಕದ ಆರಂಭದಲ್ಲಿ ಭಾರತದ ಮಾರುಕಟ್ಟೆಯನ್ನು ಮುಕ್ತ ಆರ್ಥಿಕತೆಗೆ ತೆರೆದಿಡಲಾಯಿತು. ಮಾರುಕಟ್ಟೆ ಜಾಗತೀಕರಣ ಇಂದಿನ ವಾಸ್ತವವಾಗಿದೆ ಎಂದವರು ಹೇಳಿದರು. ಉದಾರೀಕರಣ ಮತ್ತು ಜಾಗತೀಕರಣ ಒಳ್ಳೆಯದು ಹಾಗೂ ಕೆಟ್ಟ ಫಲಿತಾಂಶಗಳನ್ನು ಒಳಗೊಂಡಿದ್ದು ಅವೆರಡನ್ನೂ ಸ್ವೀಕರಿಸಲು ಸಿದ್ಧರಾಗಬೇಕು ಎಂದು ಅಭಿಪ್ರಾಯ ಪಟ್ಟರು.

ಡಬ್ಲ್ಯೂ.ಟಿ.ಓ. (ಜಾಗತಿಕ ವ್ಯಾಪಾರ ಸಂಸ್ಥೆ) ನಿರ್ದೇಶಿತ ನೀತಿಗಳಿಂದಾಗಿ ಉದ್ಯೋಗ ಕಳೆದುಕೊಳ್ಳುವ ಭೀತಿ ಜನರನ್ನು ಕಾಡುತ್ತಿದೆ. ಎಂದರು. ಖಾಸಗೀ ಮತ್ತು ಸರಕಾರಿ ಈ ಎರಡೂ ರಂಗಗಳಲ್ಲಿ ಉದ್ಯೋಗಿಗಳನ್ನು, ನೌಕರರನ್ನು ಕಡಿಮೆ ಮಾಡಲು ಪ್ರಕ್ರಿಯೆ ನಡೆಯುತ್ತಿದೆ. ಇದನ್ನು ತಡೆಗಟ್ಟಲು ತುರ್ತು ಕ್ರಮ ಅಗತ್ಯ ಎಂದು ಕಾರ್ಮಿಕ ಮಂತ್ರಿ ಪ್ರತಿಪಾದಿಸಿದರು.



ಸಚಿವ ಹಿಂಡಸಗೇರಿ

ನಿರಂತರ, ಏಕಪ್ರಕಾರದ ಬೆಳವಣಿಗೆಗೆ ಕರ್ನಾಟಕ ಸರಕಾರ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಮಂತ್ರಿ ಹೇಳಿದರೇ ಹೊರತು ಆ ಕ್ರಮಗಳೇನು ಎಂದು ವಿವರಿಸುವ ಗೋಜಿಗೆ ಹೋಗಲಿಲ್ಲ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದಂಥ ಹೊಸ ರಂಗಗಳಲ್ಲಿ ವಿಪುಲ ಅವಕಾಶಗಳಿವೆ. ಅದನ್ನು ಸೂಕ್ತ ರೀತಿಯಲ್ಲಿ ಬಳಸುವುದು ಅಗತ್ಯ ಎಂದರು.

ಕಾರ್ಮಿಕ ಕಾನೂನುಗಳ ಸುಧಾರಣೆ ಅಗತ್ಯ. ಸುಧಾರಣೆ ಮಾಡುವಾಗ ಉದ್ಯೋಗದಾತರು ಮತ್ತು ಕಾರ್ಮಿಕರು ಈ ಎರಡೂ ವಿಭಾಗಗಳ ಹಿತವನ್ನು ಗಮನದಲ್ಲಿಟ್ಟುಕೊಳ್ಳುವುದು ಅವಶ್ಯ ಎಂದು ಸಚಿವ ಹಿಂಡಸಗೇರಿ ಪ್ರತಿಪಾದಿಸಿದರು. ಉದ್ಯೋಗ ಭದ್ರತೆ, ಸೂಕ್ತ ಕೂಲಿ ಮುಂತಾದ ಸಾಮಾಜಿಕ ಭದ್ರತೆಗಳಿಗೆ ಗಮನ ಕೊಡುವುದು ತೀರ ಅಗತ್ಯ ಎಂದು ಅದರ ಮಹತ್ವವನ್ನು ವಿವರಿಸಿದ ಸಚಿವರು ಹೇಳಿದರು.



ಸಂಕಿರಣದಲ್ಲಿ ಎಲ್ಲಾ ವಿಭಾಗಗಳ ಪ್ರತಿನಿಧಿಗಳು

ಅಸಂಘಟಿತ ವಲಯದ ಕಾರ್ಮಿಕರಲ್ಲಿ ಮನೆ ಮಾಡಿರುವ ಅಭದ್ರತೆಯನ್ನು ತೊಡೆದುಹಾಕಲು ಕೂಡ ಮುಂದಾಗಬೇಕಿದೆ ಎಂದು ನುಡಿದರು. ಬಾಲ ಕಾರ್ಮಿಕ ಪದ್ಧತಿ ಕೂಡ ಇನ್ನು ಅಸ್ತಿತ್ವದಲ್ಲಿರುವುದು ದುರದೃಷ್ಟಕರ. ಅದರ ನಿವಾರಣೆಗೆ ಕೂಡ ಕ್ರಮ ಅವಶ್ಯ ಎಂದರು.

ಈ ಎಲ್ಲವುಗಳ ಹಿನ್ನೆಲೆಯಲ್ಲಿ, ಕಾರ್ಮಿಕ ಕಾನೂನುಗಳ ಸುಧಾರಣೆ ಅಗತ್ಯ. ಆ ನಿಟ್ಟಿನಲ್ಲಿ ಚರ್ಚೆ ಅತ್ಯಗತ್ಯ ಸಿ.ಐ.ಟಿ.ಯು. ವ್ಯವಸ್ಥೆಗೊಳಿಸಿರುವ ವಿಚಾರಗೋಷ್ಠಿ ಆ ದಿಸೆಯಲಿ ಒಂದು ಉತಮ ಹೆಜ್ಜೆ ಎಂದು ಕಾರ್ಮಿಕ ಮಂತ್ರಿ ಶ್ಲಾಘಿಸಿದರು.

ಮಾಲಿಕರ ಪರ ವಾದಗಳು

ಕರ್ನಾಟಕ ಉದ್ಯೋಗದಾತರ ಸಂಘದ (Karnataka Employees Association) ಅಧ್ಯಕ್ಷ ಸಿ.ವಿ. ಅಯ್ಯಪ್ಪ ನಿರೀಕ್ಷಿಸಿದಂತೆಯೇ ತಮ್ಮ ವರ್ಗ ಹಿತಾಸಕ್ತಿಗೆ ಅನುಗುಣವಾಗಿ ಮಾತನಾಡಿದರು. ಹಾಗೆ ಅವರು ತಮ್ಮ ಭಾಷಣದಲ್ಲಿ ಭಾರತ ಮತ್ತು ಚೀನಾದ ಆರ್ಥಿಕ ಅಭಿವೃದ್ಧಿ ಹಾಗೂ ಇತರೆ ಅಂಶಗಳಿಗೆ ಹೋಲಿಕೆ ಮಾಡುತ್ತ ಚೀನಾ ಭಾರತಕ್ಕಿಂತ ಉತ್ತಮ ಸ್ಥಿತಿಯಲ್ಲಿದೆ ಎಂದು ವಿವರಿಸಿದರು. ಇದಕ್ಕೆ ಪೂರಕವಾಗಿ ಹಲವು ಅಂಕಿ ಅಂಶಗಳನ್ನು ಮಂಡಿಸಿದರು.

ಬಂಡವಾಳಶಾಹಿ ವ್ಯವಸ್ಥೆಯ ಪ್ರತಿನಿಧಿಯಿಂದ ಸಮಾಜವಾದಿ ಚೀನಾದ ಬೆಳವಣಿಗೆ ಬಗ್ಗೆ ಉತ್ತಮ ಮಾತು ಹೊರಬಿದ್ದಿದ್ದು ಒಂದು ಅನಿವಾರ್ಯ ಸಂಗತಿಯೇ ಹೊರತು ಬೇರೆನೂ ಅಲ್ಲ. ಯಾಕೆಂದರೆ ಚೀನಾದ ಜನಜೀವನ ಕಾರ್ಮಿಕ ಸ್ಥಿತಿಗತಿ ಉತ್ತಮವಾಗಿದೆ ಎಂದು ಅಯ್ಯಪ್ಪ ಹೇಳಿದರೇನೊ ಹೌದು. ಅದಕ್ಕೆ ಕಾರಣವೇನು ಎಂದು ವಿವರಿಸುವ ಅದರ ಆಳಕ್ಕೆ ಇಳಿಯುವ ಗೊಡವೆಗೆ ಅವರು ಹೋಗಲಿಲ್ಲ. ಯಾಕೆಂದರೆ ಕಾರಣ ಸ್ಪಷ್ಟ. ಅಲ್ಲಿರುವುದು ಕಾರ್ಮಿಕ ಆಡಳಿತದ ಸಮಾಜವಾದಿ ವ್ಯವಸ್ಥೆ, ಭಾರತದಲ್ಲಿರುವುದು ಬಂಡವಾಳಶಾಹಿ ವ್ಯವಸ್ಥೆ.


ದೇಶದಲ್ಲಿ ಉದ್ಯಮಪತಿಗಳು ಎದುರಿಸುತ್ತಿರುವ ಹಲವು ಸಮಸ್ಯೆಗಳ ಮೇಲೆ ಅಯ್ಯಪ್ಪ ಬೆಳಕು ಚೆಲ್ಲಿದ್ದು ಉತ್ತಮ ಬೆಳವಣಿಗೆಯಾಗಿತ್ತು. ಮೂಲಸೌಕರ್ಯಗಳು ಸರಿಯಿಲ್ಲದಿದ್ದರೆ ಕೈಗಾರಿಕೆಗಳ ಸ್ಥಾಪನೆ ಹೇಗೆ ಸಾಧ್ಯ ಎನ್ನುವುದು ಅವರ ಪ್ರಶ್ನೆಯಾಗಿತ್ತು.

ಮಾಲಿಕರ ಸಮಸ್ಯೆಗಳಿಗೆ ಕಾರ್ಮಿಕರೇ ಕಾರಣ ಎನ್ನುವ ದಾಟಿಯಲ್ಲಿ ಅವರು ಮಾತನಾಡಿದರು. ಕಾರ್ಮಿಕರಲ್ಲಿ ಶಿಸ್ತು, ಸಮರ್ಪಣಾ ಮನೋಭಾವ ಇಲ್ಲ, ಮುಷ್ಕರಗಳಿಗೆ, ಕಾರ್ಖಾನೆಗಳ ನಷ್ಟಕ್ಕೆ ಅವರೇ ಕಾರಣರು ಎಂದೆಲ್ಲ ಬಡಬಡಿಸಿದರು. ಅವರ ಈ ವಾದಗಳು ಎಷ್ಟು ಪೊಳ್ಳು ಹಾಗೂ ಹಾದಿ ತಪ್ಪಿಸುವಂಥವು ಎಂಬುದನ್ನು ಕಾರ್ಮಿಕ ಧುರೀಣ ಸೂರಿ ತಮ್ಮ ಭಾಷಣದಲ್ಲಿ ಎಳೆ ಎಳೆಯಾಗಿ ಬಿಡಿಸಿಟ್ಟರು.

ಕಾರ್ಮಿಕ ಕಾನೂನುಗಳ ಸುಧಾರಣೆ ಅಗತ್ಯ ಎಂದು ಉದ್ಯೋಗದಾತರ ಸಂಘದ ಅಧ್ಯಕ್ಷರು ಹೇಳುವಾಗ, ಅದು ಮಾಲಿಕರ - ಕೈಗಾರಿಕೋದ್ಯಮಿಗಳ ಪರವಾಗಿರಬೇಕು ಎಂದು ವಾದಿಸುವಲ್ಲಿ ಹಿಂದೆ ಬೀಳಲಿಲ್ಲ. ಕಾರ್ಮಿಕರು ಮಾಲಿಕರಲ್ಲಿ ವಿಶ್ವಾಸವಿರಿಸಬೇಕು ಎಂದರಲ್ಲದೆ ಪ್ರಧಾನಿ ವಾಜಪೇಯಿಯವರ ಇತ್ತೀಚಿನ ಆಶಾಸನೆಯೊಂದು ವಿಶ್ವಾಸಯೋಗ್ಯ ಎಂದು ಹೇಳಿದರು.

ಎಂ.ಸಿ.ನರಸಿಂಹನ್

ಮೊದಲು ಪ್ರಬಂಧ ಮಂಡಿಸಿದವರು ಎಐಟಿಯುಸಿ ರಾಜ್ಯ ಅಧ್ಯಕ್ಷ, ಹಿರಿಯ ವಕೀಲ ಕಾಂ. ಎಂ.ಸಿ. ನರಸಿಂಹನ್. ಸರಕಾರಕ್ಕೆ ಆಪ್ತವಾಗಿರುವ ಮಾಲಿಕರ ಸಂಘಟನೆಗಳು



ಡಾ. ಎಂ.ಕೆ.ಪಂಧೆ, ನರಸಿಂಹನ್, ಸೂರಿ, ಎಡಬದಿ ಅಯ್ಯಪ್ಪ....

ಸಾಮಾನ್ಯವಾಗಿ ಇಂಥ ಗೋಷ್ಠಿಗಳನ್ನು ನಡೆಸುತ್ತಿವೆ. ಆದರೆ ಕಾರ್ಮಿಕ ಸಂಘಟನೆ ಸಿಟು ಇದನ್ನು ವ್ಯವಸ್ಥೆಗೊಳಿಸಿರುವುದು ಒಂದು ವಿಶೇಷ ಎಂದು ಅವರು ಹೇಳಿದರು.

ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗ ಇನ್ನೇನು ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಲಿದೆ. ಈ ಹಂತದಲ್ಲಿ ಈ ಗೋಷ್ಠಿ ನಡೆಸುವುದರಿಂದ ಎಷ್ಟು ಪ್ರಯೋಜನವಾದೀತು ಎಂದು ಪ್ರಶ್ನಿಸಿದ ಅವರು, ಏನೇ ಇದ್ದರೂ ಕಾರ್ಮಿಕ ಕಾನೂನುಗಳ ಸುಧಾರಣೆ ವಿಚಾರದಲ್ಲಿ ಜನಾಭಿಪ್ರಾಯ ಮೂಡಿಸುವಲ್ಲಿ ಇದು ಮಹತ್ವದ ಪಾತ್ರ ನಿರ್ವಹಿಸುವುದರಲ್ಲಿ ಅನುಮಾನವಿಲ್ಲ ಎಂದು ಉತ್ತರವನ್ನು ತಾವೇ ನೀಡಿದರು.

ಮಾಲಿಕರ ಸಂಘದ ಅಧ್ಯಕ್ಷರ ಚೀನಾ ಕುರಿತ ಶ್ಲಾಘನೆಗಳನ್ನು ಪ್ರಸ್ತಾಪಿಸಿದ ನರಸಿಂಹನ್, ಚೀನಾ ಮಾರ್ಗ ಅನುಸರಿಸಲು ಇಲ್ಲಿನ ಬಂಡವಾಳ ವರ್ಗ ಸಿದ್ಧವೇ ಎಂದು ಪ್ರಶ್ನಿಸಿದರು. ತೀಕ್ಷ್ಣವಾದ ಭೂ ಸುಧಾರಣೆ ಇಲ್ಲಿನ ಆಳುವವರ್ಗ ಅನುಷ್ಠಾನಗೊಳಿಸುತ್ತದೆಯೇ ಎಂಬುದು ಅವರ ಪ್ರಶ್ನೆ.

ಸುಮಾರು 55 ಕಾರ್ಮಿಕ ಕಾನೂನುಗಳು ದೇಶದಲ್ಲಿವೆ. ಅವುಗಳ ಸಂಖ್ಯೆ ಮುಖ್ಯವಲ್ಲ. ಅವು ಎಷ್ಟು ಪ್ರಯೋಜನಕಾರಿ ಎನ್ನುವುದು ಮುಖ್ಯ. ಕೇವಲ ಎರಡೋ ಮೂರೋ ಕಾನೂನುಗಳು ಮಾತ್ರ ಬಳಕೆಯಾಗುತ್ತಿವೆ. ಬಂಡವಾಳ ಮತ್ತು ಶ್ರಮದ ನಡುವೆ ತೀಕ್ಷ್ಣ ಘರ್ಷಣೆ ಎದ್ದಾಗಷ್ಟೆ ಅವು ಉಪಯೋಗವಾಗುತ್ತಿವೆ ಎಂದು ನರಸಿಂಹನ್ ನುಡಿದರು.

ಸಣ್ಣ ಕೈಗಾರಿಕೆಗಳನ್ನು ನಾಶಮಾಡಿ ಬೃಹತ್ ಪ್ರಮಾಣದಲ್ಲಿ ಬೆಳೆಯುವುದೇ ದೊಡ್ಡ ಕೈಗಾರಿಕೆಗಳ ಗುರಿ. ಬೆಳವಣಿಗೆ ಬೇಕು, ಲಾಭ ಬರಬೇಕು, ಇವೆಲ್ಲ ಬೇಕು, ಆದರೆ ಉದ್ಯೋಗ ಹೆಚ್ಚಳ ಬೇಡ ಎನ್ನುವುದು ಕೈಗಾರಿಕೆಗಳ ಗುರಿಯಾಗಿದೆ ಎಂದು ಛೇಡಿಸಿದರು.

ಪುಟ 10 ಕ್ಕೆ

ಸಾಮಾಜಿಕ ನ್ಯಾಯ, ಮಾನವ ಹಕ್ಕು ರಕ್ಷಣೆಗಾಗಿ....


ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾಂ. ಎಂ.ಕೆ.ಪಂಧೆ ಆರ್ಥಿಕ ವಿಷಯದಲ್ಲಿ ಡಾಕ್ಟರೇಟ್ ಪಡೆದ ವಿದ್ವಾಂಸರು. ಸಂಕಿರಣದ ವಿಷಯ ಪ್ರವೇಶ ಹಾಗೂ ಸಮಾರೋಪ ಭಾಷಣದಲ್ಲಿ ಅವರು ಹೇಳಿದ್ದೇನು:

- ಸಂಸತ್ ಅಂಗೀಕರಿಸಿದ ಕಾನೂನುಗಳೇ ಅನುಷ್ಠಾನಗೊಳ್ಳುತ್ತಿಲ್ಲ.
- ಬಜೆಟ್‌ನಲ್ಲಿಯೇ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡುವ ಆಘಾತಕಾರಿ ಹಾಗೂ ಕೆಟ್ಟ ಪ್ರವೃತ್ತಿ ಚಾಲ್ತಿಗೆ ಬಂದಿದೆ. ಈ ವಿದ್ಯಮಾನವನ್ನು ವಿರೋಧಿಸಲೇಬೇಕು.
- ಬಹುತೇಕ ಕಾರ್ಮಿಕರಿಗೆ ಇಂಗ್ಲಿಷ್ ಬರುವುದಿಲ್ಲ. ಎಲ್ಲ ಕಾರ್ಮಿಕ ಕಾನೂನುಗಳು ಇಂಗ್ಲಿಷ್‌ನಲ್ಲಿವೆ. ಅವುಗಳನ್ನು ಹಿಂದಿಯಲ್ಲಿಯೂ ಇತರೆ ಪ್ರಾದೇಶಿಕ ಭಾಷೆಗಳಲ್ಲಿ ಪ್ರಚಾರ ಮಾಡಬೇಕು.
- ಉದ್ಯಮಪತಿಗಳ ಅತ್ಯಂತ ಉನ್ನತ ಮಟ್ಟದಲ್ಲಿ ಹಾಗೂ ಅದೇ ರೀತಿ, ಕಾರ್ಮಿಕ ಸಂಘಟನೆಗಳ ಅತ್ಯಂತ ಉನ್ನತ ಮಟ್ಟದ ನಾಯಕರ ನಡುವೆ ದ್ವಿಪಕ್ಷೀಯ ಮಾತುಕತೆ ನಡೆಯುವುದು ಅಗತ್ಯ.
- ಎಲ್ಲವನ್ನು ಸರಕಾರಕ್ಕೆ ಬಿಟ್ಟು ಬಿಡಬಾರದು. ಹಾಗೆ ಮಾಡಿದರೆ ಅದರಿಂದ ಅಪಾಯ ಕಟ್ಟಿಟ್ಟ ಬುತ್ತಿ. ಸುಧಾರಣೆ ಪ್ರಕ್ರಿಯೆಯಲ್ಲಿ ಟಿ.ಯು.ಗಳೂ ಉದ್ಯೋಗದಾತರ ಸಂಘಗಳೂ ಸಕ್ರಿಯವಾಗಿ ಭಾಗವಹಿಸಬೇಕು. ಈ ಸಂಕಿರಣ ಅದರಲ್ಲೊಂದು ಮಹತ್ವದ ಹೆಜ್ಜೆ.
- ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಅತ್ಯುತ್ಕೃಷ್ಟ ತಂತ್ರಜ್ಞಾನವಿತ್ತು. ಸೂಕ್ತವಾದ ಕಾರ್ಮಿಕ ನಿರ್ವಹಣೆ ಯೋಜನೆ ಇಲ್ಲದಿದ್ದರೆ ಯಾವುದೇ ದೇಶ ಪ್ರಗತಿ ಹೊಂದಲು ಅಸಾಧ್ಯ.
- ಟ್ರೇಡ್ ಯೂನಿಯನ್ ಚಟುವಟಿಕೆಗಳು ಸರಕಾರದ ವಿರುದ್ಧದ ಪಿತೂರಿ ಎಂಬ ಭಾವನೆ ಭಾರತದಲ್ಲಷ್ಟೇ ಅಲ್ಲ, ಇಂಗ್ಲೆಂಡ್, ಅಮೆರಿಕದಲ್ಲಿ ಕೂಡ ವ್ಯಾಪಕವಾಗಿತ್ತು.
- ಹೋರಾಟಗಳಿಂದಾಗಿಯೇ ಬಹುತೇಕ ಸವಲತ್ತು-ಸೌಲಭ್ಯಗಳು ದುಡಿಯುವ ವರ್ಗಕ್ಕೆ ಸಿಕ್ಕಿದೆ. ರಜೆಯನ್ನು ನಗದೀಕರಣಗೊಳಿಸುವಂಥ ಪ್ರವೃತ್ತಿ ತಲೆದೋರಿರುವುದು ದುರದೃಷ್ಟಕರ. ಮಾಲೀಕರು, ಟ್ರೇಡ್ ಯೂನಿಯನ್‌ಗಳು ಇಂಥ ತಪ್ಪು ಪ್ರವೃತ್ತಿಗೆ ಇಂಬು ಕೊಡುತ್ತಿವೆ. ಅದನ್ನು ನಿಲ್ಲಿಸಬೇಕು.
- ಡಬ್ಲ್ಯುಟಿಓಗೆ ಸೇರದೆಯೇ ಚೀನಾ ಅಭಿವೃದ್ಧಿ ಸಾಧಿಸುತ್ತಿದೆ. ಭಾರತ ಬಿಕ್ಕಟ್ಟಿನ ಸುಳಿಗೆ ಸಿಲುಕಿದೆ. ತಮಗೆ ಅವಕಾಶ ಇಲ್ಲ ಎಂದು ಭಾರತೀಯ ಉದ್ಯಮಿಗಳು ಬೊಂಬ್ಡಾ ಹೊಡೆಯುತ್ತಿದ್ದಾರೆ.
- ಬ್ರಿಟಿಷರು ಭಾರತದಲ್ಲಿ ಬಂಡವಾಳ ಹೂಡಿದ್ದು ಈ ದೇಶದ ಅಭಿವೃದ್ಧಿಗಾಗಿ ಅಲ್ಲ. ಬದಲು ಅವರ ಲಾಭವನ್ನು ಹೆಚ್ಚಿಸಿಕೊಳ್ಳಲು ಇದು ನಮ್ಮ ಸ್ವಾತಂತ್ರ್ಯ ಹೋರಾಟದ ಇತಿಹಾಸದ ಪುಟಗಳಿಂದ ತಿಳಿದು ಬರುವ ಸತ್ಯ.
- ತಂತ್ರಜ್ಞಾನ ಆರ್ಥಿಕ ಅಭಿವೃದ್ಧಿಯ ಜತೆ ಜತೆ ಸಾಗಬೇಕು. ಇಲ್ಲದಿದ್ದರೆ ಬಿಕ್ಕಟ್ಟು ಸೃಷ್ಟಿಯಾಗುವುದು ನಿಶ್ಚಿತ.
- ವಿಶ್ವಸಂಸ್ಥೆ ಘೋಷಣೆ ಮಾಡಿರುವ ಅನ್ವಯ ಮಾನವ ಹಕ್ಕುಗಳ ರಕ್ಷಣೆ ಆಗಬೇಕು. ಸಾಮಾಜಿಕ ನ್ಯಾಯ ಸಿಗಬೇಕು. ಇವುಗಳನ್ನು ಸಾಕಾರಗೊಳಿಸುವ ಮಾರ್ಗದಲ್ಲಿ ಕಾರ್ಮಿಕ ಕಾನೂನುಗಳನ್ನು ಸುಧಾರಣೆ ಮಾಡಬೇಕು.

ದುಡಿಯುವ ವರ್ಗದ ಮೇಲೆ ಹೆಚ್ಚಿದ ಆಕ್ರಮಣ

ಒಗಟ್ಟಿನಿಂದ ಎದುರಿಸಲು ಕಾಂ. ಬಾಲಾನಂದನ್ ಕರೆ

ಸಿಐಟಿಯುವಿನ ಅಖಿಲ ಭಾರತ ಕಾರ್ಯಕಾರಿಣಿ ಸಮಿತಿಯ ಸಭೆಯು ಆಗಸ್ಟ್ 24 ರಿಂದ 26 ರವರೆಗೆ ಬೆಂಗಳೂರಿನಲ್ಲಿ ಜರುಗಿತು. ಉದಾರೀಕರಣ, ಜಾಗತೀಕರಣದ ದುಷ್ಪರಿಣಾಮಗಳು, ದೇಶದ ಕೈಗಾರಿಕೆಗಳ ನಾಶ.ಕ್ರೂರವಾದ ಕಾರ್ಮಿಕ ಕಾನೂನು ತಿದ್ದುಪಡಿ, ನಿರುದ್ಯೋಗ ಮುಂತಾದ ಪ್ರಶ್ನೆಗಳ ವಿರುದ್ಧ ದೇಶವ್ಯಾಪಿಯಾಗಿ ಎಲ್ಲಾ ಕಾರ್ಮಿಕ ಸಂಘಟನೆಗಳು ಐಕ್ಯ ಚಳುವಳಿಯನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದ ನಂತರ ಸೇರುತ್ತಿರುವ ಈ ಸಭೆ ಮಹತ್ವದ್ದು. ಈ ಹಿನ್ನಲೆಯಲ್ಲಿ ದೇಶದ ಇಂದಿನ ಸ್ಥಿತಿಗತಿ - ಕಾರ್ಮಿಕ ವರ್ಗದ ಕರ್ತವ್ಯಗಳನ್ನು ತಮ್ಮ ಉದ್ಘಾಟನಾ ಭಾಷಣದಲ್ಲಿ ವಿವರಿಸಿದ್ದಾರೆ ಸಿಐಟಿಯು ರಾಷ್ಟ್ರ ಅಧ್ಯಕ್ಷರಾದ ಇ.ಬಾಲಾನಂದನ್‌ರವರು.



ಹೈದರಾಬಾದ್‌ನಲ್ಲಿ ಜರುಗಿದ 10ನೇ ರಾಷ್ಟ್ರ ಸಮ್ಮೇಳನದಲ್ಲಿ ದೇಶದ ಮತ್ತು ಹೊರಗಿನ ಬೆಳವಣಿಗೆಗಳನ್ನು ಗಮನಿಸಿದ್ದೆವು ಮತ್ತು ಸಿಐಟಿಯು ನಿಂದ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ರೂಪಿಸಿದ್ದೆವು. ಸಮ್ಮೇಳನದ ವರದಿಯಲ್ಲಿ ನಿರೂಪಿಸಲಾಗಿದ್ದ ಹಾದಿಯಲ್ಲೇ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬೆಳವಣಿಗೆಗಳು ಸಾಮ್ಯತೆಯನ್ನು ಹೊಂದಿರುವ ಬಗ್ಗೆ ನಾನು ಸಂತೋಷದಿಂದ ಹೇಳಬಯಸುತ್ತೇನೆ -

ಹೆಚ್ಚುತ್ತಿರುವ ಸಾಮ್ರಾಜ್ಯಶಾಹಿ ಆಕ್ರಮಣ, ಜಾಗತಿಕ ಬಿಕ್ಕಟ್ಟಿನಲ್ಲಿ ಬಂಡವಾಳಶಾಹಿ, ಭಾರತದ ಆರ್ಥಿಕತೆ ಎದುರಿಸುತ್ತಿರುವ ನಿಧಾನ ಬೆಳವಣಿಗೆ, ತೀವ್ರಗೊಂಡ ಆರ್ಥಿಕ ಸುಧಾರಣೆಗಳ ಜಾರಿ ಮತ್ತು ಕೇಸರೀಕರಣವನ್ನು ವ್ಯಾಪಕವಾಗಿ ಜಾರಿಗೊಳಿಸಲಾಗುತ್ತಿದೆ. ರಾಷ್ಟ್ರಾದ್ಯಂತ ಕಾರ್ಮಿಕ ವರ್ಗದ ವಿರುದ್ಧ ಆಕ್ರಮಣ ತೀವ್ರಗೊಂಡಿದೆ ಮತ್ತು ಇದರ ವಿರುದ್ಧದ ಪ್ರತಿರೋಧವೂ ಹೆಚ್ಚುತ್ತಿದೆ. ಕೇಂದ್ರ **ಸರ್ಕಾರದ ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳನ್ನು ಸೋಲಿಸಲು ಎಲ್ಲಾ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಐದು ಅಂಶಗಳ ಬೇಡಿಕೆಯಾಧಾರದಲ್ಲಿ ಒಟ್ಟಾಗಿರುವುದು ಮಹತ್ವದ ಬೆಳವಣಿಗೆಯಾಗಿದೆ. ಇದರ ವಿವರಗಳಿಗೆ ಹೋಗುವುದಕ್ಕೆ ಮುಂಚಿತವಾಗಿ, ಅತಿ ಮಹತ್ವದ ಕೆಲವು ವಿಚಾರಗಳ ಬಗ್ಗೆ ಮಾತನಾಡುತ್ತೇನೆ.**

ಯೋಜಿತ ಮೋಸ

ಸರ್ಕಾರಿ ಸ್ವಾಮ್ಯದ ಕಂಪನಿಯಲ್ಲಿಟ್ಟರೆ ಸುರಕ್ಷಿತವೆಂಬ ನಂಬಿಕೆಯೊಡನೆ 2 ಕೋಟಿ ಜನ ತಮ್ಮಲ್ಲಿದ್ದ ಉಳಿತಾಯದ ಹಣವನ್ನು ತೊಡಗಿಸಿದ್ದ ಯುಟಿಐನ ಯುಎಸ್ 64 ಯೋಜನೆಯ ಹೊಸ ಹಗರಣದಿಂದ ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರವು ತತ್ತರಿಸುತ್ತಿದೆ. ಸರ್ಕಾರದಲ್ಲಿರುವ ಉನ್ನತ ಅಧಿಕಾರಿಗಳ ಮೌನಸಮ್ಮತಿಯಡಿಯಲ್ಲಿ, ಸಾವಿರಾರು ಕೋಟಿ ರೂಪಾಯಿಗಳಷ್ಟು ಈ ಹಣವನ್ನು ಷೇರು ಮಾರುಕಟ್ಟೆಯ ಕುತಂತ್ರ ಮತ್ತು ಮೋಸಗಳನ್ನು ಕುಶಲತೆಯಿಂದ ಬಳಸಿ ದೊಡ್ಡ ಕಾರ್ಪೋರೇಟ್ ಕುಟುಂಬಗಳಿಗೆ ಮತ್ತು ಇತರರಿಗೆ ವರ್ಗಾವಣೆ ಮಾಡಲಾಗಿದೆ. ಇದರಿಂದಾಗಿ ಯುಟಿಐನ ಯುಎಸ್. 64 ಯೋಜನೆಯು ಗಂಭೀರ ಬಿಕ್ಕಟ್ಟಿಗೆ ಒಳಗಾಗಿ ಅದರ ಪುನರ್ ಖರೀದಿ ಚಟುವಟಿಕೆಯನ್ನು ಸ್ಥಗಿತಗೊಳಿಸುವಂತಹ ಸ್ಥಿತಿ ತಲುಪಿದೆ. ಸ್ವತಃ ಯುಟಿಐನ ಅಧ್ಯಕ್ಷರೇ ಪತ್ರಕರ್ತರಿಗೆ ತಿಳಿಸಿದಂತೆ, ಹಲವಾರು ಷೇರುಖರೀದಿಗಳನ್ನು ಪ್ರಧಾನಮಂತ್ರಿ ಕಾರ್ಯಾಲಯ ಮತ್ತು ಹಣಕಾಸು ಸಚಿವಾಲಯದ ನಿರ್ದೇಶನದಂತೆ ಮಾಡಲಾಗಿದೆ. ಉದಾಹರಣೆಗೆ ; ಉತ್ತರ ಪ್ರದೇಶದಲ್ಲಿರುವ ಸೈಬರ್ ಸ್ಪೇಸ್ ಇನ್ಫೋಸಿಸ್ ಎಂಬ ಸಂಸ್ಥೆಯ 2 ರೂ ಮೌಲ್ಯದ 3,45,000 ಷೇರುಗಳನ್ನು ಪ್ರತಿಷೇರಿಗೆ 930 ರೂಗಳಂತೆ ರೂ. 32.8 ಕೋಟಿಗಳನ್ನು ನೀಡಿ ಯುಎಸ್-64 ಖರೀದಿಸಿದೆ. ತಮ್ಮ ಷೇರುಗಳನ್ನು ವಿಪರೀತ ದರಗಳಿಗೆ ಮಾರಾಟ ಮಾಡಿ **ಯುಎಸ್.-64ರಿಂದ ಅಪಾರ ಹಣವನ್ನು ಲಪಟಾಯಿಸಿದ ಕಂಪನಿಗಳ ಖಾತೆಗಳು ಇಂದು ಸಾರ್ವಜನಿಕ ಮಾಧ್ಯಮಗಳಲ್ಲಿ ಲಭ್ಯವಿದೆ. ಇವರಲ್ಲಿ ಅನೇಕರು ಬಿಜೆಪಿಯ ಬೆಂಬಲಿಗರು ಮತ್ತು ಕಾರ್ಪೋರೇಟ್ ಮನೆತನಗಳು.** ಷೇರು ಮೌಲ್ಯವನ್ನು ಶೇ. 40ರಷ್ಟು ಕಡಿತಗೊಳಿಸಿದ್ದರಿಂದ ಹೂಡಿಕೆದಾರರು ಅಪಾರನಷ್ಟ ಅನುಭವಿಸುವಂತಾಯ್ತು ಇದೊಂದು ಯೋಜಿತ ಮೋಸ.

ಕಂಪನಿಗಳ ನಿಯಂತ್ರಣದಲ್ಲಿ ಸರ್ಕಾರ

2001 ಆಗಸ್ಟ್ 3ರ 'ಹಿಂದು' ಪತ್ರಿಕೆಯು ಸಂಸತ್ತಿನಲ್ಲಿ ನಡೆದ ಚರ್ಚೆಯನ್ನು "ಕಂಪನಿಗಳ ನಿಯಂತ್ರಣದಲ್ಲಿ ಸರ್ಕಾರ" ಎಂಬ ತಲೆಬರಹದಡಿ ವರದಿ ಮಾಡುತ್ತಾ ಇಂದು ಲೋಕಸಭೆಯಲ್ಲಿ ಯುಎಸ್-64ರ ಹಗರಣದ ಮೇಲೆ ನಡೆದ ಚರ್ಚೆಯು ದೇಶದ ರಾಜಕೀಯ ಆರ್ಥಿಕತೆಯಲ್ಲಿ ಒಂದು ನಿರ್ದೇಶಿತ ಪಾಠವನ್ನು ಒದಗಿಸಿತು. ಪಕ್ಷಭೇದವನ್ನು ಹೊರತುಪಡಿಸಿ, ಭಾಷಣಕಾರರ ನಂತರ ಭಾಷಣಕಾರರು, ಸರ್ಕಾರದ ಮೇಲೆ ಕಾರ್ಪೋರೇಟ್ ಕುಟುಂಬಗಳು ಸಾಧಿಸುತ್ತಿರುವ ಅಪಾರ ಅಧಿಕಾರವನ್ನು ಕುರಿತು ಮಾತನಾಡಿದರು. ಮತ್ತು ಹೆಚ್ಚಿಗೆ ಪ್ರಸ್ತಾಪಿಸಲ್ಪಟ್ಟ ಕಾರ್ಪೋರೇಟ್ **ಕುಟುಂಬ ರಿಲಯನ್ಸ್ ಶ್ರೀ ಅಲ್ವಿಯವರು ಯಾವ ಮಂತ್ರಿ ಯಾವ ಖಾತೆಯನ್ನು ಹೊಂದಬೇಕೆಂಬುದನ್ನು ಮತ್ತು ಯಾವ ಅಧಿಕಾರಿಯು ಯಾವ ಮಂತ್ರಾಲಯದಲ್ಲಿ ಕಾರ್ಯದರ್ಶಿಯಾಗ ಬೇಕೆಂಬುದನ್ನು ತೀರ್ಮಾನಿಸುವಷ್ಟು ಶಕ್ತಿಯನ್ನು ಕಂಪನಿಗಳು ಸಾಧಿಸಿವೆ** ಎಂದು ಗುರುತಿಸಿದರು. ನಂತರ ಹಣಕಾಸು ಮಂತ್ರಿಯವರನ್ನು ಸಂಭೋಧಿಸುತ್ತಾ ನೀವು ಹಣಕಾಸು ಮಂತ್ರಿಯಾದಿರಿ ಏಕೆಂದರೆ ಅವರಿಗೆ ಬೇರೆ ಯಾರಾದರೂ ಹಣಕಾಸು ಮಂತ್ರಿಯಾಗುವುದು ಬೇಕಾಗಿರಲಿಲ್ಲ.

ಮಂತ್ರಿಗಳು ಅವರ ಕಾರ್ಯದರ್ಶಿಗಳು ಅವರ ಖಾತೆಗಳೆಲ್ಲವು ವ್ಯಾಪಾರಿ ಸಂಸ್ಥೆಗಳ ಮುಖಂಡರಿಂದ ತೀರ್ಮಾನಿಸಲ್ಪಡುತ್ತಿವೆ ಎಂಬ ಈ ವರದಿಯು ದೇಶದಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರದ ನೈಜ ಗುಣಗಳನ್ನು ತಮ್ಮ ಗಮನಕ್ಕೆ ತರುತ್ತದೆ. ಇಂತಹ ಒಂದು ಸನ್ನಿವೇಶದಲ್ಲಿ ಯಾರಾದರೂ ಅಂಬಾನಿ ಮತ್ತು ಇತರೆ ವ್ಯಾಪಾರಿ ಕುಳಗಳು ನೀಡುವ ಆದೇಶಗಳನ್ನು ಧಿಕ್ಕರಿಸಲು ಸಾಧ್ಯವೆ, ಅದೂ, ಇವರೇ ಈ ದೇಶದ ನಿಜವಾದ ಆಡಳಿತಗಾರರು ಎಂದು ಗೊತ್ತಿರುವಾಗ? ಆದ್ದರಿಂದ, ಐ.ಡಿ.ಬಿ.ಎಫ್, ಐ.ಎಫ್.ಸಿ.ಐ. ಇತರೆ ಸಂಸ್ಥೆಗಳ ಸ್ಥಿರತೆಯೂ ಕೂಡ ಅಪಾಯದಲ್ಲಿದೆ ಎಂಬುದು ಆಶ್ಚರ್ಯಕರವೇನೂ ಅಲ್ಲ. ಇದು ಭಾರತೀಯ ಪ್ರಜಾಸತ್ತೆಯ ನಿಜಸ್ವರೂಪ.

ಒಬ್ಬ ಶಿವಸೇನೆ ಸಂಸದ ರಾಜ್ಯ ಸಭೆಯಲ್ಲಿ ಪ್ರಧಾನಿ ವಿರುದ್ಧ ಆರೋಪಗಳನ್ನು ಮಾಡಿದ್ದವನ್ನು ಪ್ರಧಾನಿಯವರ ರಾಜಿನಾಮೆ ಬೆದರಿಕೆ ಹಿನ್ನಲೆಯಲ್ಲಿ ಯಾರ್ಯಾರು ಈ ಆರೋಪಗಳನ್ನು ವಾಪಸ್ಸು ಪಡೆಯುವಂತೆ ಮತ್ತು ಕ್ಷಮೆ ಕೋರುವಂತೆ ಮಾಡಿದರು ಎನ್ನುವ ಕೆಲವು ದೂರವಾಣಿ ಸಂಖ್ಯೆಗಳನ್ನು ನಮೂದಿಸಿದ್ದಾನೆ.

ಭ್ರಷ್ಟರ ಕೂಟ

ಸ್ವಚ್ಛ ಸರ್ಕಾರವೆಂಬುದು ಕೂಡ, ಒಂದು ವಾರಗಳ ಕಾಲ ಸಂಸತ್ತಿನ ಕಲಾಪಗಳನ್ನು ತಡೆಹಿಡಿದ ತೆಹಲ್ಕಾ ಹಗರಣದಿಂದ ಸಂಪೂರ್ಣವಾಗಿ ಬದಲಾಗಿದೆ. ರಕ್ಷಣ ಸಚಿವ ಫರ್ನಾಂಡೀಸ್ ತಮ್ಮ ಮಂತ್ರಿಸ್ಥಾನ ಕಳೆದುಕೊಂಡರು ಮತ್ತು ಬಿಜೆಪಿ ಅದ್ಯಕ್ಷ ಬಂಗಾರು ಲಕ್ಷ್ಮಣ್ ತಮ್ಮ ಅಧ್ಯಕ್ಷ ಸ್ಥಾನ ಕಳೆದು ಕೊಂಡರು. ಇಬ್ಬರೂ ಕೂಡ ದಾಖಲೆ ಸಮೇತ ಸಿಕ್ಕಿಬಿದ್ದದ್ದು ಟಿ.ವಿ. ಕ್ಯಾಮೆರಾಗಳಲ್ಲಿ ಚಿತ್ರಿಣಗೊಂಡಿತ್ತು. ಈ ವಿಚಾರವು ಈಗ ತನಿಖೆಯಲ್ಲಿದೆ, ಇದೊಂದು ರೀತಿಯ ಕಣ್ಣೊರೆಸುವ ನಾಟಕದಂತಿದೆ. **24 ಪಕ್ಷಗಳು ನಡೆಸುತ್ತಿರುವ ಈ ವ್ಯಾಪಾರಿ ಆಡಳಿತದಲ್ಲಿ ಭಾರತೀಯ ರಕ್ಷಣಾ ವ್ಯವಸ್ಥೆ ಸುರಕ್ಷಿತವೇ? ಎಂಬುದು ಉತ್ತರಿಸಲೇಬೇಕಾದ ಪ್ರಮುಖ ಪ್ರಶ್ನೆಯಾಗಿದೆ.**

ದೇಶದ ಆಗುಹೋಗುಗಳಿಗೆ ಸ್ಪಂದಿಸಿ, ಪರಿಸ್ಥಿತಿ ಬದಲಿಸಿ

ಸಂಗಾತಿಗಳೇ,

ಕಳೆದಬಾರಿ ಎನ್.ಡಿ.ಎ ಸರ್ಕಾರವು, ವಿಶ್ವಬ್ಯಾಂಕಿನ ನಿರ್ದೇಶನಗಳನ್ನು ಸಾರ್ವಜನಿಕ ವಲಯದ ಉದ್ದಿಮೆಗಳು ವೇಗವಾಗಿ ಜಾರಿಗೊಳಿಸುತ್ತಿವೆಯೆಂಬುದನ್ನು ಪರಿಶೀಲಿಸಲು ಒಂದು ಹೊಸ ಸಂಪುಟವನ್ನು ರಚಿಸಿತ್ತು. ವ್ಯಾಪಾರಿ ಕುಳಗಳು ನಿರ್ದಿಷ್ಟ ಸಮಯದ ಅವಧಿ ಮತ್ತು ಕೆಲಸದ ವಿಧಾನವನ್ನೇ ರೂಪಿಸಿದ್ದವು. ಇದನ್ನು ಷೇರು ವಿಕ್ರಯ ಸಚಿವಾಲಯವು ಅತ್ಯಂತ ವಿನಮ್ರವಾಗಿ ಜಾರಿಗೊಳಿಸಿತು. ಇದು ಅತ್ಯಂತ ವೇಗವಾಗಿ ಸಾಗುತ್ತಿದೆ. **ಈ ವರ್ಷದ ಗುರಿಯು 12,000 ಕೋಟಿರೂಗಳು ಮತ್ತು ಯೋಜನಾ ಆಯೋಗವು ಮುಂದಿನ 5 ವರ್ಷಗಳಲ್ಲಿ 80,000 ಕೋಟಿ ರೂಗಳನ್ನು ಗಳಿಸಲು ಸಾಧ್ಯವಾಗುವಂತೆ, ಸಾರ್ವಜನಿಕ ವಲಯದ ಸಂಪತ್ತನ್ನೂ ಭಾರತೀಯ ಮತ್ತು ವಿದೇಶಿ ಬಂಡವಾಳದಾರರಿಗೆ ವರ್ಗಾಯಿಸಲು ತೀರ್ಮಾನಿಸಿದೆ.** ಸಾರ್ವಜನಿಕ ಸಾರ್ವಜನಿಕ ಆಸ್ತಿಯನ್ನು ಮಾರುವ ಮೂಲಕ ಬದುಕುತ್ತಿರುವಂತಹ ನಯವಾದ ಸರ್ಕಾರ ?

ಖಾಸಗೀಕರಣದ ಈ ಕಾರ್ಯಕ್ರಮವು ಅತ್ಯಂತ ವೇಗವಾಗಿ ಮುಂದುವರಿಯುತ್ತಿದೆ. ವಿದ್ಯುತ್ ಕ್ಷೇತ್ರ, ಟೆಲಿಕಾ, ಬಾಲ್ಕೋ, ಏರ್ ಇಂಡಿಯಾ, ಇಂಡಿಯನ್ ಏರ್‌ಲೈನ್ಸ್, ರಕ್ಷಣಾ ಕೈಗಾರಿಕೆಗಳು, ಆಯಕಟ್ಟಿನ ಮತ್ತು ಸಂಪತ್ಭರಿತ ಇನ್ನೂ ಅನೇಕವು, ಎಲ್.ಐ.ಸಿ., ಜಿ.ಸಿ.ಸಿ. ಮತ್ತು ಬ್ಯಾಂಕು ಕೂಡ ಇದರ ಹೊರತಲ್ಲ, ರೈಲ್ವೆಯನ್ನೂ ಈಗ ಪಟ್ಟಿಯಲ್ಲಿ ಸೇರಿಸಲಾಗುತ್ತಿದೆ. ಒಟ್ಟಿನಲ್ಲಿ ಸಾರ್ವಜನಿಕ ಸಂಪತ್ತನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಭಾರತೀಯ ಮತ್ತು ಬಹುರಾಷ್ಟ್ರೀಯ ವ್ಯಾಪಾರಿ ಸಂಸ್ಥೆಗಳಿಗೆ ವರ್ಗಾಯಿಸಲಾಗುತ್ತಿದೆ. ಇದರ ಪರಿಣಾಮ **ಭಾರತದ ಸ್ವಾವಲಂಬಿ ಅಭಿವೃದ್ಧಿಯನ್ನು ತಿರುವು ಮರುವುಗೊಳಿಸುತ್ತಿರುವುದು ಮತ್ತು ಇದರ ಮೊದಲ ಬಲಿಪಶುಗಳೆಂದರೆ ದುಡಿಯುವ ವರ್ಗ.**

ಕೇಸರೀಕರಣದ ಅಪಾಯ.

ಆರ್.ಎಸ್.ಎಸ್.ನ ಆದೇಶಗಳಿಗನು ಗುಣವಾಗಿ ಶೈಕ್ಷಣಿಕ ಪಠ್ಯಕ್ರಮಗಳನ್ನು ಬದಲಾಯಿಸುವುದರ ಮೂಲಕ ದೇಶವನ್ನು ಮದ್ಯಯುಗಕ್ಕೆ ಕೊಂಡೊಯ್ಯಲು ಬಿಜೆಪಿ ಸರ್ಕಾರ ಬದ್ದವಾಗಿದೆ. ಇತ್ತೀಚಿನ ಪ್ರಯತ್ನವೆಂದರೆ ಭಾರತೀಯ ವಿಶ್ವವಿದ್ಯಾಲಯಗಳನ್ನು ಜ್ಯೋತಿಷ್ಯ ಶಾಸ್ತ್ರವನ್ನು ಕಲಿಸಲು ಹೊರಟಿರುವುದು ಇದು ಪ್ರತಿಯೊಬ್ಬರಿಗೂ ತಿಳಿದಿರುವಂತೆ ಜ್ಯೋತಿಷ್ಯಶಾಸ್ತ್ರವು ಎಲ್ಲಾ ವಿಜ್ಞಾನಗಳ ಪರಿಧಿಯ ಹೊರಗಿರುವಂತಹದು. ಮುಸ್ಲಿಂ ವಿರೋಧಿ ಮತ್ತು ಅಲ್ಪಸಂಖ್ಯಾತ ವಿರೋಧಿ ದಾಳಿಗಳನ್ನು ಯಾವುದೇ ಅಡೆತಡೆಯಿಲ್ಲದೆ ದೇಶದ ವಿವಿಧ ಭಾಗಗಳಲ್ಲಿ ಮುಂದುವರಿಸಿರುವುದು, ಇದು ಅವರಲ್ಲಿ ಅಭದ್ರತೆಯ ಭಾವನೆಯನ್ನು ಹರಡುತ್ತಿದೆ. ಕಾನೂನು ಮತ್ತು ಸಂವಿಧಾನಾತ್ಮಕ ನಿಯಮಗಳನ್ನು.ಉಲ್ಲಂಘಿಸಿ ಏನೇ ಆದರೂ ಮಂದಿರವನ್ನು ನಿರ್ಮಿಸುತ್ತೇವೆ. ಎಂಬ ಹೇಳಿಕೆಗಳನ್ನು ವಿ.ಹೆಚ್.ಪಿ. ಮುಖಂಡರು ನೀಡುತ್ತಿದ್ದಾರೆ. ಇದು ಮುಸ್ಲಿಂ. ಅಲ್ಪಸಂಖ್ಯಾತರ ನಡುವೆ ಸಿಟ್ಟಿಗೆ ಕಾರಣವಾಗುತ್ತಿದೆ ಮತ್ತು ದೇಶದ ಸಮಗ್ರತೆ, ಐಕ್ಯತೆಗೆ ವಿರುದ್ದವಾಗಿ ಹೋಗುತ್ತಿದೆ. ಇದು ದುಡಿಯುವ ವರ್ಗದ ಮೇಲೆ ಗಂಬೀರ ಪರಿಣಾಮವನ್ನುಂಟುಮಾಡುತ್ತಿದೆ. ಆದುದರಿಂದ ಬಿಜೆಪಿಯ ಕೋಮುವಾದಿ ಅಜೆಂಡಾದ ವಿರುದ್ಧ ಹೋರಾಡುವುದು ಅತ್ಯಂತ ಪ್ರಮುಖ ವಿಚಾರವಾಗಿದೆ. ಕಾರ್ಮಿಕ ಸಂಘಟನೆಯು ಇದರ ವಿರುದ್ಧದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗಿದೆ.

ಹೊಸ ಸನ್ನಿವೇಶ :

ವಿಶ್ವಬ್ಯಾಂಕಿನ ಒತ್ತಡಗಳಿಂದಾಗಿ ಹೊಸ ಆರ್ಥಿಕ ನೀತಿಗಳನ್ನು ಸಂಪೂರ್ಣವಾಗಿ ಜಾರಿಗೊಳಿಸಲು, ಸರ್ಕಾರ ಪ್ರಯತ್ನಮಾಡುತ್ತಿರುವುದರ ಕಡೆಗೆ ನಿಮ್ಮ ಗಮನ ಸೆಳೆಯಲು ಬಯಸುತ್ತೇವೆ. ಹಣಕಾಸು ಸಚಿವರು ಫೆಬ್ರವರಿ 28ರಂದು ಆಯವ್ಯಯ ಮಂಡನೆ ಭಾಷಣಮಾಡುವಾಗಏದುಡಿಯುವಜನಮತ್ತು ಸಾಮಾನ್ಯ ಜನರ ಮೇಲೆ ಯುದ್ದವನ್ನೇ ಸಾರಿದ್ದಾರೆ.

ಶೇ 26 ವಿದೇಶಿ ಬಂಡವಾಳದೊಡನೆ ರಕ್ಷಣಾ ಉತ್ಪಾದನೆಯನ್ನು ಖಾಸಗೀಕ್ಷೇತ್ರಕ್ಕೆ ತೆರೆಯುವುದು, ಬ್ಯಾಂಕಿಂಗ್ ವಲಯದಲ್ಲಿ ಶೇ 49 ವಿದೇಶಿ ಬಂಡವಾಳಕ್ಕೆ ಅನುಮತಿ, ವಿಮಾನ ನಿಲ್ದಾಣಗಳಲ್ಲಿ ಶೇ. 100ರಷ್ಟು ವಿದೇಶಿ ನೇರಹೂಡಿಕೆಗೆ ಅವಕಾಶ ಆಗಿರುವ 49 ರಿಂದ ಶೇ 79ರವರೆಗೆ ವಿದೇಶಿ ಬಂಡವಾಳಕ್ಕೆ ಟೆಲಿಕಾಂ ವಲಯದಲ್ಲಿ ಅವಕಾಶ, ಇಂತಹ ಪ್ರಮುಖ ಮತ್ತು ಆಯಕಟ್ಟಿನ ವಲಯಗಳಲ್ಲಿ ಪರಿಣಾಮಕಾರಿ ಹಿಡಿತವನ್ನು ವಿದೇಶಿ ಕಂಪನಿಗಳಿಗೆ ಬಿಟ್ಟುಕೊಡುವುದು ಕಾರ್ಮಿಕ ಕಾನೂನುಗಳನ್ನು ತಕ್ಷಣವೇ ಬದಲಾಯಿಸಲು ತೀರ್ಮಾನಿಸಿರುವುದು ಹಣಕಾಸು ಸಚಿವರಿಂದ ಸಲಹೆಗೊಳಪಟ್ಟ ಇವು ಮತ್ತಿತರೆ ಸಲಹೆಗಳು ದೇಶದ ಕೇಂದ್ರ ಕಾರ್ಮಿಕ ಸಂಘಟನೆಗಳಲ್ಲಿ ತೀವ್ರ ಕ್ರೋದಕ್ಕೆ ಕಾರಣವಾಗಿದೆ.

ನಿಮಗೆಲ್ಲಾ ತಿಳಿದಿರುವಂತೆ, ಹಲವಾರು ಸುತ್ತಿನ ಚರ್ಚೆಗಳ ನಂತರ, ದೇಶದ ಕಾರ್ಮಿಕ ಸಂಘಟನೆಗಳು 5 ಅಂಶಗಳ ಬೇಡಿಕೆಯಾದಾರದಲ್ಲಿ ಜಂಟಿ ಕಾರ್ಯಾಚರಣೆಗೆ ಒಪ್ಪಿಕೊಂಡಿವೆ. ಸಮಾವೇಶಗಳು ಮತ್ತು ಪ್ರತಿಭಟನಾ ಚಳುವಟಿಕೆಗಳಲ್ಲಿ ತಮ್ಮ ಸಂಘಟನಾ ಮತ್ತು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು ಅತ್ಯಂತ ಸ್ಫೂರ್ತಿಯಿಂದ ಭಾಗವಹಿಸುತ್ತಿದ್ದಾರೆ. ಕೇಂದ್ರೀಯ ಕಾರ್ಮಿಕ ಸಂಘಟನೆಗಳ ನಡುವಿನ ಗಳಿಸಿದ ಐಕ್ಯತೆಯು ಹೊಸ ದಾಳಿಯ ವಿರುದ್ಧ ಹೋರಾಡಲು ಕಾರ್ಮಿಕ ವರ್ಗಕ್ಕೆ

ಪುಟ 11 ಕ್ಕೆ

ಚೀನಾ ಕಾರ್ಮಿಕ ಕಾನೂನುಗಳು

ಪುಟ 6 ರಿಂದ

ಚೀನಾದ ಭಾಗೀದಾರ ಸಂಸ್ಥೆಗೆ ಕೈಗಾರಿಕೆಯನ್ನು ವಹಿಸಿಬಿಟ್ಟು ಹೊರಡಬೇಕು. ಚೀನಾದ ಈ ಭಾಗಿದಾರ ಸಂಸ್ಥೆಗಳು ಹೆಚ್ಚಾಗಿ ಸರ್ಕಾರ ಹಾಗೂ ಸಾಮೂಹಿಕ ಒಡೆತನಕ್ಕೆ ಸೇರಿದವು. ಆದ್ದರಿಂದ **ವಿದೇಶಿ ಕಾರ್ಖಾನೆಗಳು 10-30 ವರ್ಷಗಳ ನಂತರ ಚೀನಾದ ಸರ್ಕಾರಕ್ಕೆ ಸೇರಿದವಾಗುತ್ತವೆ. ಒಂದು ರೀತಿಯಲ್ಲಿ ರಾಷ್ಟ್ರೀಕರಣಗೊಳ್ಳುತ್ತವೆ.** 'ಬನ್ನಿ, ತಂತ್ರಜ್ಞಾನ ನೀಡಿ, ನಮ್ಮ ದೇಶದ ಕಾರ್ಮಿಕರಿಗೆ ಕಲಿಸಿ, ನಂತರ ಬಿಟ್ಟು ಹೊರಡಿ' ಎಂಬ ನೀತಿ ಚೀನಾದಲ್ಲಿ ಇದನ್ನು ಭಾರತದಲ್ಲಿ ಎಲ್ಲಿಯಾದರೂ ಯಾವ ವಿದೇಶಿ ಕಾರ್ಖಾನೆಗಾದರೂ ಹೇಳುವಷ್ಟು ಧೈರ್ಯ ಇಲ್ಲಿಯ ಸರ್ಕಾರಕ್ಕೆ ಬಂದಿದೆಯೇ?

ಬಹುರಾಷ್ಟ್ರೀಯ ಕಾರ್ಖಾನೆಗಳಲ್ಲಿ ಕಾರ್ಮಿಕರ ಹಕ್ಕುಗಳು ಹಾಗೂ ವೇತನಗಳು

ಬಹುರಾಷ್ಟ್ರೀಯ ಕಂಪನಿಗಳು ಕೂಡ ಚೀನಾದ ಕಾರ್ಮಿಕ ಸಂಘಗಳ ಕಾಯಿದೆಯಡಿಯಲ್ಲಿಯೇ ಕೆಲಸ ಮಾಡಬೇಕು. **ಕಾರ್ಮಿಕರು ಮತ್ತು ಸಿಬ್ಬಂದಿ ತಮ್ಮದೇ ಕಾರ್ಮಿಕ ಸಂಘಗಳನ್ನು ರಚಿಸಿಕೊಳ್ಳುವ ಹಾಗೂ ಅವರ ಹಿತಗಳನ್ನು ಪ್ರತಿನಿಧಿಸಿ ಆಡಳಿತ ವರ್ಗದೊಡನೆ ಮಾತುಕತೆ ನಡೆಸುವ ಹಕ್ಕುಗಳನ್ನು ಕಾಯ್ದುಕೊಳ್ಳಲಾಗಿದೆ.** ಅವರ ವೇತನ, ಬೋನಸ್, ಇತರ ಅನುಕೂಲಗಳು, ವಿಮೆ, ರಕ್ಷಣೆ, ಶಿಸ್ತು ಇವೆಲ್ಲವೂ ಚೀನಾದಲ್ಲಿ ಜಂಟಿ ಉದ್ಯಮಗಳ ಕಾರ್ಮಿಕ ನಿರ್ವಹಣೆಯ ಕಾನೂನುಗಳ ಪ್ರಕಾರ ನಡೆಯತಕ್ಕದ್ದು. **'ಪ್ರತಿಯೊಬ್ಬನಿಗೂ ಅವನ ಕೆಲಸಕ್ಕೆ ತಕ್ಕಂತೆ ವೇತನ', 'ಹೆಚ್ಚು ಕೆಲಸಕ್ಕೆ ಹೆಚ್ಚು ವೇತನ',** ಈ ತತ್ವದ ಅಡಿಯಲ್ಲಿಯೇ ವೇತನ ನಿಗದಿಯಾಗಬೇಕು.

ಬಹುರಾಷ್ಟ್ರೀಯ ಕಂಪನಿಗಳ ವೇತನಗಳು ಚೀನಾದ ಇತರ ಕಾರ್ಖಾನೆಗಳ ವೇತನಗಳಿಗಿಂತ ಶೇ 30-40 ರಷ್ಟು ಹೆಚ್ಚಿಸಬಹುದು. ವೇತನದಲ್ಲಿ ಮೂರು ಭಾಗ ಮೂಲವೇತನ, ಬೋನಸ್ ಹಾಗೂ



ಸಹಾಯಧನ. ಮೂಲವೇತನ ಎಲ್ಲರಿಗೂ ಸಮಾನ, ಬೋನಸ್ ಅವರವರ ಕೆಲಸಕ್ಕೆ ಅನುಗುಣವಾಗಿ ಸಹಾಯಧನವೆಂಬುದು ಕಾರ್ಖಾನೆಯ ಉತ್ಪಾದನೆ, ಲಾಭಕ್ಕೆ ಅನುಗುಣವಾಗಿ ತೆಗೆದಿರಿಸಲಾಗುವ ನಿಧಿ. ಶೇ 40 ರಷ್ಟು ಭಾಗ ಕಾರ್ಮಿಕರ ಮನೆಗಳ ನಿರ್ಮಾಣಕ್ಕೆ.ಉಳಿದದ್ದು ಆರೋಗ್ಯ, ಶಿಕ್ಷಣ, ಪಿಂಚಣಿ ಮೊದಲಾದ ಅನುಕೂಲಗಳಿಗೆ.

ಇವುಗಳ ಜೊತೆಗೆ ಕಾರ್ಮಿಕ ಸಂಘಗಳಿಗೆ ಕಾರ್ಮಿಕರಿಗೆ ಅಗತ್ಯವಾದ ರಾಜಕೀಯ, ವೃತ್ತಿ ನಿರ್ವಹಣೆಯ ಅವಶ್ಯಕವಾದ, ವೈಜ್ಞಾನಿಕ ಹಾಗೂ ತಾಂತ್ರಿಕ ಅಧ್ಯಯನಗಳನ್ನು ಏರ್ಪಡಿಸುವ ಹಕ್ಕು, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳನ್ನು ನಡೆಸುವ ಹಕ್ಕು ಇದೆ.

ಕಾರ್ಮಿಕರ ನೇಮಕಾತಿ ಮತ್ತು ವಜಾ

ಆಡಳಿತ ಕಾರ್ಮಿಕರನ್ನು ನೇಮಿಸಿಕೊಳ್ಳಬೇಕಾದರೆ ಸಂಬಂಧಪಟ್ಟ ಪ್ರದೇಶದ ಕಾರ್ಮಿಕರ ಇಲಾಖೆಗೆ ತಮ್ಮ ಕೈಗಾರಿಕೆಗೆ ಸಂಬಂಧಿಸಿದ ಉತ್ಪಾದನಾ ಇಲಾಖೆಗೆ - ಕೃಷಿ, ಮಾಹಿತಿ ತಂತ್ರಜ್ಞಾನ, ಗಣಿ, ರಾಸಾಯನಿಕ ವಸ್ತುಗಳು ಇತ್ಯಾದಿಗಳಿಗೆ ತಮಗೆ ಬೇಕಾದ ಕಾರ್ಮಿಕರ ಸಂಖ್ಯೆ, ವಯೋಮಿತಿ, ಅರ್ಹತೆ ಇವುಗಳನ್ನು ತಿಳಿಸಬೇಕು. ಅವರು ಕಳುಹಿಸಿಕೊಟ್ಟವರಲ್ಲಿ ತಮಗೆ ಬೇಕಾದವರನ್ನು ಆಯ್ಕೆ ಮಾಡಿಕೊಳ್ಳಬಹುದು. ಕಾರ್ಮಿಕರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲು ಅಥವಾ ವಜಾ ಮಾಡಲು ಆಡಳಿತವರ್ಗಕ್ಕೆ ಅಧಿಕಾರವಿದೆ. ಆದರೆ ಅಂತಹ ಸಂದರ್ಭಗಳಲ್ಲಿ ಕಾರ್ಮಿಕ ಇಲಾಖೆ ಹಾಗೂ ಸಂಬಂಧಪಟ್ಟ ಇಲಾಖೆಯ ಅನುಮತಿ ಪಡೆಯಬೇಕು.

ಬಹುರಾಷ್ಟ್ರೀಯ ಕಂಪನಿಗಳ ಆಡಳಿತ ಮಂಡಳಿಗಳಲ್ಲಿ ಕಾರ್ಮಿಕ ಪ್ರತಿನಿಧಿಗಳು

ಬಹುರಾಷ್ಟ್ರೀಯ ಕಂಪನಿಗಳ ಆಡಳಿತ ಮಂಡಳಿಗಳು ಎಂದರೆ ಗುಪ್ತವಾದ ಕೆಲವೇ ಜನಕ್ಕೆ ಸೀಮಿತವಾದ ಉನ್ನತಾಧಿಕಾರಸಮಿತಿ. ಈ ಆಡಳಿತ ಮಂಡಳಿಗಳ ಅಧ್ಯಕ್ಷ ಸ್ಥಾನ ಕಡ್ಡಾಯವಾಗಿ ಜಂಟೀ ಉದ್ಯಮದ ಚೀನಾದ ಭಾಗಿದಾರನ ಪ್ರತಿನಿಧಿಯೇ ಆಗಿರಬೇಕು. ಉಪಾಧ್ಯಕ್ಷ ಸ್ಥಾನಗಳು ಮತ್ತು ಇತರೆ ನಿರ್ದೇಶಕರ ಸ್ಥಾನಗಳಲ್ಲಿ ಬಹುರಾಷ್ಟ್ರೀಯ ಕಂಪನಿ ಹಾಗೂ ಭಾಗಿದಾರ ಕಂಪನಿಗಳು ಚರ್ಚಿಸಿ ನಿಷ್ಕರ್ಷಿಸಿಕೊಂಡಂತೆ ಇರಬಹುದು. ಮಾರುತಿ ಉದ್ಯೋಗ್, ಐಟಿಸಿ ಮತ್ತಿತರ ಬಹುರಾಷ್ಟ್ರೀಯ ಕಂಪನಿಗಳ ಅಧ್ಯಕ್ಷರ ಆಯ್ಕೆಗೆ ಸಂಬಂಧಿಸಿದ ವಿವಾದ ಹಾಗೂ ನಡೆದ ಜಗ್ಗಾಟಗಳನ್ನು ನೋಡಿದರೆ ಭಾರತದಲ್ಲಿ ಈ ಪ್ರಾಥಮಿಕ ವ್ಯವಸ್ಥೆಯೂ ಇಲ್ಲ. ಆದರೆ ಚೀನಾದಲ್ಲಿ ಕಾರ್ಮಿಕವರ್ಗದ ಸರ್ಕಾರ ಆಡಳಿತ ಮಂಡಳಿ ಕಾರ್ಮಿಕರ ಹಾಗೂ ಸಿಬ್ಬಂದಿಯ ವೇತನ, ಇತರ ವ್ಯವಸ್ಥೆ ಹಾಗೂ ಅನುಕೂಲಗಳು, ಕಾರ್ಮಿಕರಿಗೆ ನೀಡಬೇಕಾದ ರಕ್ಷಣೆ, ಕಾರ್ಮಿಕವಿಮೆ, ಬಹುಮಾನಗಳು, ದಂಡಗಳು, ಶಿಸ್ತಿನ ಕ್ರಮಗಳು ಇವುಗಳ ಬಗ್ಗೆ ಚರ್ಚೆ ಮಾಡುವಾಗ ಹಾಗೆಯೇ ಕಾರ್ಖಾನೆಯ ವಿಸ್ತರಣೆ, ಉತ್ಪಾದನೆ, ಕಾರ್ಯನಿರ್ವಹಣೆ ಮತ್ತಿತರ ಮುಖ್ಯ ವಿಚಾರಗಳನ್ನು ಚರ್ಚಿಸುವಾಗ ಆಡಳಿತ ಮಂಡಳಿ ಸಭೆಗಳಿಗೆ ಮತ ಚಲಾಯಿಸುವ ಹಕ್ಕಿಲ್ಲದ ಸದಸ್ಯರಾಗಿ ಭಾಗವಹಿಸಲು ಹಕ್ಕಿದೆ. ಇವರ **ಅಭಿಪ್ರಾಯಗಳಿಗೆ ಮನ್ನಣೆ ನೀಡಿ ಅವರ ಸಹಕಾರ ಪಡೆಯುವಂತೆ ಆಡಳಿತ ಮಂಡಳಿ ನಿರ್ಧಾರಗಳನ್ನು ಕೈಗೊಳ್ಳಬೇಕು ಎಂಬ ನಿಯಮಗಳನ್ನು ರೂಪಿಸಿದೆ.** ಭಾರತದ ಯಾವ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಈ ವ್ಯವಸ್ಥೆ ಇದೆ?

ಇತರ ಕಾರ್ಮಿಕ ಕಾಯಿದೆಗಳು

ಈ ಮೇಲಿನ ವಿಷಯವೆಲ್ಲವೂ ಕೈಗಾರಿಕೆಗಳ ಆಡಳಿತ ವ್ಯವಸ್ಥೆಯೇ ಹೇಗೆ ಕಾರ್ಮಿಕವರ್ಗದ ನಿಯಂತ್ರಣದಲ್ಲಿದೆ ಅಥವಾ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕಾರ್ಮಿಕರ ಪರವಾಗಿದೆ ಎಂಬ ಪ್ರಧಾನ ವಿಷಯಕ್ಕೆ ಸಂಬಂಧಿಸಿದೆ. ಏಕೆಂದರೆ ಆಡಳಿತವೇ ಕಾರ್ಮಿಕರ ನಿಯಂತ್ರಣದಲ್ಲಿದ್ದರೆ ಇನ್ನೂ ಕಾರ್ಮಿಕರ ಹಕ್ಕುಗಳ ರಕ್ಷಣೆ ಅದಕ್ಕಾಗಿ ಕಾನೂನು ಇವೆಲ್ಲವೂ ಕೂಡ ಎರಡನೆಯ ದರ್ಜೆಯ ವಿಷಯಗಳಾಗಿ ಬಿಡುತ್ತವೆ. ಚೀನಾದಲ್ಲಿನ ಬಹುತೇಕವಾಗಿ ಆಡಳಿತವರ್ಗಕ್ಕೂ ಅವರದೇ ಹಕ್ಕು ಅಧಿಕಾರಗಳನ್ನು ರಕ್ಷಿಸಬೇಕು ಎಂದು ಬೇಡಿಕೆ ಮಂಡಿಸುವ ಸ್ಥಿತಿ ಇದೆ.

ಈ ಹಿನ್ನೆಲೆಯಲ್ಲಿ ಕಾರ್ಮಿಕ ಕಾಯಿದೆ ಹಾಗೂ ಅವುಗಳ ಜಾರಿಯ ವಿಷಯವನ್ನು ಚರ್ಚಿಸಬೇಕು.

1994 ರಲ್ಲಿ ಹಿಂದಿದ್ದ ಕಾರ್ಮಿಕ ಕಾಯಿದೆಗಳನ್ನು ತಿದ್ದುಪಡಿ ಮಾಡಿ ಹೊಸ ಕಾಯಿದೆಯನ್ನು ರಚಿಸಲಾಯಿತು. ಕಾಯಿದೆಯ ಪ್ರಕಾರ

. ಎಲ್ಲ ಕಾರ್ಮಿಕರಿಗೂ ಸಮಾನವಾದ ಉದ್ಯೋಗದ ಹಕ್ಕು

. ಅವರಿಗೆ ಬೇಕಾದ ಕೆಲಸವನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ

. ತರಬೇತಿಪಡೆಯುವ ಹಕ್ಕು

. ಸರ್ಕಾರಿ ರಜಾ ಹಾಗೂ ಹಕ್ಕಿನ ರಜೆಗಳು

. ಅಪಘಾತ ಮೊದಲಾದವುಗಳ ವಿರುದ್ಧ ಸಂರಕ್ಷಣಾ ಕ್ರಮಗಳು.

. ಆರೋಗ್ಯ, ಸಾಮಾಜಿಕ ಭದ್ರತೆ, ಇತರೆ ಅನುಕೂಲಗಳನ್ನು ಪಡೆಯುವ ಹಕ್ಕುಗಳನ್ನು ಖಾತರಿಗೊಳಿಸಲಾಗಿದೆ.

. ವಾರದಲ್ಲಿ 48 ಗಂಟೆಗಳ ಕೆಲಸವನ್ನು 40 ಗಂಟೆಗಳಿಗೆ ಇಳಿಸಲಾಗಿದೆ ಹಾಗೂ ವಾರದ ಕೊನೆಯಲ್ಲಿ ಎರಡು ದಿನದ ವೇತನ ಸಹಿತ ರಜೆ ಇದೆ.

. ವರ್ಷಕ್ಕೊಮ್ಮೆ ತಮ್ಮ ಊರುಗಳಿಗೆ ಹೋಗಲು ರಜೆ, ಮಹಿಳೆಯರಿಗೆ ಕನಿಷ್ಟ 90ದಿನಗಳ ಹೆರಿಗೆ ರಜೆ ಇದೆ.

. ಸಮಾನ ಕೆಲಸಕ್ಕೆ ಸಮಾನ ವೇತನ - ವಯಸ್ಸು, ಜನಾಂಗ ಹಾಗೂ ಲೈಂಗಿಕ ಬೇಧವಿಲ್ಲದೆ

. ಇಡೀ ದೇಶಕ್ಕೆ ಕನಿಷ್ಟ ವೇತನ ಹಾಗೂ ಅದಕ್ಕೆ ಮಾನದಂಡಗಳ ಪ್ರತಿ ಪ್ರದೇಶಕ್ಕೂ / ರಾಜ್ಯ / ನಗರ ಪಾಲಿಕೆಗಳಲ್ಲಿ ಕನಿಷ್ಟ ಕೂಲಿ ಘೋಷಣೆ ಹಾಗೂ ಮಾನದಂಡಗಳು.

. ಎಲ್ಲ ಕಾರ್ಮಿಕರಿಗೆ ನಿವೃತ್ತಿ ವೇತನ, ಕಾಯಿಲೆ, ಅಪಘಾತಗಳ ವೃತ್ತಿ ಸಂಬಂಧಿತ ತೊಂದರೆಗಳು (ಹೈಜಾಡ್ಯ), ಹೆರಿಗೆ ಮೊದಲಾದವುಗಳಿಗೆ ಸಾಮಾಜಿಕ ಭದ್ರತೆಯನ್ನೊದಗಿಸುವ ವಿಮೆ ಇದೆ. ನಿವೃತ್ತಿ ವೇತನಗಳನ್ನು ಸರಾಸರಿ ವೇತನದ ಶೇ 40 ರಿಂದ 60 ಇರುವಂತೆ ಹೆಚ್ಚಿಸಾಗಿದೆ. ನಿವೃತ್ತಿಹೊಂದಿದವರಿಗೂ ಆರೋಗ್ಯ ವಿಮೆ ಇದೆ.

ನಿರುದ್ಯೋಗಿಗಳಿಗೆ ಉದ್ಯೋಗ, ನಿರುದ್ಯೋಗ ವೇತನ

ಉದ್ಯೋಗ ಕಳೆದುಕೊಂಡವರ ವೇತನ, ತರಬೇತಿ, ವಿಮೆ ಇತ್ಯಾದಿ ಕಾರ್ಮಿಕ ಕಾನೂನು ಹಾಗೂ ಹಕ್ಕುಗಳಿಗೂ ನಿರುದ್ಯೋಗ ವೇತನ, ವಿಮೆಗಳಿಗೂ ಏನು ಸಂಬಂಧ ಎನ್ನಿಸಬಹುದು. ನಿರುದ್ಯೋಗ ಹೆಚ್ಚಿದಷ್ಟೂ ಅದರಲ್ಲಿಯೂ ವಿದ್ಯಾವಂತರ ನಿರುದ್ಯೋಗ ಹೆಚ್ಚಿದಷ್ಟು ಕಾರ್ಮಿಕರ ವೇತನ ಕಡಿಮೆಯಾಗುತ್ತದೆ. ದಿನಗೂಲಿ, ಗುತ್ತಿಗೆ ಕಾರ್ಮಿಕರು, ಬದಲಿ ಕಾರ್ಮಿಕರು ಈ ಹೆಸರುಗಳಲ್ಲಿ ಕಾರ್ಮಿಕರ ಸಂಖ್ಯೆ ಹಾಗೂ ಅವರ ವೇತನ ಕಡಿತಕ್ಕೆ ಕೈ ಹಾಕುತ್ತಾರೆ ಎಂಬುದು ನಮ್ಮ ಕಾರ್ಮಿಕರಿಗೆ ಇಂದು ತೀಕ್ಷ್ಣವಾಗಿ ಅನುಭವಕ್ಕೆ ಬರುತ್ತಿದೆ.

ಇಂತಹ ಸಂದರ್ಭದಲ್ಲಿ **ಚೀನಾದಲ್ಲಿ ನಿರುದ್ಯೋಗವನ್ನು ಹಾಗೂ ಬಡತನವನ್ನು ನಿಯಂತ್ರಣ ಮಾಡುವ ಮೂಲಕ ಕಾರ್ಮಿಕರ ಉದ್ಯೋಗ ಹಾಗೂ ವೇತನಗಳನ್ನು ರಕ್ಷಿಸಿದ್ದಾರೆ.** ಅಲ್ಲಿ ಪ್ರತಿಯೊಂದು ಉದ್ಯೋಗ ನೇಮಕಾತಿಯೂ ಕಾರ್ಮಿಕ ಇಲಾಖೆಯ ಮೂಲಕವೇ - ಅದು ಸರ್ಕಾರದ್ದೇ ಇರಲಿ - ಕಾರ್ಖಾನೆಗಳದೇ ಇರಲಿ ಸಾರ್ವಜನಿಕ ಉದ್ಯಮಗಳೇ ಆಗಲಿ ಖಾಸಗಿಯೇ ಆಗಲಿ, ಅದನ್ನು ಹೊರತುಪಡಿಸಿದರೆ ಸ್ವಂತ ಉದ್ಯೋಗ ಅಥವಾ ಜನಸಮುದಾಯಗಳು ತಾವೇ ಕೂಡಿ ಆರಂಭಿಸುವ ಸಾಮೂಹಿಕ ವಲಯದ ಉದ್ದಿಮೆಗಳು. ಹೀಗಾಗಿ ಕಾರ್ಮಿಕ ಇಲಾಖೆ ನಿರುದ್ಯೋಗಿಗಳಿಗೆ ಉದ್ಯೋಗ ಹುಡುಕಿಕೊಡುವ ಉದ್ಯೋಗ ನೀಡಲು ಬೇಕಾದ ತರಬೇತಿ ನೀಡುವ ಹೊಣೆಯನ್ನು ಹೊತ್ತಿದೆ. ಇಲಾಖೆಯ ಇದಕ್ಕಾಗಿ 2716 ಉದ್ಯೋಗ ಕೇಂದ್ರಗಳು, 31,000 ಕೆಲಸ ಹುಡುಕೊಡುವ ಕೇಂದ್ರಗಳೂ ಇವೆ. ಇವುಗಳ ಮೂಲಕ 1983-96 ರ ನಡುವಣ 13 ವರ್ಷಗಳಲ್ಲಿ 7 ಕೋಟಿ ಜನರಿಗೆ ಉದ್ಯೋಗ ದೊರಕಿಸಿಕೊಟ್ಟಿದೆ. ಅದರಲ್ಲಿ 3 ಕೋಟಿ ಜನ ನಿರುದ್ಯೋಗಿಗಳು, ಉಳಿದವರು ಇದ್ದ ಉದ್ಯೋಗಕ್ಕಿಂತ ಉತ್ತಮ ಉದ್ಯೋಗ ಅರಸುತ್ತಿದ್ದವರು, ಕೈಗಾರಿಕೆಗಳಲ್ಲಿ ಉದ್ಯೋಗ ಕಡಿತ ಮಾಡಿದ್ದರಿಂದ ಕೆಲಸ ಕಳೆದುಕೊಂಡವರು ಇತ್ಯಾದಿ.

ಆರು ತಿಂಗಳಿಗಿಂತ ಯಾರಾದರೂ ನಿರುದ್ಯೋಗಿಗಳಾಗಿ ಉಳಿದರೆ ಅವರಿಗೆ ನಿಗದಿತ ನಿರುದ್ಯೋಗ ಭತ್ಯೆಯನ್ನು ನೀಡಲಾಗುತ್ತದೆ. ಕಾರ್ಖಾನೆಗಳಲ್ಲಿ ಕೆಲಸದ ಕಡಿತ ಮಾಡಿದ್ದರಿಂದ ಉದ್ಯೋಗ ಕಳೆದುಕೊಂಡವರಿಗೆ ಎರಡು ವರ್ಷಗಳ ಕಾಲ ಅವರ ಹಿಂದಿನ ವೇತನದ ಶೇ 50-60 ರಷ್ಟನ್ನು ನೀಡಲಾಗುತ್ತದೆ. ಅವರಿಗೆ ಹೊಸ ಉದ್ಯೋಗಕ್ಕಾಗಿ ತರಬೇತಿ - ಕಂಪ್ಯೂಟರ್ ಅಥವಾ ಇತರ ಸೇವೆಗಳಿಗೆ ಸಂಬಂಧಿಸಿದ ತರಬೇತಿ ಕೊಡಲಾಗುತ್ತದೆ. ನಂತರವೂ ಉದ್ಯೋಗ ದೊರಕದೇ ಹೋದರೆ ನಿರುದ್ಯೋಗ ಭತ್ಯೆ ನೀಡಲಾಗುತ್ತದೆ. ಅಲ್ಲದೆ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯ ಅಂಗವಾಗಿ ನಿರುದ್ಯೋಗ ವಿಮೆಯನ್ನು ಜಾರಿಗೆ ತರಲಾಗಿದೆ. ನಿರುದ್ಯೋಗದ ವೇಳೆಯಲ್ಲಿ ನಿಗದಿತ ಅವಧಿಯವರೆಗೆ ವಿಮೆ ಸಹಾಯ ನೀಡುತ್ತದೆ.

ಚೀನಾದ ಸಮಾಜವಾದಿ ವ್ಯವಸ್ಥೆಯ ಫಲ

ಒಟ್ಟಿನಲ್ಲಿ ಭಾರತದ ಬಂಡವಾಳಶಾಹಿಗಳ ಏಕೆ ವಿಶ್ವದ ಬಂಡವಾಳಶಾಹಿಗಳ ಗಮನವನ್ನೇ ಚೀನ ಸೆಳೆಯುತ್ತಿದೆ. ಇದಕ್ಕೆ ಮುಖ್ಯವಾದ ಕಾರಣ ಶರವೇಗದಲ್ಲಿ ನಡೆದಿರುವ ಬೆಳವಣಿಗೆ. ನಿರಂತರವಾಗಿ 80 ರ ದಶಕದಲ್ಲಿ ಹತ್ತು ವರ್ಷಗಳ ಶೇ 15-20 ರಷ್ಟು ಬೆಳವಣಿಗೆಯನ್ನು ಕಂಡರೆ (ಭಾರತದ್ದು ಶೇ 6, ಅಮೆರಿಕದ್ದು ಶೇ 2.5-3, ಯುರೋಪಿನ ದೇಶಗಳಾದ ಇಂಗ್ಲೆಂಡ್, ಫ್ರಾನ್ಸ್‌ಗಳದ್ದು ಇನ್ನೂ ಕಡಿಮೆ. 90 ರ ದಶಕದಲ್ಲಿ ಇಷ್ಟೊಂದು ವೇಗವಾಗಿ ಬೆಳೆಯುವುದು ಬೇಡವೆಂದು ಸರ್ಕಾರವೇ ನಿರ್ಣಯಿಸಿ ಬೆಳವಣಿಗೆಯನ್ನು ಶೇ 10 ಕ್ಕೆ ಇಳಿಸಿಕೊಂಡಿತು. ನಂತರ ಸುತ್ತಮುತ್ತಲ ದೇಶಗಳೆಲ್ಲಾ - ಥೈಲೆಂಡ್, ಇಂಡೋನೇಷ್ಯಾ, ಮಲೇಷಿಯಾ, ಫಿಲಿಪೈನ್ಸ್, ದ.ಕೊರಿಯಾಗಳಲ್ಲಿನ ಹಣದ ಮೌಲ್ಯ ದುತ್ತನೆ ಕುಸಿದಾಗ ಇನ್ನು ಚೀನಾದ ಬೆಳವಣಿಗೆಯ ಕಥೆ ಮುಗಿಯಿತು ಎಂದು ಕೊಂಡಿದ್ದವರು ಕಂಡದ್ದು ಚೀನಾ ಬೆಳವಣಿಗೆಯ ಕುಸಿತವನ್ನಲ್ಲ. ಜಪಾನಿನ ಬೆಳವಣಿಗೆಯ ಕುಸಿತ, ಬ್ಯಾಂಕ್‌ಗಳು ಅದರಲ್ಲಿ ಹಣವಿಟ್ಟಿದ್ದವರು ಕಂಗಾಲಾಗಿದ್ದು. ಜಗತ್ತಿನ ಶೇರು ಮಾರುಕಟ್ಟೆಯ ಕುಸಿತ. ಆದರೆ ಚೀನಾದ ಬೆಳವಣಿಗೆಗೆ ಹೆಚ್ಚು ಕುಂದುಂಟಾಗಲಿಲ್ಲ.

ಈಗ 2000-2001 ರಲ್ಲಿ ಅಮೆರಿಕ, ಯುರೋಪಿನ ದೇಶಗಳ ಬೆಳವಣಿಗೆಯೇ ಇಲ್ಲದ ಸ್ಥಗಿತ ಸ್ಥಿತಿ, ದಶಲಕ್ಷಗಟ್ಟಲೇ ಕಾರ್ಮಿಕರನ್ನು ಕೈಗಾರಿಕೆಗಳಿಂದ ತೆಗೆದೆಸೆಯುತ್ತಿರುವಾಗ, ಮಾಹಿತಿ ತಂತ್ರಜ್ಞಾನದ ಶೇರುಗಳು ನೆಲಕಚ್ಚಿರುವಾಗ ಜಾಗತೀಕರಣದ ಪರಿಣಾಮವಾಗಿ ಭಾರತದ ಬೆಳವಣಿಗೆಯೂ ಹಿನ್ನಡೆಯುತ್ತಿರುವಾಗ ಚೀನಾ ಸಾಧಿಸಿರುವ ಬೆಳವಣಿಗೆ.

ಈ ಬೆಳವಣಿಗೆ ಭಾರತದ ಕೈಗಾರಿಕೆಗಳ ಮಾಲೀಕರನ್ನು ಆಕರ್ಷಿಸಿದೆ ಎಂಬುದು ಸಂತೋಷದ ಸಂಗತಿ. ಅದೇ ರೀತಿಯ ಬೆಳವಣಿಗೆಯನ್ನು ಕಾಣುವುದಕ್ಕಾಗಿ ಅವರ ಜೊತೆಗೂಡಲು ಕಾರ್ಮಿಕರೂ ಸಿದ್ಧರಾಗಿದ್ದಾರೆ. ಆದರೆ ಅದನ್ನು ನೆಪವಾಗಿಸಿಕೊಂಡು, **ಚೀನಾದ ಅಗ್ಗದ ಆಮದುಗಳ ಭಯ ತೋರಿಸಿ, ಅಲ್ಲಿಯ ಕಾರ್ಮಿಕ ಹಕ್ಕುಗಳ ಬಗ್ಗೆ ಸುಳ್ಳು ಪ್ರಚಾರ ಮಾಡಿ ಭಾರತದ ಕಾರ್ಮಿಕ ವರ್ಗವನ್ನು ಬಲಿಕೊಡಲು ಪ್ರಯತ್ನಿಸುವುದನ್ನು ಕಾರ್ಮಿಕವರ್ಗ ಒಪ್ಪಿಕೊಳ್ಳುವುದಿಲ್ಲ.**

ಬೆಂಗಳೂರಲ್ಲಿ ಮಹತ್ವದ ವಿಚಾರ ಸಂಕಿರಣ........

ಪುಟ 8 ರಿಂದ

ಅಸಂಘಟಿತ ವಲಯದಲ್ಲಿ ಸಮಸ್ಯೆ ಇದ್ದದ್ದೇ ಆದರೆ ಸಂಘಟಿತ ವಲಯದಲ್ಲೂ ಇಂದು ಸಾಮೂಹಿಕ ಚೌಕಾಸಿ ಹಕ್ಕು ದುರ್ಬಲಗೊಳ್ಳುತ್ತಿದೆ. ಇದನ್ನು ಬಲಪಡಿಸುವುದು ಹೇಗೆ ಎಂದು ಚರ್ಚಿಸಬೇಕಾಗಿದೆ ಎಂದರು.

ವಿರೋಧಿಭಾವದ ಪ್ರತಿಪಾದನೆ

ಸಾರ್ವಜನಿಕ ವಲಯದ **ಕನ್ಸಲ್ಟೆಂಟ್ ಅಮಿನ್ ಮಾತನಾಡಿ** ಹೊಸ ತಂತ್ರಜ್ಞಾನದ ಅಳವಡಿಕೆಯಿಂದಾಗಿ ಬದಲಾದ ಕೆಲಸ ಕಾರ್ಯಗಳ ಹಿನ್ನೆಲೆಯಲ್ಲಿ ಕಾರ್ಮಿಕ ಕಾನೂನುಗಳು ಹೇಗಿರಬೇಕು ಎನ್ನುವುದಕ್ಕೆ ಒತ್ತು ನೀಡಿದರು. ಅವರು ಕೂಡ ಚೀನಾದ ಆರ್ಥಿಕ ಬೆಳವಣಿಗೆ ಅದ್ಭುತ ಎಂದು ಬಣ್ಣಿಸಿದರು.

ಶೀತಲ ಸಮರದ ನಂತರದ ಅವಧಿಯಲ್ಲಿ ಅಮೇರಿಕಾಕ್ಕೆ ಸೋವಿಯತ್ ರಷ್ಯಾ ಎದುರಾಳಿಯಾಗಿ ಉಳಿದಿಲ್ಲ. ಆರ್ಥಿಕವಾಗಿ ಬಲಾಢ್ಯವಾಗುತ್ತಿರುವ ದೇಶಗಳೇ ತನ್ನ ರಪ್ಪುಗಳು ಎಂದು ಪರಿಗಣಿಸಿರುವ ಅಮೇರಿಕ ಅವುಗಳ ಮೇಲೆ ಹಿಡಿತ ಸಾಧಿಸಲು ಯತ್ನಿಸುತ್ತಿದೆ ಎಂದರು.

ಹೊಸ ಹೊಸ ಕೈಗಾರಿಕೆಗಳ ಸ್ಥಾಪನೆಯಾಗಬೇಕು, ಉದ್ಯೋಗಾವಕಾಶ ಹೆಚ್ಚಬೇಕು ಎನ್ನುವುದು ಅವರ ವಾದ.

ಕಾರ್ಮಿಕ ಕಾನೂನುಗಳು ಕಂಪೆನಿಗಳಿಗೆ ಅನುಕೂಲಕರವಾಗಿರಬೇಕು ಎಂದು ಹೇಳಿದ ಅಮಿನ್, ಕಂಪೆನಿ - ಕಾರ್ಖಾನೆಗಳ ಲಾಭ ಆಡಳಿತ ಮತ್ತು ನೌಕರರಿಗೆ ಸಮವಾಗಿ ದಕ್ಕಬೇಕು ಎಂಬ ಪ್ರತಿಪಾದನೆಯನ್ನು ಅದೇ ಉಸಿರಿನಲ್ಲಿ ಮಂಡಿಸಿದರು. ಎಷ್ಟು ವಿರೋಧಾಭಾಸದ, ಗೊಂದಲದ ಪ್ರತಿಪಾದನೆಯಲ್ಲವೆ?

ಮಾತಿನ ಬೆಂಕಿ ಮಳೆ

ಅದುವರೆಗೆ 'ಚಳಿ' ಹಿಡಿದಿದ್ದ ಸಂಕಿರಣಕ್ಕೆ 'ಮಾತಿನ ಬೆಂಕಿ'ಯ ಕಾವು ಕೊಟ್ಟವರು ಸ್ವಾತಂತ್ರ್ಯ ಹೋರಾಟಗಾರ ಹಾಗೂ ಹಿರಿಯ ಕಾರ್ಮಿಕ ಧುರೀಣ ಕಾಮ್ರೇಡ್ ಎಸ್. ಸೂರ್ಯನಾರಾಯಣ ರಾವ್.

ಸಿಐಟಿಯು ರಾಜ್ಯಾಧ್ಯಕ್ಷರೂ ಅಖಿಲ ಭಾರತ ಉಪಾಧ್ಯಕ್ಷರೂ ಆದ ಸೂರಿಯವರ ಕಂಚಿನ ಕಂಠದಿಂದ ಬಂಡವಾಳಿಗರಿಗೆ ಮರ್ಮಾಘಾತ ವಾಗುವಂಥ ವಿಶ್ಲೇಷಣೆ ನಿರರ್ಗಳವಾಗಿ ಹರಿಯಿತು. ವೇದಿಕೆ ಮೇಲಿದ್ದ (ಹಾಗೂ ವೀಕ್ಷಕರ ನಡುವೆ ಇದ್ದಿರಬಹುದಾದ) ಮಾಲಿಕ ಪ್ರತಿನಿಧಿಗಳ ಮುಖ ಹರಳೆಣ್ಣೆ ಕುಡಿದ ಮುಖದಂತಾಗಿತ್ತು.

ಮಾಲಿಕರು ಸಾಧು ಪ್ರಾಣಿಗಳು, ಕಾರ್ಮಿಕರು ಇನ್ನೇನೋ ಎನ್ನುವಂಥ ಅಭಿಪ್ರಾಯವನ್ನು ಮೂಡಿಸುವ ಯತ್ನ ನಡೆದಿದೆ. ಇದು ಸರ್ವಥಾ ಸರಿಯಲ್ಲ ಎಂದರು ಸೂರಿ. ಕೈಗಾರಿಕೆಗಳು ಮುಚ್ಚುವುದಕ್ಕೆ ಕಾರ್ಮಿಕರೇ ಕಾರಣರು ಎಂಬುದು ಬರೀ ಅಪಪ್ರಚಾರದ ಕಂತೆ ಎಂದು ನುಡಿದ ಅವರು ಮುಷ್ಕರಗಳಿಗಿಂತ ಲಾಕೌಟ್‌ನಿಂದ ಕಾರ್ಖಾನೆಗಳು ಮುಚ್ಚಿರುವುದೇ ಹೆಚ್ಚು ಎಂದರು.

ಕಾರ್ಮಿಕರ ಮುಷ್ಕರದಿಂದಾಗಿ ಎಷ್ಟು ಕಾರ್ಖಾನೆಗಳು ಮುಚ್ಚಿವೆ? ಮಾಲಿಕರ ದುರ್ವ್ಯವಹಾರದಿಂದಾಗಿ ಎಷ್ಟು ಮುಚ್ಚಿವೆ ಎಂದು ಭಾರೀ ಚಪ್ಪಾಳೆಯ ನಡುವೆ ಸೂರಿ ಸವಾಲೆಸೆದರು. ಮುಚ್ಚಿರುವ ಲಕ್ಷಾಂತರ ಕಾರ್ಖಾನೆಗಳಲ್ಲಿ ಅಬ್ಬಬ್ಬಾ ಅಂದರೆ ಒಂದು ಹತ್ತಿಪ್ಪತ್ತು ಕಾರ್ಖಾನೆಗಳು ಕಾರ್ಮಿಕರ ಮುಷ್ಕರದಿಂದಾಗಿ ಮುಚ್ಚಿರಬಹುದು ಅಷ್ಟೇ ಎಂದು ಹೇಳಿದರು.

ಕಾರ್ಮಿಕರು ಅಶಿಸ್ತಿನಿಂದ ವರ್ತಿಸಬೇಕು, ಬೇಕಾಬಿಟ್ಟಿ ಮುಷ್ಕರ ಮಾಡಬೇಕು ಎಂದೇನೂ ಸಿಐಟಿಯು ಬೋಧಿಸುವುದಿಲ್ಲ. ನಮ್ಮದು ಎಡ ದುಸ್ಸಾಹಸವಾದಿ ಸಂಘಟನೆಯೂ ಅಲ್ಲ ಎಂದರು.

ಶೋಷಣೆಯ ಜಾಲ ಮುರಿಯಲು ನೆರವಾಗಿ

ಅಪಾರ ಕೆಲಸದ ಆರ್ಡರ್‌ಗಳನ್ನು ಪಡೆಯುವ, ಭಾರಿ ಲಾಭ ಮಾಡುವ ಕಂಪನಿಗಳು ಕೂಡ ಹೇಗೆ ಕಾರ್ಮಿಕರಿಗೆ ಕೆಲಸ ನಿರಾಕರಿಸಿ ವಂಚಿಸುತ್ತಿವೆಯೆಂದು ಅವರು ವಿವರಿಸಿದರು. ಮೈಕೊ, ಬಿಹೆಚ್ಇಎಲ್ ಮೊದಲಾದ ಕಂಪನಿಗಳನ್ನು ಉದಾಹರಿಸಿದರು. ಇಲ್ಲೆಲ್ಲ ಕೆಲಸ ಕಡಿಮೆಯಾಗಲು ಅಥವಾ ಅವುಗಳ ಸರಕು ಮಾರಾಟವಾಗದೇ ಇರಲು ಕಾರ್ಮಿಕರು ಕಾರಣರೇ, ಹೊಣೆಗಾರರೇ ಎಂದು ಪ್ರಶ್ನಿಸಿದರು. ಆರ್ಥಿಕತೆಯಲ್ಲಿನ ಮಂದಗತಿಯೇ ಇದಕ್ಕೆ ಕಾರಣ ಎಂದು ವಿವರಿಸಿದರು. ಕಾಂಗ್ರೆಸ್-ಬಿಜೆಪಿ ಸರಕಾರಗಳ ಆರ್ಥಿಕ ನೀತಿಗಳಿಂದಾಗಿ ಸಣ್ಣ ಕೈಗಾರಿಕೆಗಳು ಹೊಡೆತ ತಿನ್ನುತ್ತಿವೆ ಎಂದು ಹೇಳಿದರು.

ಪೀಣ್ಯ ಕೈಗಾರಿಕೆ ಪ್ರದೇಶದಲ್ಲಿ ಕಾರ್ಮಿಕ ಸಂಘಗಳನ್ನು ಕಟ್ಟಲು ಅವಕಾಶವನ್ನೇ ನೀಡಲಾಗುತ್ತಿಲ್ಲ. ಭವಿಷ್ಯ ನಿಧಿಯನ್ನು ಎಷ್ಟೊ ಉದ್ಯಮದವರು ವಂಚಿಸುತ್ತಾರೆ. ರಾಜ್ಯದಲ್ಲಿ 7 ಲಕ್ಷ ಬೀಡಿ ಕಾರ್ಮಿಕರಿದ್ದು ಅವರಿಗೆ ಲಾಗ್‌ಬುಕ್ ಇಲ್ಲ. ಬೀಡಿ ಕಟ್ಟುವವರಲ್ಲಿ ಮಹಿಳೆಯರೇ ಹೆಚ್ಚು. ಆದರೂ ಹೆರಿಗೆ ರಜೆ ಸಿಗದ ಹಾಗೆ ವಂಚಿಸಲಾಗುತ್ತಿದೆ. ಇವೇ ಮೊದಲಾದ ಅಂಶಗಳು ಮಾಲಿಕರ ಸಂಘದ ಗಮನಕ್ಕೆ ಬಂದಿಲ್ಲವೇ ಎಂದು ನೇರವಾಗಿ ಪ್ರಶ್ನಿಸಿದ ಸೂರಿ, ಶೋಷಣೆಯ ಜಾಲ ಮುರಿಯಲು ನೆರವಾಗಿ ಎಂದು ಮನವಿ ಮಾಡಿದರು.

ಅಂತರ್‍ರಾಷ್ಟ್ರೀಯ ಹಣಕಾಸು ನಿಧಿ(ಐಎಂಎಫ್), ವಿಶ್ವ ಬ್ಯಾಂಕ್ ನೀತಿಗಳನ್ನು ಯಾರೂ ಪ್ರಸ್ತಾವ ಮಾಡದಿರುವುದಕ್ಕೆ ಅವರು ವಿಷಾದ ವ್ಯಕ್ತಪಡಿಸಿದರು. ಐಎಂಎಫ್, ವಿಶ್ವಬ್ಯಾಂಕ್ ಷರತ್ತುಗಳಿಗೆ ಒಪ್ಪಿದರೆ ಸ್ವರ್ಗವೇ ಭೂಮಿಗಿಳಿಯುತ್ತದೆ ಎಂದು ಪ್ರಚಾರ ಮಾಡಲಾಯಿತು. ಹೆಚ್ಚು ಉದ್ಯೋಗ ಸೃಷ್ಟಿಯಾಗುತ್ತದೆ ಎಂದು ಹೇಳಲಾಯಿತು. ಆದರೆ ವಾಸ್ತವ ಸ್ಥಿತಿ ಏನು? ನಿರುದ್ಯೋಗ ಹೆಚ್ಚಿದೆ. ಕಾರ್ಖಾನೆಗಳು ಮುಚ್ಚುತ್ತಿವೆ ಎಂದು ನುಡಿದ ಸೂರ್ಯನಾರಾಯಣ ರಾವ್, ಸುಧಾರಣೆಗಳಿಂದಾಗಿಯೇ ಕೈಗಾರಿಕೆ ಬಿಕ್ಕಟ್ಟು ಉದ್ಭವಿಸಿದೆ ಎಂದರು.

ಕಾರ್ಮಿಕರ ತಲೆಮೇಲೆ ಚಪ್ಪಡಿ ಕಲ್ಲು

ಕಾರ್ಮಿಕರು ಮಾಲಿಕರಲ್ಲಿ ವಿಶ್ವಾಸ ಇಡಬೇಕು, ಪ್ರಧಾನಿ ವಾಜಪೇಯಿ ಮಾತಿನಲ್ಲಿ ವಿಶ್ವಾಸ ಇಡಬೇಕು ಎಂಬ ಮಾಲಿಕರ ಸಂಘದ ಅಧ್ಯಕ್ಷರ ಮಾತಿಗೆ ಕಾರ್ಮಿಕ ಧುರೀಣನ ಪ್ರತಿಕ್ರಿಯೆ.

"ಈ ರೀತಿಯ ವಿಶ್ವಾಸವೆನ್ನುವುದು ಕಾರ್ಮಿಕರು ತಲೆ ಮೇಲೆ ಬಂಡೆಕಲ್ಲು ಹಾಕಿಕೊಂಡಂತೆ"

ಕೈ ಕಲೆಸಿ ಹೋರಾಡಬಹುದು

ಆರ್ಥಿಕ ಮುಗ್ಗಟ್ಟಿನ ಭಾರವನ್ನು ಆಳುವ ವರ್ಗಗಳು, ಬಂಡವಾಳಶಾಹಿಗಳು, ದುಡಿಯುವ ವರ್ಗದ ಜನರ ಮೇಲೆ ವರ್ಗಾಯಿಸಲು ಪ್ರಯತ್ನಿಸುತ್ತಿವೆ. ಇದನ್ನು ಪ್ರತಿರೋಧಿಸಬೇಕು ಎಂದು ಅವರು ಕರೆ ನೀಡಿದರು.

ಸರಕಾರದ ಅಸಮರ್ಪಕ ನೀತಿಗಳಿಂದಾಗಿ ಸಣ್ಣ ಕೈಗಾರಿಕೆಗಳು ಸಮಸ್ಯೆ ಎದುರಿಸುತ್ತಿವೆ. ಇದು ಮಾಲಿಕರಿಗೂ ಕಾರ್ಮಿಕರಿಗೂ ಒಳ್ಳೆಯದಲ್ಲ. ಉದ್ಯಮಗಳ ಉಳಿವಿಗಾಗಿ, ಬೆಳವಣಿಗೆಗಾಗಿ ಇಬ್ಬರೂ ಕೈಜೋಡಿಸಿ ಹೋರಾಡೋಣ ಎಂದು ಸೂರಿ ಹೇಳಿದರು.

ಮಾಲಿಕರು ಕಾರ್ಮಿಕರು ಕಾನೂನುಗಳನ್ನು ಪಾಲಿಸಬೇಕಾದ ವಿಚಾರದಲ್ಲಿ ಪ್ರಬಂಧ ಮಂಡಿಸಿದವರು. ಕಾರ್ಮಿಕ ಕಾನೂನುಗಳ ತಜ್ಞ ಎಸ್.ಎಸ್.ಮೂರ್ತಿ. ಮಾಲಿಕರು ಟ್ರೇಡ್ ಯೂನಿಯನ್‌ಗಳಿಗೆ ವಿರೋಧವಾಗಿಲ್ಲ ಎಂದು ಹೇಳಿ ಕಾರ್ಮಿಕ-ಮಾಲಿಕ ಸೌಹಾರ್ದ ಭಾವವನ್ನು ಪ್ರತಿಪಾದಿಸಲು ಮೂರ್ತಿ ಯತ್ನಿಸಿದರೂ ಬಂಡವಾಳಶಾಹಿಗಳ ಹಿತವೇ ಮುಖ್ಯ ಎಂಬುದನ್ನು ಅವರು ಪ್ರತಿಪಾದಿಸಿದ್ದು ಮಾತುಗಳಿಂದ ವ್ಯಕ್ತವಾಯಿತು.

ಕಾರ್ಮಿಕ ಕಾನೂನಿನ ಅಧ್ಯಾಯ 5 ಉದ್ಯಮ ವಿಸ್ತರಣೆಗೆ ಅಡ್ಡಿಯಾಗಿದೆ. ಮಾಲಿಕರಲ್ಲಿ ಭೀತಿ ಮೂಡಿಸುವ ಕ್ರಮ ಅದಾಗಿದೆ. ಅದು ಇಲ್ಲದಿದ್ದರೇ ಒಳ್ಳೆಯದು ಎಂದು ಹೇಳಿದರು. ಕಾರ್ಮಿಕರು, ನೌಕರರು ಉದ್ಯೋಗಪತಿಗಳ ಜತೆ ಸಹಕರಿಸಬೇಕು ಎಂದರು.

ನೈತಿಕವಾಗಿ ಯಾರೂ ಸುಭಗರಲ್ಲ ಎಂಬ ಅವರ ಮಾತು ತೀರಾ ಆಘಾತಕಾರಿಯಾಗಿತ್ತು. ಲಾಭಕ್ಕಾಗಿ ಮಾಲಿಕರು ಏನನ್ನೂ ಮಾಡಬಹುದು ಎಂದು ಸಮರ್ಥಿಸುವ ಭರದಲ್ಲಿ ಅವರಿಂದ ಈ ಮಾತು 'ಭ್ರಷ್ಟಾಚಾರ ಜಾಗತೀಕ ವಿದ್ಯಮಾನ' ಎಂದು ಹೇಳಿ ಈ ಪಿಡುಗನ್ನು ಸಮರ್ಥಿಸಿಕೊಂಡು ದಿವಂಗತ ಇಂದಿರಾಗಾಂಧಿಯವರ ಮಾತನ್ನು ನೆನಪಿಸದೆ ಇರದು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ವಿ.ಜೆ.ಕೆ.ನಾಯರ್ ಸ್ವಾಗತಿಸಿ ಧನ್ಯವಾದ ಅರ್ಪಿಸಿದರು.

ಕಾಂ. ಬಾಲಾನಂದನ್ ಕರೆ

ಪುಟ 9 ರಿಂದ

ದೊಡ್ಡ ಸ್ಫೂರ್ತಿಯನ್ನೊದಗಿಸಿದೆ.

5 ಅಂಶಗಳ ಬೇಡಿಕೆಗಳ ಪಟ್ಟಿಯ ಮಹತ್ವವನ್ನು ನಿಮಗೆ ವಿವರಿಸಬೇಕಾದ ಅಗತ್ಯವೇನೂ ಇಲ್ಲ. ಇವು ಕೇವಲ ಕಾರ್ಮಿಕರ, ಕಾರ್ಮಿಕ ಸಂಘಗಳ ಬೇಡಿಕೆಗಳನ್ನಷ್ಟೇ ಒಳಗೊಂಡಿಲ್ಲ. ಇದು ರೈತರು, ಕೃಷಿಕೂಲಿಕಾರರ, ನಿರುದ್ಯೋಗಿ ಯುವಕರ, ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಆರ್ಥಿಕವನ್ನು ಭಾದಿಸುತ್ತಿರುವ ವಿಶ್ವಬ್ಯಾಂಕಿನ ಹಿಡಿತ, ಐ.ಎಂ.ಎಫ್ ಮತ್ತು ವಿಶ್ವವ್ಯಾಪಾರ ಸಂಸ್ಥೆ ಅಂದರೆ ನಮ್ಮ ಆರ್ಥಿಕವನ್ನು ಮತ್ತು ಸ್ವಾತಂತ್ರ್ಯವನ್ನು ಬಲಗೊಳಿಸುವ ಅಂಶಗಳನ್ನು ಹೊಂದಿದೆ.

ಆದ್ದರಿಂದ, ಕಾರ್ಮಿಕ ಚಳುವಳಿ ಪ್ರಧಾನ ಸವಾಲೆಂದರೆ ಕೇಂದ್ರ ಸರ್ಕಾರವು ಈ ಐದು ಬೇಡಿಕೆಗಳನ್ನು ಪರಿಗಣಿಸುವಂತೆ ಬಲಿಷ್ಠ ಚಳುವಳಿಯನ್ನು ಮುಂದೆಕೊಂಡೊಯ್ಯುವುದಾಗಿದೆ. ಕೇಂದ್ರ ಸರ್ಕಾರವು ತನ್ನ ದಾಳಿಗಳನ್ನು ಮುಂದುವರೆಸುತ್ತಿದ್ದಾಗ್ಯೂ ಕೆಲವು ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರು ಅಖಿಲ ಭಾರತ ಮುಷ್ಕರವನ್ನು ಸಂಘಟಿಸಲು ಹಿಂದೆ ಮುಂದೆ ನೋಡುತ್ತಿದ್ದಾರೆ. ಹಾಗಿದ್ದರೂ ಐಕ್ಯ ಮತ್ತು ಪರಿಣಾಮಕಾರಿ ಕಾರ್ಯಾಚರಣೆಯನ್ನು ಮುಂದುವರೆಸಲು ಐಕ್ಯತೆಯನ್ನು ಕಾದುಕೊಳ್ಳಬೇಕಿದೆ.

ಚಿತ್ರಾವತಿ ನೀರು ....

ಪುಟ 4 ರಿಂದ

ಕಿ.ಮೀ ದೂರದಲ್ಲಿ ಯೋಜಿತವಾಗಿದೆ.

4. ನಂದಿ ಬೆಟ್ಟದ ತಪ್ಪಲಿನಿಂದ ಆಂಧ್ರ ಬುಕ್ಕಪಟ್ನಂ ಕೆರೆಗೆ ನೀರು ಹರಿಯುವ ಚಿತ್ರಾವತಿಯು ಕರ್ನಾಟಕದಲ್ಲಿ ಹಿರಿಯುವ ಉದ್ದಕ್ಕೂ ಎಲ್ಲೂ ಅಣೆಕಟ್ಟು ಈವರೆಗೆ ಕಟ್ಟಿಲ್ಲ.
5. ಮುಖ್ಯವಾಗಿ ಚಿತ್ರಾವತಿ ಅಣೆಕಟ್ಟು ನಿರ್ಮಿಸುವ ಉದ್ದೇಶ ಕುಡಿಯುವ ನೀರು ಸರಬರಾಜಿಗಾಗಿ. ಚಿತ್ರಾವತಿ ಅಂಣೆಕಟ್ಟಿನಲ್ಲಿ ನಿಲ್ಲುವ 1 ಟಿಎಂಸಿ ನೀರಲ್ಲಿ ಅರ್ಧ ಟಿಎಂಸಿ ನೀರು ಕುಡಿಯುವುದಕ್ಕಾಗಿ, ಅರ್ಧ ಟಿಎಂಸಿ ನೀರು ನೀರಾವರಿಗೆ ಆದರಿಂದ ಅರ್ಧ ಟಿಎಂಸಿ ನೀರು ಕುಡಿಯುವುದಕ್ಕೆ ಉಪಯೋಗಿಸುವುದರಿಂದ ಆಂಧ್ರ ಪ್ರದೇಶದ ಸರ್ಕಾರ ವಿರೋಧ ಮಾಡಲಿಕ್ಕಾಗದು.

ಆದರೆ, ಆಂಧ್ರ ಪ್ರದೇಶದ ಈ ಭಾಗದ ಜನತೆ ಆತಂಕಪಡಬೇಕಾದ ಅವಶ್ಯಕತೆ ಇರುವುದಿಲ್ಲ. ಅಣೆಕಟ್ಟಿನಿಂದ ಆಂಧ್ರದ ಬುಕ್ಕಪಟ್ನಂ ಕೆರೆ ಬತ್ತಿಹೋಗುತ್ತದೆ. ಹತ್ತಿರವಿರುವ ಕೋಡೂರು ಕೋಡಿಕೊಂಡ ಕೆರೆಗಳು ಬತ್ತಿಹೋಗುತ್ತವೆ ಎಂಬ ಆತಂಕ ಸರಿಯಾದುದಲ್ಲ, ಏಕೆಂದರೆ, ಅಣೆಕಟ್ಟಿನ ಕೋಡಿಯಿಂದ ಬಿಡುಗಡೆಯಾಗುವ ನೀರು ಮತ್ತೆ ನದಿಗೆ ಹೋಗುವುದರಿಂದ ನದಿ ಬತ್ತಿಹೋಗುವ ಸಾಧ್ಯತೆಯಿಲ್ಲ. ನದಿ ತುಂಬಿ ಹರಿದಾಗ 2-3 ದಿನಗಳಲ್ಲೇ ಅಣೆಕಟ್ಟು ತುಂಬುವುದರಿಂದ ನಂತರ ಬರುವ ನೀರೆಲ್ಲವೂ ಆಂಧ್ರಕ್ಕೆ ಹೋಗುವುದು ಅಣೆಕಟ್ಟಿನಲ್ಲಿ ನೀರು ತುಂಬಿದರೆ, ಭೂಮಿಯಲ್ಲಿ ಇಂಗುವ ನೀರು ತಗ್ಗುಪ್ರದೇಶದ ಕಡೆಗೆ ಹೋಗುವುದರಿಂದ ಆಂಧ್ರದ ಗಡಿ ತುಂಬಾ ಹತ್ತಿರವಿರುವುದರಿಂದ ಜೊತೆಗೆ ಆಂಧ್ರದ ಭೂಮಿಗಳು ತಗ್ಗಿನಲ್ಲಿ ಇರುವುದರಿಂದ ಕರ್ನಾಟಕದ ಗಡಿಗೆ ಅಂಟಿಕೊಂಡಿರುವ ಭಾವಿಗಳಿಗೆ ಒಳ್ಳೆಯ ನೀರು ಬರುವುದರಿಂದ ಅದು ಆಂಧ್ರಕ್ಕೆ ಅನುಕೂಲವಾಗುವುದು ಅಣೆಕಟ್ಟಿನಿಂದ ಸೋರುವ ನೀರು ತಾಯಿ ನದಿಗೆ ಹೋಗುವುದರಿಂದ ನಿರಂತರವಾಗಿ ನೀರು ಹರಿದು ಹತ್ತಿರದ ಆಂಧ್ರದ ನೀರಾವರಿಗೆ ಯಾವುದೇ ತೊಂದರೆಯಾಗುವುದರ ಬದಲು ಅನುಕೂಲವಾಗುತ್ತದೆ. ಇದೆಲ್ಲವನ್ನೂ ಅವರಿಗೆ ಮನವರಿಕೆ ಮಾಡಿಕೊಡುವ ನಾಯಕರ ಕೊರತೆ ಇರುವುದು ಎದ್ದು ಕಾಣುತ್ತಿದೆ.

ಅಣೆಕಟ್ಟು ನಿರ್ಮಾಣವಾಗಬೇಕಾದರೆ ಮಾರ್ಗ ಯಾವುದು?

ಈಗ ಉಳಿದಿರುವುದು ಒಂದು ಮಾರ್ಗವೆಂದರೆ, ಹೋರಾಟ. ಈ ಭಾಗದ ಜನರೆಲ್ಲಾ ಎಚ್ಚೆತ್ತುಕೊಂಡು ನಿರಂತರವಾಗಿ ಪಕ್ಷಭೇದ ಮರೆತು ಕಾಮಗಾರಿ ಆರಂಭವಾಗುವ ತನಕ ಹೋರಾಟ ಮುಂದುವರಿಸುವುದೊಂದೇ ಸರಿಯಾದ ಮಾರ್ಗವೆಂದು ತಾ। 29-7-2001 ರಂದು ಬಾಗೇಪಲ್ಲಿಯಲ್ಲಿ ಚಿತ್ರಾವತಿ ಅಣೆಕಟ್ಟು ಹೋರಾಟ ಸಮಿತಿಯನ್ನು ಈ ಭಾಗದ ಜನರೇ ಎಚ್ಚೆತ್ತುಕೊಂಡು ರಚನೆ ಮಾಡಿದ್ದಾರೆ. ಆ ಸಮಿತಿಯ ಸಂಚಾಲಕರಾಗಿ ಮಾಜಿ ಸಿಪಿಐ(ಎಂ) ಶಾಸಕರಾದ ಜಿ.ವಿ. ಶ್ರೀರಾಮರೆಡ್ಡಿಯವರನ್ನು ಆಯ್ಕೆ ಮಾಡಲಾಗಿದೆ. ಪರಗೋಡು, ಗಂಟಂವಾರಿಪಲ್ಲಿ, ದೇವರಗುಡಿಪಲ್ಲಿ ಗ್ರಾಮ ಪಂಚಾಯ್ತಿಗಳ ಮತ್ತು ಬಾಗೇಪಲ್ಲಿ ಪಟ್ಟಣ ಪಂಚಾಯ್ತಿ ಸದಸ್ಯರನ್ನೊಳಗೊಂಡು ಸುಮಾರು ಐವತ್ತು ಜನರ ಒಂದು ಸಮಿತಿಯನ್ನು ಆಯ್ಕೆ ಮಾಡಲಾಗಿದೆ. ಅದರಲ್ಲಿ ಆಗಾಗ್ಗೆ ಸೇರುತ್ತಾ ಹೋರಾಟ ರೂಪುರೇಷೆಗಳನ್ನು ತಯಾರು ಮಾಡಲು 30 ಜನರ ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸಲಾಗಿದೆ. ಇದರಲ್ಲಿ ಮುಖ್ಯವಾಗಿ ಸಿಪಿಐ(ಎಂ) ಪಕ್ಷದ ತಾಲ್ಲೂಕು ಕಾರ್ಯದರ್ಶಿ ವಿ. ವೆಂಕಟಸ್ವಾಮಿರೆಡ್ಡಿ, ಡಿ.ವೈ.ಎಫ್.ಐ ನಿಂದ ಭಾಸ್ಕರರೆಡ್ಡಿ, ಮಹಮದ್ ಅಕ್ರಂ, ಎಸ್.ಎಫ್.ಐ. ನಿಂದ ವೆಂಕಟೇಶ್, ಕಾಂಗ್ರೆಸ್‌ನ ಮಾಜಿ ಜಿಲ್ಲಾ ಪಂಚಾಯ್ತಿ ಸದಸ್ಯರಾದ ಜಿ.ವಿ. ಬಾಬುರೆಡ್ಡಿ, ಜನತಾದಳ (ಸಂಯುಕ್ತ)ದ ಅಧ್ಯಕ್ಷ ನರಸಿಂಹರೆಡ್ಡಿ, ಪಟ್ಟಣ ಪಂಚಾಯ್ತಿಯ ಸಿಪಿಐ(ಎಂ) ಸದಸ್ಯರಾದ ಓಬಳರಾಜು, ಕೃಷ್ಣಪ್ಪರವರುಗಳು ಪಾಲ್ಗೊಂಡಿದ್ದರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾಪರಿಷತ್ ಸಿ.ಪಿ.ಐ(ಎಂ) ಸದಸ್ಯರಾದ ಭಾರತೀದೇವಿರವರು ವಹಿಸಿದ್ದರು.

ಕಾರ್ಯನಿರ್ವಾಹಕ ಸಮಿತಿಯು ತಾ। 4-8-2001 ರಂದು ಸಭೆ ಸೇರಿ ಸುಧೀರ್ಘವಾಗಿ ಚರ್ಚಿಸಿ 27-8-2001 ರಂದು ಧರಣಿ ಸತ್ಯಾಗ್ರಹವನ್ನು ಪ್ರಾರಂಭ ಮಾಡಿ ಸರ್ಕಾರದಿಂದ ಖಚಿತವಾದ ಭರವಸೆ ದೊರಕುವ ತನಕ ಹೋರಾಟವನ್ನು ಮುಂದುವರಿಸುವ ತೀರ್ಮಾನವನ್ನು ಮಾಡಲಾಯಿತು. ಆ ಮೊದಲು ಕರಪತ್ರಗಳ ಮೂಲಕ ಪ್ರಚಾರ ನಡೆಸಿ ಕಾರ್ಯನಿರ್ವಾಹಕ ಸದಸ್ಯರು ಎಲ್ಲಾ ಹಳ್ಳಿಗಳಿಗೆ ಬೇಟಿ ಕೊಟ್ಟು ಜನರನ್ನು ಹೋರಾಟದಲ್ಲಿ ಭಾಗವಹಿಸಲು ಪ್ರಚಾರ ನಡೆಸಬೇಕೆಂದು ತೀರ್ಮಾನಿಸಲಾಯಿತು.

ಚಿತ್ರಾವತಿ ಬಾಗೇಪಲ್ಲಿ ಜನತೆಯ ಅಳಿವು ಉಳಿವಿನ ಪ್ರಶ್ನೆಯಾಗಿದೆ. ಅದಕ್ಕೆ ಜನತೆಯ ಬೆಂಬಲ ತುಂಬಾ ಅವಶ್ಯವಾಗಿದೆ. ಜನತೆ ಕೂಡಾ ಒಕ್ಕೊರಲಿನಿಂದ ಬೆಂಬಲ ನೀಡುತ್ತದೆ ಎಂದು ಆಶಿಸೋಣ. ಸರ್ಕಾರ ಇದಕ್ಕೆ ಗಮನ ಕೊಟ್ಟು ಆದಷ್ಟು ಬೇಗ ಕಾಮಗಾರಿ ಪ್ರಾರಂಭಿಸಲಿ ಎಂದು ಆಶಿಸೋಣ.

ಸಿನಿಮಾ


'ಲಗಾನ್' ಮತ್ತು 'ಗದ್ದಾರ್' ಎರಡೂ ಸೂಪರ್‌ಹಿಟ್ ಫಿಲಂಗಳೇಕಾದವು?

ಶರತ್‌ಚಂದ್ರ

'ಲಗಾನ್' ಮತ್ತು 'ಗದ್ದರ್' ಎರಡೂ ಫಿಲಂಗಳು ಈಗಾಗಲೇ ಹಲವು ವಾರಗಳ ಸಫಲ ಪ್ರದರ್ಶನ ಕಂಡಿದ್ದು, ಇನ್ನೂ ಚೆನ್ನಾಗಿ ಓಡುತ್ತಾ 'ಸೂಪರ್ ಹಿಟ್' ಫಿಲಂ ಅನ್ನಿಸಿಕೊಂಡಿವೆ. ಈಗಾಗಲೇ ಕೋಟಿಗಟ್ಟಲೆ ಹಣ ಮಾಡಿವೆ. (ನೂರು ಕೋಟಿ ಗಳಿಕೆ ದಾಟಿವೆ). ಎರಡೂ ಫಿಲಂಗಳು ಭರಾಟೆಯ ಪ್ರಚಾರ ಪಡೆದಿದ್ದರೂ, 'ಫಾರ್ಮುಲಾ ಫಿಲಂ'ಗಳಿಂದ ಭಿನ್ನವಾಗಿದ್ದೂ ಸಫಲತೆ ಪಡೆದಿದ್ದು, ಹಲವು ಇತರ 'ಫಾರ್ಮುಲಾ ಫಿಲಂ'ಗಳು ಗೋತಾ ಹೊಡೆದಿದ್ದು ಮಾಧ್ಯಮಗಳಲ್ಲಿ ಚರ್ಚೆಗೆ ಒಳಗಾಗಿವೆ. ಹಲವರು ಈ ಎರಡೂ ಫಿಲಂಗಳು 'ಸೂಪರ್‌ಹಿಟ್' ಆಗಿರುವುದು ಶುಭಸೂಚನೆ. ಜನರ ಅಭಿರುಚಿ ಬದಲಾಗುತ್ತಿರುವ ಮತ್ತು ಉತ್ತಮ ಮೌಲ್ಯಗಳ, ಉತ್ತಮ ರೀತಿಯಲ್ಲಿ ಮಾಡಿದ ಗಂಭೀರ ಚಿತ್ರಗಳನ್ನು ಜನ ಸ್ವೀಕರಿಸುತ್ತಾರೆ ಎಂಬುದರ ಶುಭ ಸೂಚನೆ ಎಂದು ಅವರ ಅಂಬೋಣ. ಇನ್ನೂ ಕೆಲವು ಬಾಲಿವುಡ್ ಜನ 'ಸೂಪರ್‌ಹಿಟ್'ನ ಹೊಸ ಫಾರ್ಮುಲಾವನ್ನು ಇವು ಪ್ರತಿನಿಧಿಸುತ್ತವೆ ಎನ್ನುತ್ತಾರೆ. ಅವರ ಪ್ರಕಾರ 'ಚಾರಿತ್ರಿಕ ದೇಶಪ್ರೇಮ + ಬಿಗಿ ನಿರ್ದೇಶನ/ ನಟನೆ/ ತಾಂತ್ರಿಕ ಮೌಲ್ಯಗಳು' ಹೊಸ ಫಾರ್ಮುಲಾ.

ಹೊಸ 'ಸೂಪರ್‌ಹಿಟ್' ಫಾರ್ಮುಲಾ?

ಯಾವುದೇ 'ಸೂಪರ್ ಹಿಟ್' ಫಿಲಂ ಸೂಪರ್ ಹಿಟ್ ಆಗುವುದಕ್ಕೆ ಫಿಲಂನ ಗುಣಮಟ್ಟ, ಪ್ರಚಾರ, ಉದ್ದೇಶಕ್ಕೂ ಮೀರಿದ ಆಳವಾದ ಕಾರಣಗಳು ಇರುತ್ತವೆ. ಯಾವುದೇ ಸಿದ್ಧ 'ಫಾರ್ಮುಲಾ'ಗಳಿಂದ ಸೂಪರ್‌ಹಿಟ್ ಫಿಲಂಗಳನ್ನು ಮಾಡಲು ಆಗುವುದಿಲ್ಲ. ಈ ರೀತಿ ಮಾಡಲು ಹೋಗಿ 'ಕೈಸುಟ್ಟು'ಕೊಂಡ ಫಿಲಂ ನಿರ್ಮಾಪಕರು ಈ ಬಗ್ಗೆ ಹೇಳುತ್ತಾರೆ. ಸಾಮಾನ್ಯವಾಗಿ ಸೂಪರ್‌ಹಿಟ್ ಫಿಲಂಗಳು ಆ ಅವಧಿಯಲ್ಲಿ ಜನರ 'ಮೂಡ್' ಬಗ್ಗೆ ಒಂದಲ್ಲ ಒಂದು ರೀತಿಯಲ್ಲಿ ಹೇಳುತ್ತವೆ. ಈ ಮೂಡ್ ಅನ್ನು ಬಾಲಿವುಡ್ ಜನ, ಮಾಧ್ಯಮಗಳು ಸೂಪರ್‌ಹಿಟ್ ಮಾಡುವ ಹೊಸ 'ಫಾರ್ಮುಲಾ' ಅರಸುವ ದೃಷ್ಟಿಯಿಂದ ನೋಡುತ್ತದೆ. ಈ ಮೂಡ್ ಅನ್ನು ಅರ್ಥಮಾಡಿಕೊಳ್ಳುವುದು ಪ್ರಗತಿಪರ ಸಾಂಸ್ಕೃತಿಕ ಮೌಲ್ಯಗಳನ್ನು ಜನ ಮೈಗೂಡಿಸಿಕೊಳ್ಳಬೇಕು ಎಂಬ ಕಾಳಜಿ ಇರುವವರಿಗೂ ಅಷ್ಟೇ ಮುಖ್ಯ. ಈ ಲೇಖನ 'ಲಗಾನ್' ಮತ್ತು 'ಗದ್ದರ್' ಇವೆರಡೂ ಸೂಪರ್ ಹಿಟ್ ಫಿಲಂಗಳೇಕಾದವು ಎಂಬ ಪ್ರಶ್ನೆಯನ್ನು ಈ ದೃಷ್ಟಿಯಿಂದ ನೋಡಲು ಪ್ರಯತ್ನಿಸುತ್ತದೆ. ಈ ಎರಡೂ ಫಿಲಂಗಳು ಯಾವ ಮೌಲ್ಯಗಳನ್ನು



ಪ್ರತಿನಿಧಿಸುತ್ತವೆ, ಜನರ ಯಾವ ತುಡಿತಗಳಿಗೆ ಸ್ಪಂದಿಸಿವೆ ಎಂಬುದು ಲೇಖನದ ಮುಖ್ಯ ಕಾಳಜಿ.

ಹಲವರು ಅಂದುಕೊಳ್ಳುವಂತೆ ಇವೆರಡೂ ಒಂದೇ ರೀತಿಯ ಮೌಲ್ಯಗಳನ್ನು ಪ್ರತಿನಿಧಿಸುವುದಿಲ್ಲ. ಇವೆರಡೂ ಒಂದು ನಿರ್ದಿಷ್ಟ ಚಾರಿತ್ರಿಕ ಅವಧಿಯ ಮೇಲೆ ಆಧಾರಿಸಿದ್ದು ಮತ್ತು ಸರಿಸುಮಾರು ನೈಜ ಘಟನೆ ಮೇಲೆ ಆಧಾರಿತ ಎನ್ನುವುದಷ್ಟೇ ಇವುಗಳ ಸಾಮಾನ್ಯ ಅಂಶ. ಈ ಫಿಲಂಗಳ 'ದೇಶಪ್ರೇಮ'ದ ನಿಲುವುಗಳು ಬಹಳ ಭಿನ್ನವಾದವು. ಈ ರೀತಿ ಎರಡು ಫಿಲಂಗಳ ಹಿಂದೆ ಒಂದು 'ಸೂಪರ್‌ಹಿಟ್' ಫಾರ್ಮುಲಾ ಹುಡುಕಹೋಗುವುದು ಮೂರ್ಖತನ ಅನ್ನಿಸುತ್ತದೆ. ಇವೆರೆಡರ ನಡುವೆ 'ಲಗಾನ್' ಹೆಚ್ಚು ಜನಪರ, ಪ್ರಗತಿಪರ, ಸಕಾರಾತ್ಮಕ ಮೌಲ್ಯಗಳನ್ನು ಹೊಂದಿದೆ. 'ಗದ್ದರ್' ಒಟ್ಟಾರೆಯಾಗಿ ಉನ್ಮಾದ, ಉದ್ರೇಕಕಾರಿ 'ಕೋಮುವಾದಿ' ವಾಸನೆಯ ದೇಶಪ್ರೇಮದ ಮೌಲ್ಯಗಳನ್ನು ಪ್ರತಿನಿಧಿಸಲು ಪ್ರಯತ್ನಿಸಿದೆ. (ಫಿಲಂಗಳ ವಿಮರ್ಶೆಗೆ ಐಕ್ಯರಂಗ ಜುಲೈ 15 ಮತ್ತು …… ಸಂಚಿಕೆಗಳನ್ನು ನೋಡಿ)

ಜನರ ತುಡಿತಗಳಿಗೆ ಸ್ಪಂದಿಸಿದ 'ಲಗಾನ್'

ತಮ್ಮ ಸಮಸ್ಯೆಗಳನ್ನು ಪರಿಹರಿಸಲು ಹೋರಾಟ, ಸಮಾನ ಹಿತಾಸಕ್ತಿ ಇರುವವರ ನಡುವೆ ಒಗ್ಗಟ್ಟು, ಅತ್ಯಂತ ಪ್ರಬಲ ಎದುರಾಳಿ (ಆಗಿನ ಜಗತ್ತಿನ ಅತ್ಯಂತ ಪ್ರಬಲವಾದ ಸಾಮ್ರಾಜ್ಯಶಾಹಿ) ಯನ್ನು ಎದುರಿಸಿ ಗೆಲ್ಲುವ ಛಲ - ಮುಂತಾದ ಪ್ರಗತಿಪರ ಮೌಲ್ಯಗಳನ್ನು 'ಲಗಾನ್' ಹೊಂದಿದೆ. ಇದು ಅದರ ಜನಪ್ರಿಯತೆಗೆ ಕಾರಣವಾಗಿದೆ ಎಂಬುದಕ್ಕೆ ಸಂಶಯವಿಲ್ಲ. ಫಿಲಂಗಳ ಸಾಮಾನ್ಯ ಪ್ರೇಕ್ಷಕ ಉತ್ತಮ ಪ್ರಗತಿಪರ ಮೌಲ್ಯಗಳನ್ನು ಸ್ವೀಕರಿಸಲಾಗದಷ್ಟು 'ಕೆಟ್ಟು' ಹೋಗಿದ್ದಾನೆ. ಕೀಳುದರ್ಜೆಯ ಸೆಕ್ಸ್, ಹಿಂಸಾಚಾರ, ಕೆಟ್ಟ ಜೋಕುಗಳಿಗೆ ಮಾತ್ರ ಸ್ಪಂದಿಸುವ ಕೆಳಗಿನ ಸಾಂಸ್ಕೃತಿಕ ಮಟ್ಟಕ್ಕೆ ಹೋಗಿದ್ದಾನೆ ಎಂದು ವಾದಿಸುವವರ ಕೆನ್ನೆಗೆ ಹೊಡೆದು ಬಾಯಿ ಮುಚ್ಚಿಸಿದೆ 'ಲಗಾನ್' ನ ಜನಪ್ರಿಯತೆ. 'ಲಗಾನ್' ಯಾವುದೇ ವಿಭಾಗದಲ್ಲೂ ಯಾವುದೇ ರೀತಿಯ ವಿವಾದಕ್ಕೆ ಒಳಗಾಗದೆ, ಸಮಾನ ಮೆಚ್ಚಿಗೆ ಗಳಿಸಿದೆ. ವಿಶಾಲ ತಳಹದಿಯ ಸಾಮ್ರಾಜ್ಯಶಾಹಿ-ವಿರೋಧಿ ದೇಶಪ್ರೇಮವನ್ನು ಒತ್ತಿ ಹೇಳುವುದು ಇದಕ್ಕೆ ಕಾರಣವಿರಬಹುದು. ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಹೋರಾಟ, ಒಗ್ಗಟ್ಟು, ಛಲದ ಅಗತ್ಯ ಕಂಡುಕೊಳ್ಳುತ್ತಿರುವ ಇಂದಿನ ಸಾಮಾನ್ಯ ಜನ, ತಮ್ಮನ್ನು 'ಲಗಾನ್' ನ ಚಂಪಾನೇರ್‌ನ ರಾಜನೊಂದಿಗೆ ಗುರುತಿಸಿಕೊಂಡಿದ್ದಾರೆ. ಈ ರೀತಿ 'ಲಗಾನ್' ಜನರ ತುಡಿತಕ್ಕೆ ಸ್ಪಂದಿಸಿದೆ. ಆಳುವವರು ಹೋರಾಟವಿಲ್ಲದೆ ಜನರ ಹಿತಾಸಕ್ತಿ-ಪರ ಯಾವ ಕ್ರಮ ತೆಗೆದುಕೊಳ್ಳುವುದಿಲ್ಲ. ಇದು ಒಬ್ಬ 'ಸೂಪರ್‌ಹಿರೋ' ದಿಂದ ಸಾಧ್ಯವಿಲ್ಲ. ಸಮಾನ ಹಿತಾಸಕ್ತಿಯುಳ್ಳವರನ್ನು ಒಗ್ಗೂಡಿಸಿ ಸಂಘಟಿಸಬೇಕು. ಅದೇ ಸಮಯದಲ್ಲಿ ದೂರದರ್ಶಿತ್ವ, ಸ್ಪಷ್ಟಗುರಿ, ಛಲ ಇರುವವರು ಇದಕ್ಕೆ ಚಾಲನೆ ಕೊಡಬೇಕು. ಆಗ ಜನ ಸೇರಿಕೊಳ್ಳಲು ಆರಂಭಿಸುತ್ತಾರೆ. ಜನ ವಿಭಾಗಗಳ ತೊರೆ, ನದಿ ಸೇರಿದಂತೆ ಸಾಗರವಾಗುತ್ತದೆ. ಆಳುವವರ ಒಂದು ವಿಭಾಗ ಸಹ ಜನರಿಗೆ ಸಹಾಯ ಮಾಡಬಹುದು, ಸೇರಿಕೊಳ್ಳಬಹುದು. 'ಜನತಾ ಪ್ರಜಾಪ್ರಭುತ್ವ ಐಕ್ಯರಂಗ' ನಿರ್ಮಾಣದ ಪ್ರಕ್ರಿಯೆಯನ್ನು ಮತ್ತು ಆ ಮೂಲಕ ಬದಲಾವಣೆಯ ಸಾಧ್ಯತೆಯನ್ನು ನವಿರಾಗಿ ತೋರಿಸುವುದು 'ಲಗಾನ್' ನಿರ್ದೇಶಕ, ನಿರ್ಮಾಪಕರ ಉದ್ದೇಶವಲ್ಲದಿರಬಹುದು. ಆದರೆ ಜನ ಅದರ ಹೊಳಹನ್ನು ಕಂಡಿದ್ದಾನೆ ಫಿಲಂನಲ್ಲಿ. ಪುಳಕಿತರಾಗಿದ್ದಾರೆ.

'ಲಗಾನ್' ನ ಮಿತಿಗಳು

'ಲಗಾನ್' ನ ಸಫಲತೆಯ ಹಿಂದೆ ಇತರ ಹಲವು ಅಂಶಗಳೂ ಇವೆ. ಜನರ ಹಿತಾಸಕ್ತಿಗೆ ನಡೆದ ಸಾಮ್ರಾಜ್ಯಶಾಹಿ-ವಿರೋಧದ ಅಧ್ಯಾಯದ ಹಲವು ಹೋರಾಟಗಳಲ್ಲಿ ನೈಜ ಘಟನೆಗಳಿಗೆ ಹುಡುಕುವಾಗ ಅತ್ಯಂತ 'ಸುರಕ್ಷಿತ' ಕಥೆಯನ್ನು ಆರಿಸಲಾಗಿದೆ. ಆರಿಸಲಾದ ನೈಜ ಘಟನೆ ಇಂದಿನ ಆಳುವವರನ್ನಾಗಲಿ, ಇಂದಿನ ಸಾಮ್ರಾಜ್ಯಶಾಹಿಗಳನ್ನಾಗಲಿ 'ಬೆದರಿಸ'ದಂತೆ ಎಚ್ಚರಿಕೆ ವಹಿಸಿದೆ. 'ಕ್ರಿಕೆಟ್ ಪೈಪೋಟಿ' ಯಾರನ್ನು 'ಬೆದರಿ'ಸುವುದಿಲ್ಲ. ಅದೇರೀತಿಯ ನಮ್ಮ ಸಮಾಜದ ಒಳಗಿನ ತೀವ್ರ ವರ್ಗ ವಿಭಜನೆಯನ್ನು'ಬೆದರಿಕೆ' ಹುಟ್ಟಿಸದ ಮಿತಿಯೊಳಗೆ ಇಡಲಾಗಿದೆ. ಭಾರತದ ಆಳುವ ವರ್ಗವನ್ನು ಪ್ರತಿನಿಧಿಸುವ ರಾಜನಿಗೂ ಜನರಿಗೂ ತೀವ್ರ ವೈರುಧ್ಯದ ಚಿತ್ರ ಇಲ್ಲ. ಜನ ಮತ್ತು ರಾಜರ ನಡುವೆಯೂ ತೀವ್ರ ವೈರುಧ್ಯ ಇದೆ ಎಂಬುದನ್ನು ತೇಲಿಸಿಬಿಡಲಾಗಿದೆ. ಈ ರೀತಿಯ ಕಥೆಯ ಆಯ್ಕೆಯ ಮೂಲಕ 'ಲಗಾನ್' ನಮ್ಮ ಆಳುವವರು,



ಸಾಮ್ರಾಜ್ಯಶಾಹಿ, ಆಮೂಲಾಗ್ರ ಬದಲಾವಣೆಗೆ 'ಹೆದರುವ' ಎಲ್ಲರನ್ನು ಕಸಿವಿಸಿಗೊಳಿಸುವುದಿಲ್ಲ. ಜನತಾ ಹೋರಾಟದ ಸಾಮಾನ್ಯ ಪ್ರಕ್ರಿಯೆಯನ್ನು ನವಿರಾಗಿ ಹೇಳುತ್ತಾ 'ಸುರಕ್ಷಿತ ಮಿತಿ'ಗೆ ತನ್ನನ್ನು ಸೀಮಿತಗೊಳಿಸಿಕೊಂಡಿದೆ. ಇದು ಫಿಲಂ ನ ಮಿತಿಯೂ ಹೌದು. ಅದು 'ಸೂಪರ್ ಹಿಟ್' ಆಗಲು ಕಾರಣವೂ ಹೌದು. ಈ 'ಲಕ್ಷ್ಮಣ ರೇಖೆ' ದಾಟಿದ್ದರೆ ಬಹುಶಃ ಪಟ್ಟಭದ್ರ ಹಿತಾಸಕ್ತಿಗಳು ಅವನ್ನು

> **'ಲಗಾನ್' ಮತ್ತು 'ಗದರ್' ಇವೆರಡೂ ಸೂಪರ್‌ಹಿಟ್ ಫಿಲಂಗಳೇಕಾದವು ಎಂಬ ಪ್ರಶ್ನೆಯನ್ನು ಪ್ರಗತಿಪರ, ಸಾಂಸ್ಕೃತಿಕ ಮೌಲ್ಯಗಳ ದೃಷ್ಟಿಯಿಂದ ನೋಡಲು ಪ್ರಯತ್ನಿಸುತ್ತದೆ ಈ ಲೇಖನ. ಈ ಎರಡೂ ಫಿಲಂಗಳು ಯಾವ ಮೌಲ್ಯಗಳನ್ನು ಪ್ರತಿನಿಧಿಸುತ್ತವೆ, ಜನರ ಯಾವ ತುಡಿತಗಳಿಗೆ ಸ್ಪಂದಿಸಿವೆ ಎಂಬುದು ಲೇಖನದ ಮುಖ್ಯ ಕಾಳಜಿ**

ಸೂಪರ್‌ಹಿಟ್ ಆಗಗೊಡುತ್ತಿರಲಿಲ್ಲ. ಅಂತಹ ಫಿಲಂನ ನಿರ್ಮಾಣವೂ ನಮ್ಮ ಬಾಲಿವುಡ್‌ನ ಅಳಿವಿಗೆ ಮೀರಿದ್ದು. 'ಲಗಾನ್' ನ ಸಕಾರಾತ್ಮಕ ಮೌಲ್ಯ, ಮತ್ತು ಅದಕ್ಕೆ ಉತ್ತಮ ಪ್ರತಿಸ್ಪಂದನ ಶುಭ ಸೂಚನೆ ಎಂದು ಅರಿತುಕೊಳ್ಳುತ್ತಲೇ, ಈ ಮಿತಿಯನ್ನು ಗಮನಿಸುವುದು ಮುಖ್ಯ.

ಹೊಸ 'ಸೂಪರ್‌ಹಿಟ್' ಫಾರ್ಮುಲಾ ಹುಡುಕಿದ 'ಗದ್ದರ್'

'ಗದ್ದರ್' ಸೂಪರ್‌ಹಿಟ್ ಆಗಿರುವುದು ಖಂಡಿತ ಶುಭಸೂಚನೆಯಲ್ಲ. 1947 ರ ದೇಶವಿಭಜನೆಯ ಅತ್ಯಂತ ದುರಂತಮಯ ಅಧ್ಯಯನದ ಹಿನ್ನೆಲೆಯಲ್ಲಿ ಗಂಭೀರ ಆದರೂ ಜನಪ್ರಿಯವಾಗಬಲ್ಲ ಚಿತ್ರ ಮಾಡುವುದು ಸುಲಭದ ಮಾತಲ್ಲ. '1947 ಅರ್ಥ್', 'ಹೇರಾಮ್' ಇಂತಹ ಇತ್ತೀಚಿನ ಉತ್ತಮ ಪ್ರಯತ್ನಗಳು. ಆದರೆ ಅವ್ಯಾವು ಸೂಪರ್ ಹಿಟ್ ಆಗುವುದು ಬಿಟ್ಟು ಬಹುಶಃ ಅಸಲನ್ನು ಕಷ್ಟದಲ್ಲಿ ಉಳಿಸಿಕೊಂಡವು ಎನ್ನಬಹುದು. ಈ ಪ್ರಯತ್ನಗಳಿಂದ 'ಪಾಠ' ಕಲಿತು, ಗಂಭೀರ, ಉತ್ತಮ ಚಿತ್ರವಾಗದಿದ್ದರೂ ಪರವಾಗಿಲ್ಲ. ಹೇಗಾದರೂ ಸೂಪರ್‌ಹಿಟ್ ಆಗಬೇಕು ಎಂದು ಹೊರಟಂತಿದೆ 'ಗದ್ದರ್'. ಸೂಪರ್‌ಹಿಟ್‌ನ ಸಾಂಪ್ರದಾಯಿಕ ಫಾರ್ಮುಲಗಳನ್ನೆಲ್ಲಾ ಬಳಸಲಾಗಿದೆ. ಪಾಕಿಸ್ತಾನದ ಪೋಲಿಸ್, ಸೈನ್ಯ ತುಕಡಿಯನ್ನು ಏಕಾಂಗಿಯಾಗಿ ಸದೆಬಡಿಯಬಲ್ಲ ಸೂಪರ್‌ಹಿರೋ, ಆತನ ಪ್ರೇಮಕಥೆಯೇ ಮುಖ್ಯ, ಉಳಿದದ್ದೆಲ್ಲಾ ಗೌಣ. ನಾಟಕೀಯ ಸನ್ನಿವೇಶಗಳ ನಿರ್ಮಾಣ, ಜನರಲ್ಲಿ ಉದ್ರೇಕ, ಉನ್ಮಾದಗೊಳಿಸಬಲ್ಲ ಹಿಂಸೆ, ಅಲ್ಪಸಂಖ್ಯಾತರ (ಮುಸ್ಲಿಮರು) ಮೇಲೆ ಗೂಬೆ ಕೂರಿಸುವುದು, ಅತ್ಯಂತ ಕೆಳದರ್ಜೆಯ ಉದ್ರೇಕಕಾರಿ 'ದೇಶಪ್ರೇಮ' ಇದರ ಸುತ್ತ ಹೆಣೆದಿದೆ 'ಗದ್ದರ್' ತನ್ನ ಫಾರ್ಮುಲಾವನ್ನು. ಉತ್ತಮ ಸಂಗೀತ, ಬಿಗಿ ನಿರ್ದೇಶನ, ಒಳ್ಳೆ ನಟನೆ, ಉತ್ತಮ ತಾಂತ್ರಿಕ ಮೌಲ್ಯಗಳೇ ಇದರ ಉತ್ತಮ ಅಂಶಗಳು. ಉಳಿದದ್ದೆಲ್ಲಾ ನಕಾರಾತ್ಮಕ. ಖಾವಿ ಪಡೆಗಳು (ಮತ್ತು ಆಳುವ ವರ್ಗಗಳು) ಜನರ ಗಮನ ನಿಜವಾದ ಸಮಸ್ಯೆಯಿಂದ ಬೇರೆಡೆ ಸೆಳೆಯಲು ಬಳಸುವ ಕೋಮು ಉನ್ಮಾದ, ತಮ್ಮ ದೇಶ-ವಿರೋಧಿ ಭಾನಗಡಿಗಳನ್ನು ಮುಚ್ಚಿಕೊಳ್ಳಲು ಹಚ್ಚುವ ಉನ್ಮಾದಕಾರಿ, ಉದ್ರೇಕದ, ಆಕ್ರಮಣ 'ದೇಶಪ್ರೇಮ' ದ ಸನ್ನಿವೇಶವನ್ನು ತನ್ನ ಸಫಲತೆಗೆ ಬಳಸಿಕೊಂಡಿದೆ ಈ ಫಿಲಂ. ಆಳುವವರ ಇಂತಹ ಪ್ರಯತ್ನಗಳಿಗೆ ಪೂರಕವಾಗಿದೆ. ಆದರೆ ಜನ ಈ ಫಿಲಂಗೆ ಇಷ್ಟು ಏಕೆ ಸ್ಪಂದಿಸಿದ್ದಾರೆ ಎಂದು ಯಾರಾದರೂ ಪ್ರಶ್ನಿಸಬಹುದು. ಬಿಕ್ಕಟ್ಟಿನಿಂದ ಕಂಗೆಟ್ಟ ಜನತೆ ಇದಕ್ಕೆ ಏನು ಕಾರಣ ಎಂದು ಹುಡುಕಾಟದಲ್ಲಿರುವಾಗ 'ನಿಮ್ಮ ಶತ್ರುಗಳು ಮುಸ್ಲಿಮರು, ಪಾಕಿಸ್ತಾನ' ಎಂಬ ಸರಳ ವಿವರಣೆ ಹಲವು ಬಾರಿ 'ಅಪಿಲ್' ಮಾಡುತ್ತದೆ. ಇಂತಹ 'ಅಪೀಲ್' ಗೆ ಸೀಮಿತವಾಗಿದೆ 'ಗದ್ದಾರ್'. ಇದಕ್ಕಿಂತ ಹೆಚ್ಚಿನ ವಿಶ್ಲೇಷಣೆಗೆ ಅರ್ಹವಾಗಿಲ್ಲ 'ಗದ್ದರ್'. ಮಾಧ್ಯಮ ಸಾಮ್ರಾಜ್ಯಶಾಹಿಯ ಪಾಲು ಇರುವ ದೇಶೀಯ ಮಾಧ್ಯಮ ದೊರೆಗಳಾದ 'ಝೀ ಟೆಲಿಫಿಲಂಸ್' ಇದರ ನಿರ್ಮಾಪಕರು ಎಂದು ನೆನಪಿಸಿಕೊಂಡಾಗ ಇನ್ನೂ ಹೆಚ್ಚಿನ ವಿಶ್ಲೇಷಣೆ ಖಂಡಿತ ಅಗತ್ಯವಿಲ್ಲ. 'ಗದ್ದಾರ್' ಕಪ್ಪು ಹಣ ಬಳಸದ ಎಲ್ಲಾ ಖರ್ಚನ್ನು 'ಚೆಕ್' ಮೂಲಕ ಬಿಳಿ ಹಣ ಬಳಸಿದ ಮೊದಲ ಫಿಲಂ ಎನ್ನಲಾಗಿದೆ. ಅದರ ಬಗ್ಗೆ ಭರಾಟೆ ಪ್ರಚಾರವೂ ನಡೆದಿದೆ. ಕಪ್ಪು ಹಣ ಕೊಡುವ ಭೂಗತದೊರೆಗಳಿಗೂ, ಬಿಳಿ ಹಣ ಕೊಡುವ ಈ ಭೂಮಿಯ ಮೇಲಿನ ದೊರೆಗಳಿಗೂ - ಅವರ ಪಟ್ಟಭದ್ರ ಹಿತಾಸಕ್ತಿಯಲ್ಲಿ ಏನೇನೋ ವ್ಯತ್ಯಾಸವಿಲ್ಲ ಎಂದು ಗೊತ್ತಿರುವವರಿಗೆ ಇದು ಒಂದು ದೊಡ್ಡ ಸುದ್ದಿಯಲ್ಲ.

ಎರಡು ಮಾಡೆಲ್‌ಗಳು

'ಗದರ್' ಮತ್ತು 'ಲಗಾನ್' ಎರಡೂ ಸೂಪರ್‌ಹಿಟ್ ಫಿಲಂಗಳು. ಒಂದು 'ಸೂಪರ್‌ಹಿಟ್' ಫಾರ್ಮುಲಾವನ್ನು ಮೀರಿಯೂ (ಕೆಲವು ಮಿತಿಗಳಿದ್ದರೂ) ಸೂಪರ್‌ಹಿಟ್ ಆಗಿದೆ. ಸೂಪರ್‌ಹಿಟ್ ಆಗುತ್ತಲೇ ಉತ್ತಮ ಮೌಲ್ಯಗಳನ್ನು ಎತ್ತಿ ಹಿಡಿದಿದೆ. ಇನ್ನೊಂದು ಹೊಸ 'ಸೂಪರ್‌ಹಿಟ್' ಫಾರ್ಮುಲಾ ಹುಡುಕಿದೆ. ಆದರೆ ಕೀಳು ಮೌಲ್ಯಗಳನ್ನು ನಿರ್ದಯದಿಂದ ಪೋಷಿಸಿದೆ ಹಣ ಮಾಡಲು. 'ಸೂಪರ್ ಹಿಟ್' ಫಿಲಂ ಮಾಡಲು ಮುಂದಿನ ದಿನಗಳಲ್ಲಿ ಇವೆರಡರ ಕಾಪಿ ಹೊಡೆಯಲಾಗುತ್ತದೆ. ಈ ಎರಡು ಮಾಡೆಲ್‌ಗಳ ನಡುವೆ ತಾಕಲಾಟವೂ ಆಗುತ್ತದೆ. 'ಲಗಾನ್' ಮಾಡೆಲ್ 'ಗದ್ದಾರ್' ಮಾಡೆಲ್‌ನ್ನು ಸೋಲಿಸಬಹುದೇ? ಸೋಲಿಸಲು ಸಾಧ್ಯವಾಗುವ ಎಚ್ಚರ ಜನರಲ್ಲಿ ಮೂಡಿಸುವುದು ನಮ್ಮ ಕೆಲಸವಾಗಬೇಕು.

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್ ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಾಪಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH